ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 14 ಶನಿವಾರ 2023

ಸಂಪುಟ: 43 | ಸಂಚಿಕೆ: 268 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಗುಜರಾತ್‌ನಲ್ಲಿ ಸ್ಯಾಂಟ್ರೋ ರವಿ ಬಂಧನ

● ಪ್ರಕರಣ ದಾಖಲಾಗಿ 11 ದಿನಗಳ ಬಳಿಕ ಅಹಮದಾಬಾದ್ ನಗರದ ಬಳಿ ಸೆರೆ ● ಪೊಲೀಸರ ಕಣ್ತಪ್ಪಿಸಿ ರಾಜ್ಯದ ವಿವಿಧ ಜಿಲ್ಲೆಯಲ್ಲದೆ ತೆಲಂಗಾಣ, ಕೇರಳ, ಮಹಾರಾಷ್ಟ್ರ, ಗುಜರಾತ್ ರೌಂಡ್ ● ಈತನೊಂದಿಗೆ ಸಹಚರರೂ ಬಂಧನ; ಇಂದು ಮೈಸೂರಿಗೆ ಕರೆತರುವ ಸಾಧ್ಯತೆ ● ಮೈಸೂರಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬಂಧನ ವಿವರ ನೀಡಿದ ಎಡಿಜಿಪಿ ಅಲೋಕ್‌ಕುಮಾರ್

2 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಸಿದ್ದರಾಮಯ್ಯನವರಿಗೆ 'ಮನೆ ದೇವರು' ಸೂಚನೆ



ಮಳವಳ್ಳಿ, ಜ.13–ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದರೆ ಕ್ಷೇಮ. ಒಂದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಕಷ್ಟವಾಗುತ್ತದೆ ಎಂದು ಸಿದ್ದರಾಮಯ್ಯ ಅವರ ಮನೆ ದೇವರು ಎನ್ನಲಾದ ಆದಿನಾಡು ಚಿಕ್ಕಮ್ಮ ತಾಯಿ ನುಡಿದಿದೆ. ತಾಲೂಕಿನ ಚೊಟ್ಟನಹಳ್ಳಿ ಗ್ರಾಮದ ▶ 6ನೇ ಪುಟಕ್ಕೆ

ಒಂದೇ ಕ್ಷೇತ್ರದಿಂದ ಸ್ಪರ್ಧೆ

ಹಾಸನ, ಜ.13– ಯಾರು, ಏನೇ ಹೇಳಿದರೂ ನಾನು ಚುನಾವಣೆಗೆ ಒಂದೇ ಕ್ಷೇತ್ರದಿಂದ ಸ್ಪರ್ಧಿಸುವುದು ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ▶ 6ನೇ ಪುಟಕ್ಕೆ



ಸ್ಯಾಂಟ್ರೋ ರವಿ ಹೊಸ ಅವತಾರ ಪ್ರದರ್ಶಿಸಿದ ಎಡಿಜಿಪಿ ಅಲೋಕ್‌ಕುಮಾರ್

ಮೈಸೂರು, ಜ.13(ಎಸ್‌ಬಿಡಿ)– ಪತ್ನಿ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದ ಆರೋಪಿ ಸ್ಯಾಂಟ್ರೋ ರವಿ ಅಲಿಯಾಸ್ ಕೆ.ಎಸ್.ಮಂಜುನಾಥನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅಪರ ಪೊಲೀಸ್ ಮಹಾನಿರ್ದೇಶಕ(ಎಡಿಜಿಪಿ) ಅಲೋಕ್ ಕುಮಾರ್, ಸ್ಯಾಂಟ್ರೋ ರವಿ (51 ವರ್ಷ) ಹಾಗೂ ಆತನ ಸಹಚರರಾದ ರಾಮ್‌ಜೀ(45) ಹಾಗೂ ಸತೀಶ್‌ಕುಮಾರ್ (35)ನನ್ನು ಶುಕ್ರವಾರ ಮಧ್ಯಾಹ್ನ ಗುಜರಾತ್‌ನ ಅಹಮದಾಬಾದ್ ನಗರದ ಬಳಿ ಬಂಧಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧುಸೂದನ್ ಅಲಿಯಾಸ್ ಮಧು ಎಂಬಾತನನ್ನು ಈಗಾಗಲೇ ದಸ್ತಗಿರಿ ಮಾಡಿದ್ದು, ಆತ ನ್ಯಾಯಾಂಗ ▶ 6ನೇ ಪುಟಕ್ಕೆ


> “ಫೋರೆನ್ಸಿಕ್ ಯೂನಿವರ್ಸಿಟಿಯ ಕೆಲಸ ನಿಮಿತ್ತ ಗೃಹ ಸಚಿವರು ಗುಜರಾತ್‌ಗೆ ತೆರಳಿದ್ದರು. ಅವರು ನಿನ್ನೆ ಸಂಜೆಯೇ ಅಲ್ಲಿಂದ ನಿರ್ಗಮಿಸಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಆದರೆ ಸ್ಯಾಂಟ್ರೋ ರವಿ ಮಹಾರಾಷ್ಟ್ರದಿಂದ ಶುಕ್ರವಾರ ಬೆಳಗ್ಗೆ 11ಕ್ಕೆ ಗುಜರಾತ್‌ಗೆ ಪ್ರವೇಶಿಸಿದ್ದಾನೆ. ಇದರಲ್ಲೇನಿದೆ. –ಎಡಿಜಿಪಿ ಅಲೋಕ್‌ಕುಮಾರ್

ಬಂಧನ ವಿಳಂಬವಾಗಿದ್ದೇಕೆ?

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿಗಳು, ಆರೋಪಿ ಸ್ಯಾಂಟ್ರೋ ರವಿ ಬಂಧನ ಏಕೆ ವಿಳಂಬವಾಗುತ್ತಿದೆ, ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ ಎಂದಿದ್ದರು. ಪ್ರಧಾನಮಂತ್ರಿ ಬಂದೋಬಸ್ತ್‌ನಲ್ಲಿದ್ದಾಗಲೂ ಈ ಬಗ್ಗೆ ವಿಚಾರಿಸಿದ್ದರು. ಗೃಹ ಸಚಿವರು ಹಾಗೂ ಡಿಜಿ ಅವರೂ ಆಗಾಗ್ಗೆ ತನಿಖೆಯ ಪ್ರಗತಿ ಕೇಳುತ್ತಿದ್ದರು. ಆದರೆ ಸ್ಯಾಂಟ್ರೋ ರವಿ ಪದೇ ಪದೆ ಕಾರು, ಮೊಬೈಲ್, ಸಿಮ್ ಹಾಗೂ ವಾಸ್ತವ್ಯ ಸ್ಥಳ ಬದಲಿಸುತ್ತಿದ್ದ ಕಾರಣ ಬಂಧನ ವಿಳಂಬವಾಯಿತು. ನಮ್ಮ ಇಲಾಖೆಯ ಕೆಲವರು ತಪ್ಪು ಮಾಡಿರಬಹುದು. ಆದರೆ ನಗರ ಪೊಲೀಸ್ ಆಯುಕ್ತ ರಮೇಶ್ ಬನೋತ್ ನೇತೃತ್ವದಲ್ಲಿ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿ ಆರೋಪಿಯನ್ನು ಹಿಡಿದಿದ್ದಾರೆ. ಪೊಲೀಸ್ ಇಲಾಖೆ ಮೇಲೆ ಜನರಲ್ಲಿ ಅಪನಂಬಿಕೆ ಬರಬಾರದು ಎನ್ನುವ ಕಾರಣಕ್ಕೆ ವಿವರವಾಗಿ ಹೇಳಿದ್ದೇನೆ ಎಂದರು.



ಸ್ಯಾಂಟ್ರೋ ರವಿ ಹೇಗಿದ್ದ...!



ಹೇಗಾದ...!!

15 ಸಿಮ್ ಕಾರ್ಡ್ ಬದಲಾಯಿಸಿ, ವಿಗ್ ತೆಗೆದಿದ್ದ ಸ್ಯಾಂಟ್ರೋ ರವಿ

ಬೆಂಗಳೂರು, ಜ.13–ವೇಶ್ಯಾವಾಟಿಕೆ ದಂಧೆಯ ಕಿಂಗ್‌ಪಿನ್ ಸ್ಯಾಂಟ್ರೋ ರವಿ ಕೊನೆಗೂ ಗುಜರಾತ್‌ನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಈತನಿಗಾಗಿ ತೀವ್ರ ಹುಡುಕಾಟ ನಡೆಸುತ್ತಿದ್ದ ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಲು ರವಿ ಬರೋಬ್ಬರಿ 15 ಸಿಮ್ ಕಾರ್ಡ್‌ಗಳನ್ನು ಬದಲಿಸಿದ್ದ ಎಂದು ಮೂಲಗಳು ತಿಳಿಸಿವೆ.

ಸ್ಯಾಂಟ್ರೋ ರವಿ ವಿರುದ್ಧ ಜನವರಿ 2ರಂದು ಮೈಸೂರಿನ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಣ್ಣ ಸುಳಿವನ್ನೂ ನೀಡದೇ ರಾಜ್ಯ ಬಿಟ್ಟಿದ್ದ ಸ್ಯಾಂಟ್ರೋ ಹುಡುಕಾಟ ಪೊಲೀಸರಿಗೂ ಸವಾಲಾಗಿತ್ತು. ಸುಮಾರು 7 ರಾಜ್ಯಗಳಲ್ಲಿ ಪೊಲೀಸರು ಆತನಿಗಾಗಿ ಹುಡುಕಾಟ ನಡೆಸಿದ್ದು, ▶ 6ನೇ ಪುಟಕ್ಕೆ

ಹಳೇ ಕ್ರಿಮಿನಲ್

ಸ್ಯಾಂಟ್ರೋ ರವಿ ವಿರುದ್ಧ 2005ರಲ್ಲೇ ಗೂಂಡಾ ಆಕ್ಟ್ ದಾಖಲಾಗಿದ್ದು, ಆತ ಹಳೆಯ ಕ್ರಿಮಿನಲ್. ಮೈಸೂರಿನ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾದ ಕೂಡಲೇ ಆತ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತಲೆಮರೆಸಿಕೊಂಡಿದ್ದ. ಆದರೆ ಪೊಲೀಸರು ಬೆನ್ನತ್ತಿರುವುದನ್ನು ತಿಳಿದು ರಾಜ್ಯದಿಂದ ಹೊರಹೋಗಿದ್ದ. ಆತನ ಬೆನ್ನತ್ತಿದಾಗ ಕೇರಳ, ತೆಲಂಗಾಣ, ಮಹಾರಾಷ್ಟ್ರದಲ್ಲಿ ಸಂಚರಿಸಿರುವ ಬಗ್ಗೆ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಎಲ್ಲಾ ಕಡೆಗೂ ನಮ್ಮ ತಂಡಗಳನ್ನು ಕಳುಹಿಸಲಾಗಿತ್ತು. ನಿನ್ನೆ ಮಂತ್ರಾಲಯದಲ್ಲಿ ಕಾಣಿಸಿಕೊಂಡನೆಂಬ ಮಾಹಿತಿ ಮೇರೆಗೆ ಅಲ್ಲಿಗೂ ಅಧಿಕಾರಿಗಳು ತೆರಳಿ, ಹುಡುಕಾಡಿದ್ದರು. ಕೊನೆಗೆ ಗುಜರಾತ್‌ನಲ್ಲಿರುವುದನ್ನು ಖಚಿತಪಡಿಸಿಕೊಂಡು ಅಲ್ಲಿಂದ ಹೊರಹೋಗದಂತೆ ಅಲ್ಲಿನ ಪೊಲೀಸರ ಸಹಕಾರದಿಂದ ಬಂಧಿಸಲಾಯಿತು ಎಂದು ತಿಳಿಸಿದರು.

ವಿದೇಶಕ್ಕೆ ಪರಾರಿ ಯತ್ನ



ಕಲಬುರಗಿ, ಜ.13–ಮಹಿಳೆಗೆ ಮೋಸ ಮಾಡಿ ಪರಾರಿಯಾಗಿರುವ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಗುಜರಾತ್ ಮೂಲಕ ವಿದೇಶಕ್ಕೆ ಪರಾರಿಯಾಗಲು ಯೋಜನೆ ರೂಪಿಸಿರಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅನುಮಾನ ವ್ಯಕ್ತಪಡಿಸಿದರು. ಸ್ಯಾಂಟ್ರೊ ರವಿ ಬಂಧನ ಕುರಿತು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದ ಗಡಿ ದಾಟಲು ಅವನಿಗೆ ಹೇಗೆ ಸಾಧ್ಯವಾಯಿತು. ಯಾರು ಬಿಟ್ಟರು ಈ ಸಂದರ್ಭದಲ್ಲಿ ಹಾಗೆ ಹೋಗಲು ಸಾಧ್ಯವೇ ಬಹುಶಃ ಸ್ಯಾಂಟ್ರೊ ರವಿಯನ್ನು ರಕ್ಷಿಸಲು ಗೃಹಸಚಿವರೇ ಆತನೊಂದಿಗೆ ತೆರಳಿರಬೇಕು ಎಂದು ಆರೋಪಿಸಿದರು.

ಮೈಸೂರು ಮಿತ್ರ ಶನಿವಾರ 14 ಜನವರಿ 2023

ನಕಲಿ ಹಾಲಿನ ಕೂಪನ್‌ಗಳ ಮೂಲಕ ಮಾಲೀಕನಿಗೆ ಲಕ್ಷಾಂತರ ರೂ. ವಂಚನೆ

ನೌಕರ, ಆತನ ಪತ್ನಿ ವಿರುದ್ಧ ಕೇಸ್ ದಾಖಲು

ಕ್ರೈಂ ಬಾಕ್ಸ್

ಮೈಸೂರು, ಜ. 13– ನಕಲಿ ಹಾಲಿನ ಕೂಪನ್‌ಗಳನ್ನು ಮುದ್ರಿಸಿಕೊಂಡು ಅವುಗಳ ಮೂಲಕ ಹಾಲಿನ ವ್ಯಾಪಾರಿಗೆ ಆತನ ನೌಕರ 40–50 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಬಲ್ಲಾಳ್ ಸರ್ಕಲ್‌ನಲ್ಲಿರುವ ನ್ಯೂ ಕಾರ್ನರ್ ಸ್ಟೇಷನರಿ ಅಂಗಡಿ ಮಾಲೀಕ ಎನ್. ಕೃಷ್ಣಮೂರ್ತಿ(63) ವಂಚನೆಗೊಳಗಾದವರಾಗಿದ್ದು, ಇವರ ಬಳಿ ಕಳೆದ 5 ವರ್ಷದಿಂದ ಕೆಲಸ ಮಾಡುತ್ತಿದ್ದ ಚಿನ್ನಗಿರಿಕೊಪ್ಪಲು ನಿವಾಸಿ ಆರ್. ವೆಂಕಟೇಶ್ ಮತ್ತು ಆತನ ಪತ್ನಿ ಮಮತಾ ಆರೋಪಕ್ಕೆ ಗುರಿಯಾಗಿರುವವರು.

ಕೃಷ್ಣಮೂರ್ತಿಯವರು ತಮ್ಮ ಸ್ಟೇಷನರಿ ಅಂಗಡಿಯಲ್ಲಿ, ಹಾಲಿನ ವ್ಯಾಪಾರವನ್ನು ಕೂಡ ಮಾಡುತ್ತಿದ್ದರು. ಕಳೆದ 4 ವರ್ಷದಿಂದ ಪ್ರತಿದಿನ 3ರಿಂದ 3.5 ಸಾವಿರ ರೂ. ಕೊರತೆ ಬರುತ್ತಿತ್ತು. ಇತ್ತೀಚೆಗೆ ಕೃಷ್ಣಮೂರ್ತಿಯವರು ಸೂಕ್ಷ್ಮವಾಗಿ ಗಮನಿಸಿದಾಗ ತಮ್ಮ ಅಂಗಡಿಯಿಂದ ಗ್ರಾಹಕರಿಗೆ ನೀಡುತ್ತಿದ್ದ ಹಾಲಿನ ಕೂಪನ್‌ಗಳಲ್ಲಿ ನಕಲಿ ಕೂಪನ್‌ಗಳು ಕಂಡುಬಂದಿವೆ. ಗ್ರಾಹಕರು ಹಣ ನೀಡಿ ನೌಕರ ವೆಂಕಟೇಶ್‌ನಿಂದ ಕೂಪನ್ ಪಡೆಯುತ್ತಿದ್ದರು. ಹೀಗಾಗಿ 2022ರ ನವೆಂಬರ್ 3ರಂದು ವೆಂಕಟೇಶ್‌ನನ್ನು ವಿಚಾರಿಸಿದಾಗ, ಆತ ಮತ್ತು ಆತನ ಪತ್ನಿ ಮಮತಾ ಸೇರಿ ಶಿವರಾಂಪೇಟೆಯಲ್ಲಿರುವ ಮೂಕಾಂಬಿಕ ಪ್ರಿಂಟಿಂಗ್ ಪ್ರೆಸ್‌ನಲ್ಲಿ ವೆಂಕಟೇಶ್ ಅವರ ಅಂಗಡಿಯ ನಕಲಿ ಕೂಪನ್‌ಗಳನ್ನು ಮುದ್ರಿಸಿದ್ದರು. ಅದಕ್ಕೆ ಮಮತಾ ನಕಲಿ ಸೀಲ್‌ಗಳನ್ನು ಮಾಡಿ ಕೊಡುತ್ತಿದ್ದಳು ಎಂಬುದನ್ನು ವೆಂಕಟೇಶ್ ಒಪ್ಪಿಕೊಂಡಿದ್ದಾನೆ. ಇದೂವರೆಗೂ 40–50 ಲಕ್ಷ ರೂ. ವಂಚಿಸಿದ್ದು, ತನಗೆ ಸಾಲ ಇದ್ದುದ್ದರಿಂದ ಹೀಗೆ ಮಾಡಿದ್ದಾಗಿಯೂ ಆತ ತಿಳಿಸಿ, ಮಾತುಕತೆ ಮೂಲಕ ಬಗೆಹರಿಸಿಕೊಳ್ಳೋಣ ಎಂದು ಒಪ್ಪಿಕೊಂಡಿದ್ದಾಗಿಯೂ ಕೃಷ್ಣಮೂರ್ತಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಆದರೆ, ಇತ್ತೀಚಿಗೆ ವೆಂಕಟೇಶ್ ಹಣ ನೀಡುವುದಿಲ್ಲ, ಏನು ಮಾಡುತ್ತೀಯೋ ಮಾಡಿಕೋ ಎಂದು ದಬಾಯಿಸಿದ್ದಲ್ಲದೇ, ಬೆದರಿಕೆ ಹಾಕುತ್ತಿದ್ದಾನೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವಾಯುವಿಹಾರಕ್ಕೆ ತೆರಳಿದ್ದ ಗೃಹಿಣಿಯ ಮಾಂಗಲ್ಯ ಸರ ಕಳವು

ಮೈಸೂರು, ಜ. 13– ವಾಯು ವಿಹಾರಕ್ಕೆ ತೆರಳಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ವಿಜಯನಗರ 4ನೇ ಹಂತದಿಂದ ವರದಿಯಾಗಿದೆ. ಹೂಟಗಳ್ಳಿ ನಿವಾಸಿ ಶ್ರೀಮತಿ ಮಂಜುಳಾ(57) ಸರ ಕಳೆದುಕೊಂಡವರಾಗಿದ್ದು, ಇವರು ಜನವರಿ 11ರಂದು ಸಂಜೆ 4.15ರ ಸುಮಾರಿನಲ್ಲಿ ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿರುವ ಸುದರ್ಶನ್ ಶಾಲೆಯಿಂದ ವಿಜಯನಗರ 4ನೇ ಹಂತದಲ್ಲಿರುವ ವಿನಾಯಕ ಎನ್‌ಕ್ಲೇವ್‌ಗೆ ಹೋಗುವ ರಸ್ತೆಯಲ್ಲಿ ತೆರಳುತ್ತಿದ್ದಾಗ ಎದುರಿನಿಂದ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಇವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗಳ ಅಪಘಾತ: ಸಾಫ್ಟ್‌ವೇರ್ ಇಂಜಿನಿಯರ್ ಸಾವು

ಸಾಲಿಗ್ರಾಮ, ಜ. 13– ಬೈಕ್‌ಗಳು ಮುಖಾಮುಖಿ ಡಿಕ್ಕಿಯಾಗಿ ಸಾಫ್ಟ್‌ವೇರ್ ಇಂಜಿನಿಯರ್ ಸಾವನ್ನಪ್ಪಿದ ಘಟನೆ ಸಾಲಿಗ್ರಾಮ ತಾಲೂಕು ಹಾಸನ–ಮೈಸೂರು ರಸ್ತೆಯ ಮಂಜನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ. ಬೆಂಗಳೂರಿನ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಹಾಲಿ ವರ್ಕ್ ಫ್ರಂ ಹೋಂ ಮಾಡುತ್ತಿದ್ದ ಸಾಲಿಗ್ರಾಮ ತಾಲೂಕು ಗುಳುವಿನ ಅತ್ತಿಕುಪ್ಪೆ ಗ್ರಾಮದ ಗೋಪಿನಾಥ್ ಅಲಿಯಾಸ್ ಗೋಪಿ(30) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಜನವರಿ 11ರಂದು ತಮ್ಮ ಪಲ್ಸರ್ ಬೈಕ್ (ಕೆಎ 09–ಹೆಚ್‌ಎನ್ 5451)ನಲ್ಲಿ ಮಂಜವಿನಹಳ್ಳಿ ತೋಟದ ಮನೆಯಿಂದ ರಸ್ತೆಗೆ ತೆರಳುತ್ತಿದ್ದಾಗ ಎದುರಿಗೆ ಬಂದ ಫ್ಯಾಷನ್ ಬೈಕ್ (ಕೆಎ 45–ಇಬಿ 0721) ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಫಿ ಕಳವು ಸಂಬಂಧ ಪ್ರಕರಣ ದಾಖಲು

ನಾಪೋಕ್ಲು, ಜ. 13– ಕುಟುಂಬವೊಂದರ ಸದಸ್ಯರು ಬೇರೆಯವರ ಕಾಫಿ ತೋಟದಿಂದ 8 ಸಾವಿರ ಕೆಜಿ ಹಸಿ ಕಾಫಿ ಫಸಲು ಕಳವು ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಕಡಂಗ ಗ್ರಾಮದ ಕೋಡಿರ ಎಂ. ಕುಶಾಲಪ್ಪ ಎಂಬುವರು 2021ರ ಸೆಪ್ಟೆಂಬರ್ 13ರಂದು ದಿವಂಗತ ಕೋಡಿಮಣಿಯಂಡ ಉಮಾಪತಿ ಎಂಬುವರಿಂದ ಕಕ್ಕಬ್ಬೆ–ನಾಲಡಿ ಗ್ರಾಮದ ಸರ್ವೆ ನಂಬರ್ 61/4ರಲ್ಲಿರುವ 3 ಎಕರೆ ಕಾಫಿ ತೋಟವನ್ನು ಖರೀದಿ ಮಾಡಿದ್ದಾರೆ. ಅವರು ಜನವರಿ 11ರಂದು ಮಧ್ಯಾಹ್ನ ತೋಟಕ್ಕೆ ಹೋಗಿದ್ದಾಗ ಕೋಡಿಮಣಿಯಂಡ ಕುಟ್ಟಪ್ಪ ಅಲಿಯಾಸ್ ಶರಣು, ಕೋಡಿಮಣಿಯಂಡ ಅಚ್ಚಮ್ಮ ಅಲಿಯಾಸ್ ಮಿಟ್ಟು, ಕೋಡಿಮಣಿಯಂಡ ಬೋಪಯ್ಯ ಅಲಿಯಾಸ್ ತಮ್ಮಣ್ಣಿ, ಕೋಡಿಮಣಿಯಂಡ ಮಾದಪ್ಪ ಅಲಿಯಾಸ್ ಗಗನ್ ಮತ್ತು ಕೋಡಿಮಣಿಯಂಡ ತಮ್ಮಯ್ಯ ಅಲಿಯಾಸ್ ಶಂಭು ಅವರುಗಳು ಕೆಲಸದಾಳುಗಳನ್ನು ಕರೆದುಕೊಂಡು ಬಂದು 3 ಎಕರೆ ಪ್ರದೇಶದಲ್ಲಿ ಬೆಳೆದಿದ್ದ 8 ಸಾವಿರ ಕೆಜಿ ಹಸಿ ಕಾಫಿ ಫಸಲನ್ನು ಕಳವು ಮಾಡಿ, ಮಹೇಂದ್ರ ವಾಹನ (ಕೆಎ 12–ಎ 7605)ದಲ್ಲಿ ತುಂಬಿಕೊಂಡು ಹೋಗಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಾಪೋಕ್ಲು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಿಧನ



ಕರುಹಟ್ಟಿ ಸಿಂಗ್ರಾಚಾರ್

ಮೈಸೂರು, ಜ. 13– ಮೈಸೂರಿನ ಕುವೆಂಪುನಗರ ನಿವಾಸಿ ಕರುಹಟ್ಟಿ ಸಿಂಗ್ರಾಚಾರ್ (ಕೆ.ಎಸ್.ಚಾರಿ) ಜನವರಿ 11 ರಂದು ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಶ್ರೀಯುತರು ಮೈಸೂರು ಟೆನ್ನಿಸ್ ಕ್ಲಬ್ ಸಂಸ್ಥಾಪಕ ಸದಸ್ಯರು, ಕಾಳಿದಾಸ ರಸ್ತೆಯಲ್ಲಿರುವ ಲಕ್ಷ್ಮೀ ನರಸಿಂಹ ದೇವಸ್ಥಾನ ಸಮಿತಿ ಸದಸ್ಯರು, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಸಕ್ರಿಯ ಸದಸ್ಯರಾಗಿದ್ದರು. ಅವರು ಕ್ರಿಕೆಟ್ ಅಭಿಮಾನಿಯಾಗಿದ್ದು, ಮೈಸೂರು ಜಿಮ್‌ಖಾನ (ಟಿಎಂಜಿ) ಕ್ರಿಕೆಟ್ ಕ್ಲಬ್ ಪೋಷಕರಾಗಿದ್ದರು. ಮೃತರು ಪತ್ನಿ ಶಾಲಿನಿ ಚಾರಿ, ಮಕ್ಕಳಾದ ಅನಿಲ್ ಶ್ರೀರಾಮ್ ಕರುಹಟ್ಟಿ ಮತ್ತು ಅಶ್ವಿನ್ ಶ್ರೀನಾರಾಯಣ್ ಕರುಹಟ್ಟಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜ.12 ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ರಾಜಲಕ್ಷ್ಮಿ

ಮೈಸೂರು: ಮೈಸೂರು ಟಿ.ಕೆ.ಲೇಔಟ್ ನಿವಾಸಿ ಹಾಗೂ ದಿವಂಗತ ವಿಶ್ವನಾಥ್ ಶೆಟ್ಟಿ ಅವರ ಪತ್ನಿ ಶ್ರೀಮತಿ ರಾಜಲಕ್ಷ್ಮಿ ಅವರು ಇಂದು ಬೆಂಗಳೂರಲ್ಲಿ ನಿಧನರಾದರು. ಇವರಿಗೆ 85 ವರ್ಷ ವಯಸ್ಸಾಗಿತ್ತು. ಮೃತರು ವಕೀಲ ಜಗದೀಶ್ ಸೇರಿದಂತೆ ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಬೆಂಗಳೂರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಪ್ರಕಾಶ್



ಮೈಸೂರು: ಮೈಸೂರು ರಾಮಾನುಜ ರಸ್ತೆ ಮೊದಲ ಕ್ರಾಸ್ ನಿವಾಸಿ ಬಿ.ಪ್ರಕಾಶ್(76) ಅವರು ಅಲ್ಪಕಾಲದ ಅಸ್ವಸ್ಥತೆ ನಂತರ ಇಂದು ಮುಂಜಾನೆ ನಿಧನರಾದರು. ಇವರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ವಿದ್ಯಾರಣ್ಯಪುರಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಡಾ. ರೇಖಾ ರಾಜಗೋಪಾಲ್

ಮೈಸೂರು: ಮೈಸೂರು ವಿದ್ಯಾರಣ್ಯಪುರಂನ ವಿಜಯ ಕ್ಲಿನಿಕ್‌ನ ಡಾ. ರೇಖಾ ರಾಜಗೋಪಾಲ್(83) ಅವರು ನಿನ್ನೆ ನಿಧನರಾದರು. ಇವರು ಜೆ.ಪಿ.ನಗರ ನಿವಾಸಿ, ದಿವಂಗತ ಡಾ. ರಾಜಗೋಪಾಲ್ ಅವರ ಪತ್ನಿ. ಮೃತರು, ಪುತ್ರ, ಪುತ್ರಿ, ಅಪಾರ ಬಂಧುಗಳು, ಸ್ನೇಹಿತರ ಅಗಲಿದ್ದಾರೆ. ಇವರ ಮಕ್ಕಳು ನಾಳೆ (ಶನಿವಾರ) ಅಮೆರಿಕಾದಿಂದ ವಾಪಸ್ಸಾಗಲಿದ್ದು, ನಂತರ ಅಂತಿಮ ವಿಧಿ–ವಿಧಾನದ ಬಳಿಕ ದೇಹವನ್ನು ಅವರ ಇರಾದೆಯಂತೆ ಜೆಎಸ್‌ಎಸ್ ಆಸ್ಪತ್ರೆಗೆ ಕೊಡುಗೆಯಾಗಿ ನೀಡಲಾಗುತ್ತಿದೆ ಎಂದು ಕುಟುಂಬದ ಮೂಲಗಳು ಹೇಳಿವೆ.

ಮಝರ್ ಖಾನ್



ಮೈಸೂರು: ಎರಡನೇ ಈದ್ಗಾ ಮಾಜಿ ಕಾರ್ಪೊರೇಟರ್ ಮಝರ್ ಖಾನ್(63) ಇಂದು ಮಧ್ಯಾಹ್ನ ನಿಧನರಾದರು. ಮೃತರು ಸಿದ್ಧಿಕಿ ಮೊಹಲ್ಲಾ ನಿವಾಸಿ. ಇವರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ನಾಳೆ (ಶನಿವಾರ) ಬೆಳಗ್ಗೆ ನಮಾಜ್–ಜನಾಜ್ ಮಂಡಿಮೊಹಲ್ಲಾ ಮಸ್ಜಿದ್–ಇ–ಈದ್ಗಾದಲ್ಲಿ ನೆರವೇರಿದ ನಂತರ ಟಿಪ್ಪು ಸರ್ಕಲ್‌ನ ಹಳೆ ಖಬರ್‌ಸ್ತಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ವಿದ್ಯುತ್ ಚಿತಾಗಾರ ಉದ್ಘಾಟನೆ



ಮೈಸೂರಿನ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ನಿರ್ಮಿಸಿರುವ ವಿದ್ಯುತ್ ಚಿತಾಗಾರವನ್ನು ಮೇಯರ್ ಶಿವಕುಮಾರ ಉದ್ಘಾಟಿಸಿದರು. ಉಪಮೇಯರ್ ಆರ್. ರೂಪ, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ನಗರ ಪಾಲಿಕೆ ಸದಸ್ಯರಾದ ಪೈ. ಶ್ರೀನಿವಾಸ್, ಪ್ರೇಮಾ ಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಉಷಾಕುಮಾರ್, ಎನ್.ಯು.ಸುಬ್ಬಯ್ಯ, ಎಸ್.ಬಿ.ಎಂ.ಮಂಜು, ಮಾಜಿ ಪಾಲಿಕೆ ಸದಸ್ಯರಾದ ಎಂ.ಶಿವಣ್ಣ, ಜಯರಾಮು, ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ಪಾಲಿಕೆ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.13(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ನಿರ್ಮಿಸಿರುವ 1.5 ಕೋಟಿ ರೂ. ವೆಚ್ಚದ ವಿದ್ಯುತ್ ಚಿತಾಗಾರವನ್ನು ಮೇಯರ್ ಶಿವಕುಮಾರ್ ಇಂದು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಎಲ್ಲರಿಗೂ ಮುಕ್ತಿ ಸಿಗುವ ರುದ್ರಭೂಮಿಯಲ್ಲಿ ಮೂಲ ಸೌಲಭ್ಯ ಕಲ್ಪಿಸುವ ಸಲುವಾಗಿ ಪಾಲಿಕೆಯಿಂದ ನಿರ್ಮಿಸಿರುವ ವಿದ್ಯುತ್ ಚಿತಾಗಾರವು ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಅದನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

ಪಾಲಿಕೆ ಸದಸ್ಯ ಪೈಶ್ರೀನಿವಾಸ ಮಾತನಾಡಿ, ಕೊರೊನಾ ಮಹಾಮಾರಿ ಸಂದರ್ಭದಲ್ಲಿ ಅಂತ್ಯಸಂಸ್ಕಾರಕ್ಕೆ ಉಂಟಾದ ಯಾತನೆಯಿಂದಾಗಿ ಇಲ್ಲಿಗೆ ವಿದ್ಯುತ್ ಚಿತಾಗಾರದ ಅಗತ್ಯತೆ ಅರಿತು, ತಾವು ಸೌಲಭ್ಯ ಒದಗಿಸಿದ್ದೇವೆ. ಅದಕ್ಕೆ ಸಹಕರಿಸಿದ ಪಾಲಿಕೆ ಆಯುಕ್ತ ಹಾಗೂ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಉಪ ಮೇಯರ್ ಆರ್.ರೂಪಾ, ಕಾರ್ಪೊರೇಟರ್‌ಗಳಾದ ಪ್ರೇಮಾ ಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಎಸ್‌ಬಿಎಂ ಮಂಜು, ಉಷಾ ಕುಮಾರ್, ಎನ್.ಯು.ಸುಬ್ಬಯ್ಯ, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮಾಜಿ ಕಾರ್ಪೊರೇಟರ್‌ಗಳಾದ ಎಂ.ಶಿವಣ್ಣ, ಜಯರಾಮು, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಜ.16, ಆಯ–ವ್ಯಯ ಪೂರ್ವಭಾವಿ ಸಭೆ

ಮೈಸೂರು,ಜ.13–ನಂಜನಗೂಡು ಪುರಸಭೆ ವತಿಯಿಂದ ಜ.16ರಂದು ಬೆಳಗ್ಗೆ 11 ಗಂಟೆಗೆ ನಗರಸಭೆ ಕಚೇರಿ ಕೌನ್ಸಿಲ್ ಸಭಾಂಗಣದಲ್ಲಿ ನಗರಸಭಾ ಅಧ್ಯಕ್ಷರ ಅಧ್ಯಕ್ಷತೆ ಯಲ್ಲಿ 2023–2024ನೇ ಸಾಲಿನ ಆಯ–ವ್ಯಯ ಪೂರ್ವಭಾವಿ ಸಭೆಯನ್ನು ಏರ್ಪಡಿಸ ಲಾಗಿದೆ. ಸದರಿ ಸಭೆಗೆ ನಗರಸಭಾ ವ್ಯಾಪ್ತಿಯ ಜನಪ್ರತಿನಿಧಿಗಳು, ಹಿರಿಯ ನಾಗರಿಕರು, ಸಾರ್ವಜನಿಕರು ಹಾಗೂ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಆಗಮಿಸಿ 2023–2024ನೇ ಸಾಲಿನ ಆಯ–ವ್ಯಯಕ್ಕೆ ಸಂಬಂಧಿಸಿದಂತೆ ತಮ್ಮ ಅಮೂಲ್ಯವಾದ ಸಲಹೆ–ಸೂಚನೆಗಳನ್ನು ನೀಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಪಿಎಚ್.ಡಿ ಪದವಿ



ಮೈಸೂರು, ಜ.13–ಡಾ.ಎಂ. ಚಂದ್ರಶೇಖರ ಅವರ ಮಾರ್ಗದರ್ಶನದಲ್ಲಿ ಎನ್. ಕವಿತಾ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಪಡುವಾರಹಳ್ಳಿಯಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಬಾಲಗಂಗಾಧರ ಮಹಾಸ್ವಾಮಿಯವರ 10ನೇ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು. ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಎಂ. ಮಹದೇವಸ್ವಾಮಿ, ನಗರಪಾಲಿಕೆ ಸದಸ್ಯ ಎಂ. ಚಿಕ್ಕವೆಂಕಟು, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ, ಜೆ.ಯೋಗೇಶ್, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ಈ.ಲೋಕೇಶ್ವರ, ಎಂ.ಸೋಮಣ್ಣ, ಸಿ.ಡಿ.ಕುಮಾರ್, ಬಿ.ಕುಮಾರ್, ಸುರೇಂದ್ರ, ಕೇಬಲ್ ಕಿಟ್ಟಿ, ವೆಂಕಟಗಿರಿ, ಪ್ರಕಾಶ್, ಅಭಿ ಇದ್ದರು.

ಇಂದು ಲಕ್ಷ ದೀಪೋತ್ಸವ

ಮೈಸೂರು,ಜ.13(ಎಂಟಿವೈ)–ಚಾಮುಂಡಿಬೆಟ್ಟದ ಪಾದದ ಬಳಿಯಿರುವ ಶಬರಿಮಲೆ ಶ್ರೀ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಜ.14ರಂದು ಸಂಜೆ 6.30ಕ್ಕೆ ಶಬರಿಮಲೆಯಲ್ಲಿ ಜ್ಯೋತಿ ಕಾಣುವ ಸಮಯದಲ್ಲಿ ಲಕ್ಷ ದೀಪೋತ್ಸವ ಆಯೋಜಿಸಲಾಗಿದೆ ಎಂದು ದೇವಾಲಯದ ಪೂಜಾ ಸಮಿತಿ ಕೆ.ಎಂ.ಬಸವಾರಾಧ್ಯ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರತಿವರ್ಷವೂ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಮಕರ ಸಂಕ್ರಾಂತಿ ಹಬ್ಬದ ದಿನ ಲಕ್ಷದೀಪೋತ್ಸವ ನಡೆಸುತ್ತಾ ಬರಲಾಗಿದೆ. ಈ ಬಾರಿ ಲಕ್ಷದೀಪೋತ್ಸವ ಕಾರ್ಯಕ್ರಮಕ್ಕೆ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಸ್ವಾಮಿ ಶಿವಕಂಠಾನಂದ ಚಾಲನೆ ನೀಡುವರು. ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಪಾಲಿಕೆ ಸದಸ್ಯೆ ಪುಟ್ಟಲಿಂಗಮ್ಮ ಪಾಲ್ಗೊಳ್ಳಲಿದ್ದಾರೆ. ದೇವಾಲಯದಲ್ಲಿ ನಿತ್ಯವೂ ಅನ್ನದಾನ ನಡೆಯುತ್ತಿದೆ ಎಂದರು. ಗೋಷ್ಠಿಯಲ್ಲಿ ದೇವಾಲಯದ ಸೇವಾ ಸಮಿತಿಯ ಸದಸ್ಯರಾದ ಆರ್.ಹರಿದಾಸ್, ಸುರೇಂದ್ರನ್, ಬಿ.ಎಲ್.ಶಂಕರ್ ಇದ್ದರು.

ಸಾಮಾಜಿಕ ಜಾಲತಾಣ ವ್ಯಸನ ಯುವಕರ ಭವಿಷ್ಯಕ್ಕೆ ಮಾರಕ




ಮೈಸೂರು, ಜ. 13– ಯುವ ಸಮುದಾಯ ಸಾಮಾಜಿಕ ಜಾಲತಾಣಗಳ ವ್ಯಸನದಿಂದ ಹೊರ ಬರದಿದ್ದರೆ ಭವಿಷ್ಯದ ಬದುಕು ಮಸುಕಾಗುವ ಅಪಾಯ ಹೆಚ್ಚಿದೆ ಎಂದು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಸೋಮಣ್ಣ ಆತಂಕ ವ್ಯಕ್ತಪಡಿಸಿದ್ದಾರೆ. ನಗರದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಜೆಸಿಐ ಮೈಸೂರು ರಾಯಲ್ ಸಿಟಿ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ "ಸಾಮಾಜಿಕ ಜಾಲತಾಣ ಮತ್ತು ವ್ಯಸನ" ವಿಷಯ ಕುರಿತ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಾಟ್ಸ್ ಆಪ್, ಇನ್‌ಸ್ಟಾಗ್ರಾಂ, ಫೇಸ್ ಬುಕ್, ಟ್ವಿಟರ್ ಸೇರಿದಂತೆ ವಿವಿಧ ಮಾದರಿಯ ಜಾಲತಾಣಗಳು ಯುವ ಸಮುದಾಯವನ್ನು ಒಂದಿಲ್ಲೊಂದು ಕಾರಣಕ್ಕೆ ವ್ಯಸನಿಗಳನ್ನಾಗಿ ಮಾಡುತ್ತಿವೆ. ತಂತ್ರಜ್ಞಾನದ ಆವಿಷ್ಕಾರಗಳಾದ ಈ ಜಾಲತಾಣಗಳು ಮೊದಲಿಗೆ ಮನಸಿಗೆ ಮುದ ನೀಡುತ್ತವೆ. ಕುತೂಹಲ ಮೂಡಿಸುತ್ತಲೇ ಅವುಗಳ ದಾಸರನ್ನಾಗಿ ಮಾಡುತ್ತವೆ. ಇವುಗಳ ಬಳಕೆ ಬಗ್ಗೆ ಎಚ್ಚರವಹಿಸದಿದ್ದರೆ ಅಪಾಯ ಕಟ್ಟಿಟ್ಟಬುತ್ತಿ ಎಂದು ಉದಾಹರಣೆ ಸಹಿತ ಎಚ್ಚರಿಸಿದರು.

ಜೆಸಿಐ ಮೈಸೂರು ರಾಯಲ್ ಸಿಟಿಯ ಅಧ್ಯಕ್ಷ ರಾಹುಲ್ ಕಾಂಟೆಡ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಸೇಯೋ ಅಧಿಕಾರಿ ಡಾ.ಕಂಚಿನಕೆರೆ ಗೋವಿಂದೇಗೌಡ ಮಾತನಾಡಿ, ಸಾಮಾಜಿಕ ಜಾಲತಾಣಗಳು ವಿದ್ಯಾರ್ಥಿ ಸಮುದಾಯಕ್ಕೆ ಎಷ್ಟು ಅಗತ್ಯವೋ ಅಷ್ಟೇ ಅಪಾಯವೂ ಹೌದು. ಬಗೆಬಗೆಯ ಆಪ್‌ಗಳು ಯುವ ಜನಾಂಗದ ಮನಸ್ಸನ್ನು ಸೆರೆ ಹಿಡಿಯುತ್ತಿವೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಆನ್‌ಲೈನ್ ಗೇಮ್‌ಗಳು ಪ್ರಾಣಹಾನಿಗೂ ಕಾರಣವಾದ ಉದಾಹರಣೆಗಳಿವೆ. ಅಗತ್ಯ ಮೀರಿ ಜಾಲತಾಣಗಳನ್ನು ಬಳಸಿದರೆ ನಮಗರಿವಿಲ್ಲದೆ ದಾಸರಾಗುತ್ತೇವೆ. ಲಕ್ಷಾಂತರ ಮಂದಿ ಸಮಸ್ಯೆಯಿಂದ ಬಳಲುವುದನ್ನು ಕಾಣಬಹುದು. ಈ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಇಂದಿನ ಕಾರ್ಯಕ್ರಮ ಹೆಚ್ಚು ಸಹಕಾರಿಯಾಗಲಿದೆ ಎಂದು ವಿವರಿಸಿದರು. ತರಬೇತುದಾರರಾದ ಜೆ.ಸಿ.ಖುಷಿ ಗುಗ್ಲಿಯಾ ಹಾಗೂ ಜೆ.ಸಿ. ಮಧು ಗುಗ್ಲಿಯಾ ಅವರು ವಿದ್ಯಾರ್ಥಿನಿಯರೊಂದಿಗೆ ಸಂವಾದದ ಮೂಲಕ ಸಾಮಾಜಿಕ ಜಾಲತಾಣಗಳ ಮಿತಿಮೀರಿದ ಬಳಕೆಯ ಅಪಾಯ ಹಾಗೂ ಅದರಿಂದ ಹೊರಬರುವ ಉಪಾಯಗಳ ಬಗ್ಗೆ ತಿಳಿಸಿಕೊಟ್ಟರು. ಜೆಸಿಐ ಮೈಸೂರು ರಾಯಲ್ ಸಿಟಿಯ ಉಪಾಧ್ಯಕ್ಷೆ ಲೀಲಾ ಕೊಠಾರಿ, ಪ್ರಾಜೆಕ್ಟ್ ಡೈರೆಕ್ಟರ್ ಲತಾಜೈನ್, ಟ್ರೈನಿಂಗ್ ಡೈರೆಕ್ಟರ್ ಸೀಮಾ ಡೆರಾಸಿಯಾ, ವಾಣಿಜ್ಯ ಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಕೆ. ಪ್ರಸಾದ್, ಎನ್‌ಎಸ್‌ಎಸ್ ಅಧ್ಯಕ್ಷೆ ಮೇಘನ ಎಂ.ಮಲ್ಲಣ್ಣ, ಉಪಾಧ್ಯಕ್ಷೆ ಬಸವಜ್ಯೋತಿ, ಉಪಕಾರ್ಯದರ್ಶಿ ಲಿಖಿತ ಎಸ್ ಹಾಜರಿದ್ದರು. ಸ್ವಯಂಸೇವಕಿಯರಾದ ರೂಪ ಮತ್ತು ಮಾನ್ಯ ಪ್ರಾರ್ಥನೆ ಗೀತೆ ಹಾಡಿದರು. ಸ್ವಯಂಸೇವಕಿ ಚೈತ್ರಶ್ರೀ ಸ್ವಾಗತಿಸಿದರು. ಸ್ವಯಂಸೇವಕಿ ಸುಕೃತ ನಿರೂಪಣೆ ಮಾಡಿದರು. ಸ್ವಯಂಸೇವಕಿ ಮಾನಸ ಎಸ್ ವಂದಿಸಿದರು. ಮುನ್ನೂರಕ್ಕೂ ಹೆಚ್ಚು ಸ್ವಯಂಸೇವಕಿಯರು ತರಬೇತಿಯಲ್ಲಿ ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.1.2023 ಶನಿವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು – ಲೇಖನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖನ–ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ– ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ, 8.30 ಸುಸ್ಥಿರ ಬದುಕಿಗಾಗಿ ಸಸ್ಯಾಹಾರ – ಉದ್ಯಮಿ ವಿಶ್ವಪ್ರಸಾದ್ ಆಳ್ವ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 10.00 ಎನ್.ವಿ. ಸತ್ಯನಾರಾಯಣ – ವೇಣುವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಕೃಷ್ಣೇಗೌಡ ಮತ್ತು ತಂಡ, 1.20 ಭಾವಗೀತೆ, 3.30 ಮಕ್ಕಳ ಮಂಟಪ –ಪ್ರತಿಭಾ ಪಲ್ಲವ – ಬಹುಮುಖ ಪ್ರತಿಭೆ ಭುವನ್ ಎಸ್.ನ ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ 4.00 ನಾಟಕ 4.00 ನೆನಪಿನಂಗಳ – ಪ್ರಸಿದ್ಧ ನೃತ್ಯ ಕಲಾವಿದೆ ಡಾ. ಕೆ.ವೆಂಕಟಲಕ್ಷಮ್ಮ ಅವರೊಂದಿಗೆ ಸಂವಾದ 6.50 ಕೃಷಿರಂಗ – "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.15 ಮಹಿಳೆಯರಲ್ಲಿ ಉದ್ಯಮಶೀಲತೆ– ಭಾಗ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪೂರ್ಣಿಮಾ ಧುಮಾಲೆ – ಗಾಯನ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸಂಜೆ ಮಕರ ದೀಪೋತ್ಸವ ಸೇವಾ, ಸ್ಥಳ: ದೇವಸ್ಥಾನಂ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿವೇಕಾನಂದರ 161ನೇ ಜನ್ಮ ದಿನದ ಅಂಗವಾಗಿ ಬೆಳಗ್ಗೆ 5.15 ರಿಂದ ಪೂಜಾ ಕೈಂಕರ್ಯ, ಸಂಜೆ 4.30 ರಿಂದ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6 ರಿಂದ ಸ್ವಾಮಿ ವಿವೇಕಾನಂದ ಕುರಿತು ಕನ್ನಡದಲ್ಲಿ ಪ್ರವಚನ, ರಾತ್ರಿ 7 ರಿಂದ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶಾರದಾ ವಿಲಾಸ ಪದವಿಪೂರ್ವ ಕಾಲೇಜು :** ವಿದ್ಯಾರ್ಥಿ ವೇದಿಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ವಿಶೇಷ ಆಹ್ವಾನಿತರು : ಶಾರದಾ ವಿಲಾಸ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ್, ಶೈಕ್ಷಣಿಕ ಸಲಹೆಗಾರ ಶ್ರೀನಿವಾಸ ರಾಘವಾಚಾರ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಸಿ.ಕೆ. ಅಶೋಕ್‌ಕುಮಾರ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಸಾಧಕರಿಗೆ ಅಭಿನಂದನೆ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಭಾವಚಿತ್ರಕ್ಕೆ ಪುಷ್ಪಾರ್ಚನೆ : ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಕ್ಯಾಲೆಂಡರ್ ಬಿಡುಗಡೆ : ಜಿಪಂ ಮುಖ್ಯ ನಿರ್ವಾಹಕ ಅಧಿಕಾರಿ ಶ್ರೀಮತಿ ಬಿ.ಆರ್. ಪೂರ್ಣಿಮ, ಮೈಸೂರು ವಿವಿ ಕುಲಸಚಿವ ಶ್ರೀಮತಿ ವಿ.ಆರ್. ಶೈಲಜ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಪತ್ರಕರ್ತೆ ಶ್ರೀಮತಿ ರಶ್ಮಿಕೋಟಿ, ಮುಖ್ಯ ಅತಿಥಿಗಳು : ಸಮಾಜ ಸೇವಕ ಹರೀಶ್‌ಗೌಡ, ಪ್ರಾಚ್ಯ ವಿದ್ಯಾ ಸಂಶೋಧನಾಲಯ ವಿಶ್ರಾಂತ ನಿರ್ದೇಶಕ ಪ್ರೊ. ಎಸ್. ಶಿವರಾಜಪ್ಪ, ಸಿಂಡಿಕೇಟ್ ಸದಸ್ಯೆ ಚೈತ್ರಾ ನಾರಾಯಣ್, ಸ್ಥಳ: ಮೈಸೂರು ವಿವಿ ಸಂಜೆ ಕಾಲೇಜು ಮುಂಭಾಗ, ಬೆಳಗ್ಗೆ 10.30ಕ್ಕೆ.

■ **ಸಂಸ್ಕೃತಿ ಪ್ರಕಾಶನ, ಮೈಸೂರು :** ಡಾ. ಚುಂಚಯ್ಯ ಅವರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ದ್ರಾವಿಡ ವಾಸ್ತುಶಿಲ್ಪದ ಪ್ರಾರಂಭ ಮತ್ತು ಬೆಳವಣಿಗೆ ಸಂಶೋಧನಾ ಗ್ರಂಥ ಬಿಡುಗಡೆ, ಪುಸ್ತಕ ಬಿಡುಗಡೆ : ಕಾರಾಗೃಹಗಳ ಉಪ ಮಹಾನಿರೀಕ್ಷಕ ಎಸ್. ಸೋಮಶೇಖರ್, ಅಧ್ಯಕ್ಷತೆ : ಕೇಂದ್ರ ಕಾರಾಗೃಹ ಅಧೀಕ್ಷಕರಾದ ಕೆ.ಸಿ.ದಿವ್ಯಶ್ರೀ, ಕೃತಿ ಕುರಿತು ಮಾತನಾಡುವವರು : ಅಂಕಣಕಾರ ಡಾ. ವಿ. ರಂಗನಾಥ್, ಉಪಸ್ಥಿತರು : ಕೇಂದ್ರ ಕಾರಾಗೃಹ ಆಡಳಿತಾಧಿಕಾರಿ ಡಾ.ಚುಂಚಯ್ಯ, ಪ್ರಾಸ್ತಾವಿಕ ನುಡಿ : ಲೇಖಕ ಸಂಸ್ಕೃತಿ ಸುಬ್ರಹ್ಮಣ್ಯ, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ :** ಕನ್ನಡದ ಹೆಸರಾಂತ ಸಾಹಿತಿ ಹಾಗೂ ಹೋರಾಟಗಾರ್ತಿ ಡಾ.ಸಾರಾ ಅಬೂಬಕ್ಕರ್ ಅವರಿಗೆ ನುಡಿ ನಮನ, ಉಪಸ್ಥಿತರು : ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಪ್ರೊ. ಅರವಿಂದ ಮಾಲಗತ್ತಿ, ಪ್ರೊ. ಪದ್ಮಶೇಖರ್, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಕಸಾಪ ನಗರ ಅಧ್ಯಕ್ಷ ಕೆ.ಎಸ್. ಶಿವರಾಮು, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನ, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ :** ರಾಜ್ಯ ಮಟ್ಟದ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ, ದಿನದರ್ಶಿಕೆ ಬಿಡುಗಡೆ, ಉದ್ಘಾಟನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕ್ಯಾಲೆಂಡರ್ ಬಿಡುಗಡೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಮುಖ್ಯ ಅತಿಥಿಗಳು : ಲಯನ್ ಕೆ. ದೇವೇಗೌಡ, ಸಂಸ್ಕೃತಿ ಚಿಂತಕ ಡಾ. ಕೆ.ರಘುರಾಂ ವಾಜಪೇಯಿ, ಹರೀಶ್ ಪಿ. ಗೌಡ, ಜಿ.ಎಸ್. ಉದಯ್ ಕುಮಾರ್, ಡಾ. ವೈ.ಡಿ. ರಾಜಣ್ಣ, ಒಕ್ಕಲಿಗರ ಮಹಾಸಭಾದ ರಾಜ್ಯಾಧ್ಯಕ್ಷ ಎನ್. ಬೆಟ್ಟೇಗೌಡ, ಡಾ. ಈ.ಸಿ. ನಿಂಗರಾಜೇಗೌಡ, ಡಾ. ಬಿ.ಎನ್. ರವೀಶ್, ಎಂ.ಎನ್. ಚಂದ್ರಶೇಖರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ, ಮೈಸೂರು ಜಿಲ್ಲಾ ಸಮಿತಿ :** ನೂತನ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ರಾಜ್ಯಾಧ್ಯಕ್ಷ ಡಿ. ಚಂದ್ರಶೇಖರಯ್ಯ, ಕ್ಯಾಲೆಂಡರ್ ಬಿಡುಗಡೆ : ಪತ್ರಕರ್ತ ಕೆ. ನರಸಿಂಹಮೂರ್ತಿ, ವಿಶೇಷ ಆಹ್ವಾನಿತರು : ಮಾಜಿ ಮೇಯರ್ ಪುರುಷೋತ್ತಮ್, ಚಿಕ್ಕಜವರಪ್ಪ, ದ್ಯಾವಪ್ಪ ನಾಯಕ, ಸಂಘದ ಅಧ್ಯಕ್ಷ ಡಾ. ಶಿವರಾಮಕೃಷ್ಣ, ಸ್ಥಳ: ಲೋಕೋಪಯೋಗಿ ಅತಿಥಿ ಗೃಹ, ನಜರ್‌ಬಾದ್, ಸಂಜೆ 5ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6 ಗಂಟೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್ ಅವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶಬರಿಮಲೈ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಲಕ್ಷ ದೀಪೋತ್ಸವ, ಉದ್ಘಾಟನೆ : ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸ್ವಾಮಿ ಶಿವಕಂಠಾನಂದ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಪಾಲಿಕೆ ಸದಸ್ಯೆ ಪುಟ್ಟಲಿಂಗಮ್ಮ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನಾಟಕ ಕದಂಬ ಉತ್ಸವ, ಶ್ರೀರಂಗಪಟ್ಟಣದ ಗಮ್ಯ ಕಲಾ ತಂಡದಿಂದ ಪರಿಣಯ ಪ್ರಸಂಗ ನಾಟಕ ಪ್ರದರ್ಶನ, ರಚನೆ : ಮುರಳಿ ಶೃಂಗೇರಿ, ಸಂಗೀತ : ಆದಿತ್ಯ, ಮುರಳಿ ಶೃಂಗೇರಿ, ನಿರ್ದೇಶನ : ರಮೇಶ್ ಬೆಣಕಲ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

ಭೀಕರ ರಸ್ತೆ ಅಪಘಾತ: ಶಿರಡಿಗೆ ತೆರಳುತ್ತಿದ್ದ 10 ಮಂದಿ ಸಾವು

ಮಹಾರಾಷ್ಟ್ರ, ಜ.13– ಶಿರಾಡಿ ಸಾಯಿಬಾಬಾ ದರ್ಶನ ಪಡೆಯಲು ತೆರಳುತ್ತಿದ್ದ ಭಕ್ತರ ಐಷಾರಾಮಿ ಬಸ್ ಮತ್ತು ಟ್ರಕ್ ನಡುವೆ ಭೀಕರವಾಗಿ ಡಿಕ್ಕಿ ಸಂಭವಿಸಿ 7 ಮಹಿಳೆಯರು ಸೇರಿದಂತೆ 10 ಮಂದಿ ಮೃತಪಟ್ಟಿರುವ ಘಟನೆ ನಾಸಿಕ್‌ನ ಸಿನ್ನಾರ್ ಹೆದ್ದಾರಿಯಲ್ಲಿ ನಡೆದಿದೆ.

ನಾಸಿಕ್–ಶಿರಡಿ ಹೆದ್ದಾರಿಯಲ್ಲಿ ಬಸ್ ಹಾಗೂ ಟ್ರಕ್ ನಡುವೆ ಡಿಕ್ಕಿ ಸಂಭವಿಸಿದ್ದು, ಘಟನೆಯಲ್ಲಿ 10 ಮಂದಿ ಸಾವನ್ನಪ್ಪಿದ್ದಾರೆ. ಈ ಭೀಕರ ರಸ್ತೆ ಅಪಘಾತದಲ್ಲಿ 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎನ್ನಲಾಗಿದೆ. ಮುಂಬೈನಿಂದ ಸುಮಾರು 180 ಕಿ.ಮೀ ದೂರದಲ್ಲಿರುವ ನಾಸಿಕ್‌ನ ಸಿನ್ನಾರ್ ತೆಹಸಿಲ್‌ನ ಪಥರೆ ಶಿವಾರ್ ಬಳಿ ಬೆಳಿಗ್ಗೆ 7 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಐಷಾರಾಮಿ ಬಸ್‌ನಲ್ಲಿ 50ಕ್ಕೂ ಹೆಚ್ಚು ಭಕ್ತರಿದ್ದರು. ಇವರೆಲ್ಲ ಸಾಯಿಬಾಬಾ ದರ್ಶನ ಪಡೆಯಲೆಂದು ದೇವಾಲಯಕ್ಕೆ ಹೊರಟಿರುವ ವೇಳೆ ಡಿಕ್ಕಿ ಸಂಭವಿಸಿದೆ. ಘಟನೆಯಲ್ಲಿ 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸಿನ್ನಾರ್ ಗ್ರಾಮೀಣಾ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲು ಮಾಡಲಾಗಿದೆ. ಗಾಯಗೊಂಡವರ ಪೈಕಿ 17 ಮಂದಿಯ ಸ್ಥಿತಿ ಚಿಂತಾಜನಕವಾಗಿದೆ ಎಂದು ವಾವಿ ಠಾಣಾ ಪೊಲೀಸರು ತಿಳಿಸಿದ್ದಾರೆ. ಅಪಘಾತಕ್ಕೆ ಒಳಗಾದ ಬಸ್ ಪುಣೆಯ ಅಂಬೇರಿನಾಥ್ ಪ್ರದೇಶಕ್ಕೆ ಸೇರಿದ್ದು ಎಂದು ಹೇಳಲಾಗಿದೆ.

ಅರಣ್ಯದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳಾ ಕ್ರಿಕೆಟ್ ಆಟಗಾರ್ತಿಯ ಶವ ಪತ್ತೆ

ಭುವನೇಶ್ವರ, ಜ.13– ಉದಯೋನ್ಮುಖ ಕ್ರಿಕೆಟ್ ಆಟಗಾರ್ತಿಯೊಬ್ಬರ ಶವ ಅರಣ್ಯದಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಒಡಿಶಾದಲ್ಲಿ ಪತ್ತೆಯಾಗಿದೆ. ಒಡಿಶಾದ ಮಹಿಳಾ ಕ್ರಿಕೆಟ್ ಆಟಗಾರ್ತಿ ರಾಜಶ್ರೀ ಸ್ವೈನ್ ಅವರ ಶವ ಕಟಕ್ ಬಳಿಯ ದಟ್ಟ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದ್ದು, ಕಳೆದ ಮೂರು ದಿನಗಳಿಂದ ರಾಜಶ್ರೀ ನಾಪತ್ತೆಯಾಗಿದ್ದರು ಎನ್ನಲಾಗಿದೆ.



ಕಟಕ್‌ನ ಉಪ ಪೊಲೀಸ್ ಆಯುಕ್ತ ಪಿನಾಕ್ ಮಿಶ್ರಾ ಅವರು ಅಥಘರ್ ಪ್ರದೇಶದ ಅರಣ್ಯದಲ್ಲಿ ಮರಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಪತ್ತೆಯಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ. ರಾಜಶ್ರೀ ಅವರ ತರಬೇತುದಾರರು ಗುರುವಾರ ಕಟಕ್‌ನ ಮಂಗಳಬಾಗ್ ಪೊಲೀಸ್ ಠಾಣೆಯಲ್ಲಿ ರಾಜಶ್ರೀ ಅವರು ನಾಪತ್ತೆ ಆಗಿದ್ದಾರೆ ಎಂದು ದೂರು ನೀಡಿದ್ದರು. ಈ ಸಂಬಂಧ ತನಿಖೆ ನಡೆಸಿದ ಪೊಲೀಸರಿಗೆ ಆಟಗಾರ್ತಿಯ ಶವ ಪತ್ತೆಯಾಗಿದೆ.

ಗುರ್ಡಿ ಜಾಟಿಯಾ ಪೊಲೀಸ್ ಠಾಣೆಯಲ್ಲಿ ರಾಜಶ್ರೀ ಅವರ ಸಾವಿನ ಕುರಿತು ಅಸ್ವಾಭಾವಿಕ ಸಾವಿನ ಪ್ರಕರಣವನ್ನು ದಾಖಲಿಸಲಾಗಿದ್ದು, ಅವರ ಸಾವಿಗೆ ಕಾರಣವೇನು ಎಂಬುದನ್ನು ಪೊಲೀಸರು ಇನ್ನೂ ಪತ್ತೆ ಹಚ್ಚಿಲ್ಲ. ಆದರೆ, ಅವರನ್ನು ಕೊಲೆ ಮಾಡಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಮಹಿಳಾ ಕ್ರಿಕೆಟ್ ಆಟಗಾರ್ತಿಯ ಮೈಮೇಲೆ ಗಾಯದ ಗುರುತುಗಳಿದ್ದು, ಆಕೆಯ ಕಣ್ಣುಗಳಿಗೂ ಹಾನಿಯಾಗಿದೆ ಎಂದು ಆಕೆಯ ಕುಟುಂಬದವರು ಹೇಳಿದ್ದಾರೆ. ಪೊಲೀಸರೂ ಸಹ ಈ ಸಾವಿನ ಕುರಿತು ಹೆಚ್ಚಿನ ತನಿಖೆ ಆರಂಭಿಸಿದ್ದಾರೆ.

ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈಗೆ 'ಝಡ್' ಭದ್ರತೆ

ಚೆನ್ನೈ, ಜ.13– ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ. ಗೃಹ ಸಚಿವಾಲಯ ಅಣ್ಣಾಮಲೈ ಅವರಿಗೆ ಝಡ್ ಶ್ರೇಣಿಯ ಭದ್ರತೆ ನೀಡಿದೆ. ಅಣ್ಣಾಮಲೈ ಅವರಿಗೆ ಈ ಹಿಂದೆ ವೈ ಕೆಟಗರಿ ಭದ್ರತೆ ಇತ್ತು. ಸಿಆರ್‌ಎಫ್‌ನ ಒಟ್ಟು 33 ಕಮಾಂಡೋಗಳು ಅವರಿಗೆ ಈ ಭದ್ರತೆಯನ್ನು ನೀಡಲಿದ್ದಾರೆ. ಅಣ್ಣಾಮಲೈ ಅವರಿಗೆ ಅಪಾಯ ಹೆಚ್ಚಾಗುವ ಆತಂಕದ ಹಿನ್ನೆಲೆಯಲ್ಲಿ ಅವರಿಗೆ ಈ ಭದ್ರತೆ ನೀಡಲಾಗಿದೆ.



ಮಾಜಿ ಐಪಿಎಸ್ ಅಧಿಕಾರಿ ಮತ್ತು ತಮಿಳುನಾಡು ಬಿಜೆಪಿ ಮುಖ್ಯಸ್ಥರಿಗೆ ಮಾವೋವಾದಿಗಳು ಮತ್ತು ಧಾರ್ಮಿಕ ಉಗ್ರಗಾಮಿಗಳಿಂದ ಬೆದರಿಕೆಗಳು ಬಂದಿದ್ದವು. ಅಣ್ಣಾಮಲೈ ಅವರಿಗೆ ಬೆದರಿಕೆ ಬಂದ ನಂತರ, ಇಂಟಲಿಜೆನ್ಸ್ ಬ್ಯೂರೋ (IB) ವರದಿಯು ಅವರಿಗೆ Z ಶ್ರೇಣಿ ಭದ್ರತೆಯನ್ನು ಒದಗಿಸುವಂತೆ ಶಿಫಾರಸು ಮಾಡಿತ್ತು.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತಿ.ನರಸೀಪುರ ಟೌನ್.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಸಹಕಾರ ಸಂಘವು ಹೊಸದಾಗಿ ನಿರ್ಮಿಸಿರುವ 10 ವಾಣಿಜ್ಯ ಮಳಿಗೆಗಳನ್ನು (ವಿಸ್ತೀರ್ಣ 15ಅx22ಅ) ಬಾಡಿಗೆಗೆ ನೀಡಲಾಗುವುದು. ಸದರಿ ಮಳಿಗೆಯ ಒಂದಕ್ಕೆ ರೂ 3,00,000–00 ಭದ್ರತಾ ಠೇವಣಿ ಮತ್ತು ರೂ:7500–00ಗಳ ಬಾಡಿಗೆಯನ್ನು ಸಂಘವು ನಿಗದಿಪಡಿಸಲಾಗಿದ್ದು ಪ್ರತಿ ವರ್ಷ ಶೇ.10% ಹೆಚ್ಚಿಗೆ ಬಾಡಿಗೆ ಹಾಗೂ 11 ತಿಂಗಳ ಬಾಡಿಗೆ ಕರಾರು ಮಾಡಲಾಗುವುದು.

ಆಸಕ್ತಿಯುಳ್ಳವರು ದಿನಾಂಕ: 21.01.2023ರ ಒಳಗೆ ಸಂಘಕ್ಕೆ ಆಧಾರ್ ಕಾರ್ಡ್‌ನೊಂದಿಗೆ ಅರ್ಜಿ ಸಲ್ಲಿಸಿ ರೂ: 10,000–00ಗಳ ಇ.ಎಂ.ಡಿಯನ್ನು ಪಾವತಿಸತಕ್ಕದ್ದು. ಇದರ ಬಗ್ಗೆ ಸಂಘದ ಆಡಳಿತ ಮಂಡಳಿಯ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.

ವಿ.ಸೂ: . 23.01.23ರ ಮಧ್ಯಾಹ್ನ ಇದರ ಬಗ್ಗೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.
ಹೆಚ್ಚಿನ ಮಾಹಿತಿಯನ್ನು ಸಂಘದ ಕಛೇರಿಯ ವೇಳೆಯಲ್ಲಿ ಪಡೆಯತಕ್ಕದ್ದು. ದಿನಾಂಕ: 13.01.2023

ಸಹಿ/–ಮುಖ್ಯಕಾರ್ಯನಿರ್ವಹಣಾಧಿಕಾರಿ ಕ.ಪ್ರಾ.ಕೃ.ಪ.ಸ.ಸಂಘ, ತಿ.ನರಸೀಪುರ. 9740021373 ಮಲ್ಲಣ್ಣ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್ ಐಟಂಗಳಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಬೆಂಗಳೂರು ನಗರ, ಗಾಂಧಿ ಬಜಾರ್, ರಾಮಕೃಷ್ಣ ಆಶ್ರಮ ವೃತ್ತ, ವೈಭವ ಅಪಾರ್ಟ್‌ಮೆಂಟ್, ನಂಬರ್ 85, 4ನೇ ಮಹಡಿ, ಪ್ಲಾಟ್ ನಂಬರ್ 42ರ ನಿವಾಸಿಯಾದ ಶ್ರೀ ಭೂರ್ಮಲ್ ಬಿ. ಬಿನ್ ಶ್ರೀ ಭವರ್ಲಾಲ್ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಐಟಂ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಐಟಂ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಐಟಂ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1 : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣಾ ಹೋಬಳಿ, ಯಾಂದಹಳ್ಳಿ ಗ್ರಾಮದ ಸರ್ವೆ ನಂಬರ್ 28/1 ರಲ್ಲಿನ ಎರಡು ಎಕರೆ ಇಪ್ಪತ್ತನಾಲ್ಕು ಗುಂಟೆ (2.24.00.00) ವಿಸ್ತೀರ್ಣದ ವಾಸೋಪಯೋಗಿ ಉದ್ದೇಶಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ DMD398033F1106CB ದಿನಾಂಕ 06–11–2019, ರಂದು ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 22 ; ಪಶ್ಚಿಮಕ್ಕೆ: ಸರ್ವೆ ನಂಬರ್ 29 ; ಉತ್ತರಕ್ಕೆ: ಸರ್ವೆ ನಂಬರ್ 20 ; ದಕ್ಷಿಣಕ್ಕೆ: ಸರ್ವೆ ನಂಬರ್ 28/2, 27.

ಐಟಂ–2 : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣಾ ಹೋಬಳಿ, ಯಾಂದಹಳ್ಳಿ ಗ್ರಾಮದ ಸರ್ವೆ ನಂಬರ್, 28/2 ರಲ್ಲಿನ ಎರಡು ಎಕರೆ ಮೂವತ್ತಾರು ಗುಂಟೆ (2.36.00.00) ವಿಸ್ತೀರ್ಣದ ವಾಸೋಪಯೋಗಿ ಉದ್ದೇಶಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ DMD398033F2E1C78 ದಿನಾಂಕ 06–11–2029, ರಂದು, ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 27 ; ಪಶ್ಚಿಮಕ್ಕೆ: ಸರ್ವೆ ನಂಬರ್ 29 ; ಉತ್ತರಕ್ಕೆ: ಸರ್ವೆ ನಂಬರ್ 28/1 ; ದಕ್ಷಿಣಕ್ಕೆ: ಸರ್ವೆ ನಂಬರ್ 26.

Sd/- M.N. Prakash Kalappa, KAR-1996-2000
Advocate & Legal Consultant, #67/7A, P.R.I. Complex, No. 2 & 3, 1st Floor, New Sayyaji Rao Road, Fort Mohalla, Mysuru-570 004
ಮೈಸೂರು: 13–01–2023 Mob: 9343112535

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಐಟಂ–1 ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮಂಡ್ಯ ಜಿಲ್ಲೆ, ಕಿಕ್ಕೇರಿ ಹೋಬಳಿ ಮತ್ತು ಗ್ರಾಮ, ಅಂಗಡಿ ಬೀದಿಯ ನಿವಾಸಿಯಾದ (1) ಶ್ರೀಮತಿ ಹೇಮಲತಾ ಎಸ್.ಕೆ. ಕೋಂ ಶ್ರೀ ಸುನಿಲ್ ಕುಮಾರ್ ಜಿ.ಎಂ. ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಹಾಗೂ ಐಟಂ–2 ಮತ್ತು 3 ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೂರ ಗ್ರಾಮ, ಮನೆ ನಂಬರ್ 93 ರ ನಿವಾಸಿಯಾದ (2) ಶ್ರೀ ಮಹದೇವಸ್ವಾಮಿ ಕೆ.ಎನ್. ಬಿನ್ ನಂಜುಂಡಸ್ವಾಮಿ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದ ಸರ್ವೆ ನಂಬರ್ 239/1 ರಲ್ಲಿನ ಹದಿನೆಂಟೂವರೆ ಗುಂಟೆ (0.18.08.00) ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ

ಪೂರ್ವಕ್ಕೆ: ಖಾಸಗಿ ಸ್ವತ್ತು ; ಪಶ್ಚಿಮಕ್ಕೆ: ಸರ್ವೆ ನಂಬರ್ 242 ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಸರ್ವೆ ನಂಬರ್ 242 ಮತ್ತು ಗ್ರಾಮದ ಗಡಿ.

ಐಟಂ–2

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದ ಸರ್ವೆ ನಂಬರ್ 239/2 ರಲ್ಲಿನ ಹದಿನೆಂಟು ಗುಂಟೆ (0.18.00.00) ವಿಸ್ತೀರ್ಣದ ಇಟ್ಟಿಗೆ ಕಾರ್ಖಾನೆ–ಕೈಗಾರಿಕ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ 406100 ದಿನಾಂಕ 22–9–2022, ರ ಜಮೀನಿಗೆ ಚಕ್ಕುಬಂದಿ

ಪೂರ್ವಕ್ಕೆ: ಕೆ.ಐ.ಎ.ಡಿ.ಬಿ. ಜಮೀನು ಮತ್ತು ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂಬರ್ 242/3 ; ಉತ್ತರಕ್ಕೆ: ಸರ್ವೆ ನಂಬರ್ 239/1 ; ದಕ್ಷಿಣಕ್ಕೆ: ಸರ್ವೆ ನಂಬರ್ 239/4.

ಐಟಂ–3

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದ ಸರ್ವೆ ನಂಬರ್ 239/4 ರಲ್ಲಿನ ಹದಿನೆಂಟು ಗುಂಟೆ (0.18.00.00) ವಿಸ್ತೀರ್ಣದ ಇಟ್ಟಿಗೆ ಕಾರ್ಖಾನೆ–ಕೈಗಾರಿಕ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ 406103 ದಿನಾಂಕ 22–09–2022, ರ ಜಮೀನಿಗೆ ಚಕ್ಕುಬಂದಿ

ಪೂರ್ವಕ್ಕೆ: ಕೆ.ಐ.ಎ.ಡಿ.ಬಿ. ಮತ್ತು ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂಬರ್ 242/3 ; ಉತ್ತರಕ್ಕೆ: ಸರ್ವೆ ನಂಬರ್ 239/2 ; ದಕ್ಷಿಣಕ್ಕೆ: ಕೆ.ಐ.ಎ.ಡಿ.ಬಿ.

Sd/- M.N. Prakash Kalappa, KAR-1996-2000
Advocate & Legal Consultant, #67/7A, P.R.I. Complex, No. 2 & 3, 1st Floor, New Sayyaji Rao Road, Fort Mohalla, Mysuru-570 004
ಮೈಸೂರು: 13–01–2023 Mob: 9343112535

ನಗರಸಭಾ ಕಾರ್ಯಾಲಯ, ಚಾಮರಾಜನಗರ

ಸಂಖ್ಯೆ: ನಸಚಾ/ತಾಂ.ವಿ/ಕಿ.ಅ/ಟಿ.ಎನ್–13/2022–23 ದಿನಾಂಕ: 12.01.2023

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ)

ಚಾಮರಾಜನಗರ ನಗರಸಭೆಯ ಅನುದಾನದಡಿಯಲ್ಲಿ ಕನಿಷ್ಠ ಮತ್ತು ಗರಿಷ್ಠ ರೂ. 15.00 ಲಕ್ಷ ಮತ್ತು ರೂ.2.77 ಲಕ್ಷಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–1, ನಿಯಮಗಳಿಗಾನುಸಾರ ಏಕ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸತಕ್ಕದ್ದು. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 27.01.2023, ಸಂಜೆ 5.30 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 30.01.2023 ಬೆಳಿಗ್ಗೆ 11.00 ಗಂಟೆಗೆ: ಈ ಕೆಳಕಂಡ ಎಲ್ಲಾ ಕಾಮಗಾರಿಗಳ ಪೂರ್ಣಗೊಳಿಸುವ ಅವಧಿ : 90 ದಿನಗಳು

Sl.No	Work Indent Number	Estimate Amount In Lakhs	EMD in Rupees
1.	DMA/2022-23/RD/WORK_INDENT143531-CALL-2	7.20	18000.00
2.	DMA/2022-23/OW/WORK_INDENT143411-CALL-2	4.23	10575.00
3.	DMA/2022-23/WS/WORK_INDENT138884-CALL-3	5.00	12500.00
4.	DMA/2022-23/RD/WORK_INDENT143515-CALL-2	6.00	15000.00
5.	DMA/2022-23/OW/WORK_INDENT145041	2.77	3500.00
6.	DMA/2022-23/RD/WORK_INDENT145048	2.81	3520.00
7.	DMA/2022-23/OW/WORK_INDENT145054	2.81	3520.00
8.	DMA/2022-23/OW/WORK_INDENT144909	15.00	37500.00
9.	DMA/2022-23/OW/WORK_INDENT145059	2.78	6950.00
10.	DMA/2022-23/OW/WORK_INDENT145051	2.81	7025.00
11.	DMA/2022-23/OW/WORK_INDENT144908	15.00	37500.00

ಸೂಚನೆ: ಕ್ರಮ ಸಂಖ್ಯೆ : 05 ಮತ್ತು 06 ಕಾಮಗಾರಿಗಳಿಗೆ ಅನುಸೂಚಿತ ಪರಿಶಿಷ್ಟ ಜಾತಿಗಳ ವರ್ಗಕ್ಕೆ ಸೇರಿದ ಟೆಂಡರ್‌ದಾರರು ಮತ್ತು ಕ್ರಮ ಸಂಖ್ಯೆ: 07ರ ಕಾಮಗಾರಿಗೆ ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿ ಟೆಂಡರ್‌ದಾರರು ಮಾತ್ರ ಟೆಂಡರ್‌ನ್ನು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗಳ ವಿವರಗಳನ್ನು ಕಛೇರಿಯ ಪ್ರಕಟಣೆ ಫಲಕದಲ್ಲಿ ಪ್ರಕಟಿಸಲಾಗುವುದು, ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ಹಾಗೂ www.eproc.karnataka.gov.in ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳಬಹುದು.

ಸಹಿ/– (ಸಿ.ಎಂ.ಆಶಾ) ಅಧ್ಯಕ್ಷರು, ನಗರಸಭೆ, ಚಾಮರಾಜನಗರ | ಸಹಿ/– (ಪಿ.ಸುಧಾ) ಉಪಾಧ್ಯಕ್ಷರು, ನಗರಸಭೆ, ಚಾಮರಾಜನಗರ | ಸಹಿ/– (ಎಸ್.ವಿ.ರಾಮದಾಸ್) ಪೌರಾಯುಕ್ತರು, ನಗರಸಭೆ ಚಾಮರಾಜನಗರ

ವಾನಿಂಸಂಇ:ಚಾನಗರ:536:2022–23

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಉಪ ಆಯುಕ್ತರು (ಆಡಳಿತ) ರವರ ಕಛೇರಿ,
ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024.

ಸಂ: ಮೈನಪಾ/ಉಆ(ಆ)/ಪಿಆರ್/124/2022–23 ದಿನಾಂಕ: 07.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಟೆಂಡರ್ ಪ್ರಕಟಣೆ ಸಂಖ್ಯೆ: ಹೆಚ್1/ಪವಿ/113/2020–21, ದಿನಾಂಕ: 07.01.2023

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಸೂಕ್ತ ಕೆ/ಡಬ್ಲ್ಯೂ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ನೋಂದಾಯಿತ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಟೆಂಡರ್‌ದಾರರು ತಿಳುವಳಿಕೆ ಪತ್ರದ ಕ್ಲಾಸ್–3ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ: 0821–2418828 ರಿಂದ ಮಾಹಿತಿ ಪಡೆಯಬಹುದು. ಈ ಕೆಳಕಂಡಂತೆ ನಿಗದಿಪಡಿಸಿದ ಇಎಂಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇಎಂಡಿಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

ಕಾಮಗಾರಿಗಳ ಹೆಸರು : (1) ಮರ/ಗಿಡಗಳನ್ನು ನೆಡುವುದು: ನೇರವಾಗಿ ಮಣ್ಣನ್ನು ಅಗೆದು ಘನಾಕೃತಿಯಲ್ಲಿ ಗುಂಡಿಯನ್ನು ಅಗೆಯುವುದು ಮತ್ತು ತೆಗೆದ ಮಣ್ಣನ್ನು ಗುಂಡಿಯ ಬದಿಯಲ್ಲಿ ಗುಡ್ಡೆ ಮಾಡುವುದು. 1*1*1 ಘಮೀ (ಸಾಧಾರಣ ಮಣ್ಣು), ಕೊಟ್ಟಿಗೆ ಗೊಬ್ಬರ ಮತ್ತು ಕೆಂಪು ಮಣ್ಣು ಮಿಶ್ರಣದಿಂದ ತುಂಬುವುದು ಹಾಗೂ ಚೆನ್ನಾಗಿ ಬೆಳೆದ ಗಿಡಗಳನ್ನು ನೆಡುವುದು ಮತ್ತು ಗಿಡಗಳಿಗೆ ಆಧಾರ ಕೋಲನ್ನು ನೆಡುವುದು (ಗಿಡದ ಬೆಲೆಯನ್ನು ಹೊರತುಪಡಿಸಿ). ಅಂದಾಜು ಮೊತ್ತ: **ರೂ. 25,32,000/–**. ಇಎಂಡಿ: **ರೂ. 76,000/–**. ಕಾಲಾವಧಿ: **15 ದಿನಗಳು**. (2) ಮೈಸೂರು ಮಹಾನಗರ ಪಾಲಿಕೆಯ ಉದ್ದೇಶಿತ ಇಂಟಿಗ್ರೇಟೆಡ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಸ್ಥಾಪಿಸಲು ಅವಶ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸುವುದು. ಅಂದಾಜು ಮೊತ್ತ: **ರೂ. 40,22,630/–**. ಇಎಂಡಿ: **ರೂ. 1,20,680/–**. ಕಾಲಾವಧಿ: **15 ದಿನಗಳು**. (3) ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ವಿವಿಧ ಮಾದರಿಯ ವಾಹನಗಳಿಗೆ ಅಗತ್ಯವಿರುವ 345 ಸಂಖ್ಯೆ ಜಿಪಿಎಸ್ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವುದು. ಅಂದಾಜು ಮೊತ್ತ: **ರೂ. 16,50,000/–**. ಇಎಂಡಿ: **ರೂ. 41,250/–**. ಕಾಲಾವಧಿ: **15 ದಿನಗಳು**. (4) ಮೈಸೂರು ಮಹಾನಗರ ಪಾಲಿಕೆಯ ಟಾಟಾ ಏಸ್ ಟಿಪ್ಪರ್ ವಾಹನಗಳಿಗೆ ಧ್ವನಿವರ್ಧಕ (ಹಾರ್ನ್ ಸ್ಪೀಕರ್), ಆಡಿಯೋ ಸಿಸ್ಟಂ (ಆಂಪ್ಲಿಫೈಯರ್), ಹ್ಯಾಂಡ್ ಮೈಕ್ ಸರಬರಾಜು ಮಾಡಿ ಅಳವಡಿಸುವುದು. ಅಂದಾಜು ಮೊತ್ತ: **ರೂ. 11,29,670/–**. ಇಎಂಡಿ: **ರೂ. 28,240/–**. ಕಾಲಾವಧಿ: **15 ದಿನಗಳು**. (5) ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಐಷರ್ ಸಂಸ್ಥೆಯ ಕೆಎ09–ಬಿ–2157 ಕಾಂಪ್ಯಾಕ್ಟರ್ ಮತ್ತು ಟಾಟಾ ಸಂಸ್ಥೆಯ ಕೆಎ09–ಡಿ–3847 ಕಾಂಪ್ಯಾಕ್ಟರ್ ವಾಹನದ ತ್ಯಾಜ್ಯಗಳನ್ನು ತುಂಬುವ ಹೈಡ್ರಾಲಿಕ್ ಬಕೆಟ್, ತುಂಡಾಗಿರುವ ಕಸ ಕಂಪ್ರೆಸ್ ಮಾಡುವ ಸ್ಲೈಡರ್ ಬಕೆಟ್ ಮತ್ತು ತುಕ್ಕು ಹಿಡಿದು ಸವೆದು ಹೋಗಿರುವ ಪ್ಲಾಟ್‌ಫಾರಂ, ಕಿಟ್ ಇವುಗಳ ದುರಸ್ತಿ ಕೆಲಸಗಳನ್ನು ನಿರ್ವಹಿಸುವುದು. ಅಂದಾಜು ಮೊತ್ತ: **ರೂ. 5,70,412/–**. ಇಎಂಡಿ: **ರೂ. 14,260/–**. ಕಾಲಾವಧಿ: **15 ದಿನಗಳು**.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ : **09.01.2023, ಬೆಳಿಗ್ಗೆ 11.00 ರ ನಂತರ.**
2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ : **23.01.2023, ಸಂಜೆ 5.00 ಗಂಟೆವರೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಕಾಲ : **24.01.2023, ಸಂಜೆ 5.00 ಗಂಟೆಯ ನಂತರ.**

ವಿಶೇಷ ಸೂಚನೆ: ಟೆಂಡರ್ ಸಲ್ಲಿಸುವ ಅರ್ಹ ಸರಬರಾಜುದಾರರು ತಮ್ಮ ರಹದಾರಿ ಪ್ರತಿಯನ್ನು ಹಾಗೂ ತಮ್ಮ ಅಂಚೆ ವಿಳಾಸ ಮತ್ತು ಮೊಬೈಲ್ ಸ್ಥಿರ ದೂರವಾಣಿಯನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಿದೆ. ಸೇವಾಶುಲ್ಕವನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಲಾಗಿದೆ.

ಸಹಿ/–
ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/876/2022–23

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ, ನಿಮ್ಮ ಮಗಳು ದೊಡ್ಡವಳಾದ ಮೇಲೆ ಡಾಕ್ಟರ್ ಅಗ್ತಾಳೆ
ಪತಿ : ಹೇಗೆ ಅಷ್ಟು ಕರೆಕ್ಟ್ ಆಗಿ ಹೇಳ್ತೀಯಾ?
ಪತ್ನಿ : ಹೇಗೆ ಅಂದರೆ ಅವಳು ಬರೆದ ಅಕ್ಷರ ಅವಳಿಗೇ ಅರ್ಥ ಆಗ್ತಿಲ್ಲ!

ಮೈಸೂರು ಮಿತ್ರ

ಶನಿವಾರ, 14 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇತರರನ್ನು ನಿಂದಿಸುವ ಮೂಲಕ ತನ್ನ ಉತ್ಕರ್ಷವನ್ನು ಸಾಧಿಸಲು ಹವಣಿಸಬಾರದು. –ಮಹಾಭಾರತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆನೆ ಭಾರ ಆನೆಗೆ ಸೊಳ್ಳೆ ಭಾರ ಸೊಳ್ಳೆಗೆ

ನಿಮ್ಮ ಪತ್ರಗಳು

ಹಾಡುಹಗಲೇ ಮರಗಳ ಕೊಲೆ!

ಮಾನ್ಯರೇ,



ಮೈಸೂರಿನ ಪ್ರತಿಷ್ಠಿತ ಅಕ್ಕ ಮಹಾದೇವಿ ರಸ್ತೆಯ ಸೌಖ್ಯ ಆಸ್ಪತ್ರೆಯ ಫ್ರೋಸ್ಟ್ ಆಫೀಸ್‌ನ ಎದುರು ಜನವರಿ 12 ರಂದು ನಡೆದ ಘಟನೆ. ಸರಿ ಸುಮಾರು ಮಧ್ಯಾಹ್ನ 12.45 ರಲ್ಲಿ ಏಕಾಏಕಿ ವಿದ್ಯುತ್ ಕಾಮಗಾರಿ ನಿರತ ಸಿಬ್ಬಂದಿ (KEB) ಮರಗಳ ಹತ್ಯೆ ಮಾಡಲು ಮುಂದಾದರು. ಇದನ್ನು ಗಮನಿಸಿದ ಎಷ್ಟೋ ಜನರು ಗೊಣಗಿಕೊಂಡು ಮುಂದೆ ಸಾಗಿದರು. ವಿದ್ಯುತ್ ತಂತಿಗೆ ಅಡ್ಡವಾದ ಮರದ ಕೊಂಬೆಗಳನ್ನು ಕಡಿಯಲು ಅನುಮತಿ ಇದೆ ನಿಜ. ಆದರೆ ವಿದ್ಯುತ್ ತಂತಿಗೂ ಮರವಿರುವ ಸ್ಥಳಕ್ಕೂ ಸಾಕಷ್ಟು ಅಂತರವಿದ್ದು, ಮರಗಳು ಸಹ ಅತ್ಯಂತ ಬಲಿಷ್ಠವಾಗಿದ್ದು, ಅವುಗಳನ್ನು ಕೊಲೆ ಮಾಡಿದ್ದು ಸರಿಯೇ? ಈ ಅಮಾಯಕ ಮರಗಳು ನಿಮ್ಮ ವಿದ್ಯುತ್ ತಂತಿಗೆ ಯಾವ ರೀತಿ ತೊಂದರೆ ನೀಡುತಿತ್ತು?

ಹಿರಿಯರು ಹೇಳುವ ಹಾಗೆ "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎಂಬಂತೆ ಈ ಮರಗಳನ್ನು ನೆಡಲು ನಮ್ಮ ಸಹೋದ್ಯೋಗಿಗಳು ಅದೆಷ್ಟು ಶ್ರಮಿಸಿದರೋ! ಈಗ ಈ ಹಂತಕರ ಕೈಯಲ್ಲಿ ಸಿಕ್ಕಿ ಸಾವಪ್ಪಿವೆ ಪಾಪದ ಮರಗಳು. ವರ್ಷಕ್ಕೆ ಒಂದು ಸರಿ (June–05ಕ್ಕೆ) ಬರುವ ಎಲ್ಲಾ ಪ್ರಭಾವಿ ವ್ಯಕ್ತಿಗಳು ಗಿಡ ನೆಡುವ ನೆಪ ಕೇವಲ ಫೋಟೋ ಕ್ಲಿಕಿಸಿಕೊಳ್ಳಲು ಅಷ್ಟೇ ಸೀಮಿತವಾದರೆ ಸಾಲದು. ಗಿಡ ನೆಟ್ಟ ನಂತರ ಅವುಗಳ ಆರೈಕೆಯು ಅಷ್ಟೆ ಮಹತ್ವದ್ದು.

ಪೊಲೀಸರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಈ ಕೃತ್ಯವನ್ನು ಶೀಘ್ರವೇ ಪರಿಶೀಲಿಸಿ, ಸಾರ್ವಜನಿಕರಿಗೆ ಸೂಕ್ತ ಉತ್ತರ ನೀಡಬೇಕು ಹಾಗೂ KEB ಅವರು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಬೇಕು. ಈ ಕಾರ್ಯವನ್ನು ಮಾಡಲು ಅನುಮತಿ ಕೊಟ್ಟವರು ಯಾರು? ಬೇಜವಾಬ್ದಾರಿತನದ ಪರಮಾವಧಿ ತೋರಿದ ಅಧಿಕಾರಿಗಳು ದಯಮಾಡಿ ಇದನ್ನು ಗಮನಿಸಿ, ಆದೇಶ ಕೊಟ್ಟ ಇಂಜಿನಿಯರ್ ವಿರುದ್ಧ ಕ್ರಮ ಜರುಗಿಸಿ, ಶೀಘ್ರವೇ ಬದಲಿ ಗಿಡಗಳನ್ನು ನೆಡಬೇಕಾಗಿ ವಿನಂತಿ.

–ಡಾ. ಚಂದನ್, ಜೆ.ಪಿ.ನಗರ ನಿವಾಸಿ, ಮೈಸೂರು

ರಾಮಕೃಷ್ಣನಗರ ಎಸ್‌ಬಿಐನಲ್ಲಿ ಮಂದಗತಿಯಲ್ಲಿ ವ್ಯವಹಾರ !

ಮಾನ್ಯರೇ,



ಮೈಸೂರಿನ ಕನಕದಾಸನಗರ ಮುಖ್ಯ ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಇಂಡಿಯಾ ಬ್ಯಾಂಕಿನ ಶಾಖೆಯಲ್ಲಿ ವ್ಯವಹಾರ ತುಂಬಾ ಮಂದಗತಿಯಲ್ಲಿ ಸಾಗುತ್ತಿದೆ. ಗ್ರಾಹಕರು ಒಂದು ಸಣ್ಣ ವಿಷಯ ಕೇಳಲು ಬಂದರೂ ಗಂಟೆಗಟ್ಟಲೇ ಕಾಯುವ ಪರಿಸ್ಥಿತಿ ಉಂಟಾಗಿದೆ. ನಾನು ಹೊಸ ಎಟಿಎಂ ಕಾರ್ಡ್‌ಗೆ ಅರ್ಜಿ ಸಲ್ಲಿಸಿ 20 ದಿವಸಗಳಾದರೂ ಇನ್ನೂ ಕಾರ್ಡ್ ಬಂದಿಲ್ಲ. ಅಲ್ಲಿಗೆ ಹೋಗಿ ವಿಚಾರಿಸಿದಾಗ ಪುನಃ 15 ದಿನ ಕಾಯಬೇಕೆಂದು ಅಲ್ಲಿನ ವ್ಯವಸ್ಥಾಪಕರು ತಿಳಿಸಿದರು. ಮಣಿಪಾಲ್‌ನಿಂದ ಕಾರ್ಡ್ ಬರಬೇಕು. ಅದಕ್ಕೆ ನೀವು ಮತ್ತಷ್ಟು ದಿನ ಕಾಯಲೇಬೇಕು ಎಂದು ತಿಳಿಸಿದರು. ಬೇರೆ ಬ್ಯಾಂಕುಗಳಲ್ಲಿ ಹೆಸರಿಲ್ಲದ ಎಟಿಎಂ ಕಾರ್ಡ್ ತಕ್ಷಣ ವಿತರಿಸುತ್ತಾರೆ. ಆದರೆ ಅದು ಎಸ್‌ಬಿಐಗೆ ಇನ್ನೂ ಅನ್ವಯಿಸಿಲ್ಲ. ಇನ್ನು ಸಕ್ಕರೆ ಕಾಯಿಲೆ, ಮಧುಮೇಹ ವಿರುವ ವಯೋವೃದ್ಧರು ಪೆನ್ಷನ್‌ಗೆ ಸಂಬಂಧಪಟ್ಟ ಅಥವಾ ಇನ್ನಾವುದೇ ವಿಷಯ ಕೇಳಲು ಬಂದರೂ ತುಂಬಾ ಹೊತ್ತು ಕಾಯುತ್ತಾರೆ. ಗಣಕ ಯಂತ್ರ ವಿಭಾಗದಲ್ಲಿ ಸಾಕಷ್ಟು ಸಿಬ್ಬಂದಿ ಇದ್ದರೂ ಕೆಲಸ ಮಾತ್ರ ತ್ವರಿತ ಗತಿಯಲ್ಲಿ ಸಾಗದೇ ನಿಧಾನವಾಗಿ ಸಾಗುತ್ತಿದೆ. ದಯವಿಟ್ಟು ಇನ್ನು ಮುಂದಾದರೂ ಬ್ಯಾಂಕಿನ ಸಿಬ್ಬಂದಿ ಚುರುಕಾಗಿ, ಗ್ರಾಹಕರನ್ನು ಹೆಚ್ಚು ಹೊತ್ತು ಕಾಯಿಸದೇ ಅವರಿಗೆ ಸ್ಪಂದಿಸಬೇಕೆಂದು ವಿನಂತಿ.

–ಜೆ.ಪಿ.ಹರೀಶ್, ವಿ.ವಿ. ಮೊಹಲ್ಲಾ, ಮೈಸೂರು

ಗ್ರಂಥಾಲಯ ಆವರಣ ಸ್ವಚ್ಛಗೊಳಿಸಿ



ಮಾನ್ಯರೆ,

ಮೈಸೂರಿನ ಕುವೆಂಪುನಗರ ಗ್ರಂಥಾಲಯದ ಆವರಣದಲ್ಲಿ ಗಿಡಗಂಟಿಗಳು ಬೆಳೆದು ನಿಂತಿದೆ. ಗ್ರಂಥಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಓದುಗರು ಬರುತ್ತಾರೆ. ಬೆಳೆದು ನಿಂತ ಗಿಡಗಂಟಿಗಳ ಮಧ್ಯೆ ವಿಷಕಾರಿ ಹಾವುಗಳು ಸೇರುವುದು ಸಹಜ. ವಿದ್ಯಾರ್ಥಿಗಳು ತಮ್ಮ ಸೈಕಲ್ ಅಥವಾ ದ್ವಿಚಕ್ರ ವಾಹನಗಳನ್ನು ಆವರಣದಲ್ಲಿ ನಿಲ್ಲಿಸುತ್ತಾರೆ. ನಿಲ್ಲಿಸುವುದರಿಂದ ಹಾವುಗಳು ದ್ವಿಚಕ್ರ ವಾಹನಗಳನ್ನು ಸೇರುವುದುಂಟು. ಇದರಿಂದ ತುಂಬಾ ಅಪಾಯವಿದ್ದು ಸಂಬಂಧಪಟ್ಟವರು ಗಮನಿಸಿ ಸ್ವಚ್ಛಗೊಳಿಸಬೇಕೆಂದು ಮನವಿ.

–ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.

ಶತಮಾನದ ಸಂತ ಸಿದ್ದೇಶ್ವರ ಶ್ರೀಗಳು

ಮಾನ್ಯರೆ,

ಸಾಧು ಸಂತರು ಸುಸಂಸ್ಕೃತರು ಹುಟ್ಟಿದ ನೆಲದಲ್ಲಿ ಶತಮಾನದ ಸಂತ ಶ್ರೀ ಸಿದ್ದೇಶ್ವರ ಅವರ ಅಗಲಿಕೆ ನಾಡಿನ ಸಂತ ಪರಂಪರೆಯ ತಾಯಿಯ ಕೊಂಡಿ ಕಳಚಿದೆ.

ಸರಳತೆಯ ಮೇರು ವ್ಯಕ್ತಿತ್ವದ ಸಿದ್ದೇಶ್ವರ ಶ್ರೀಗಳು ತಮ್ಮ ಪ್ರವಚನಗಳ ಮೂಲಕ ಜನರಲ್ಲಿ ಅರಿವಿನ ಜ್ಞಾನ ಹೆಚ್ಚಿಸಿದರು. ಸಂತ ಅಂದರೆ ಯಾರು, ಸಂತನ ಕರ್ತವ್ಯ ಏನು ಎಂದು ಪ್ರವಚನಗಳ ಮೂಲಕ ತೋರಿಸಿ ಕೊಟ್ಟವರು. ಜ್ಞಾನದ ಬೆಳಕನು ಜನಸಾಮಾನ್ಯರಲ್ಲಿ ಬಿತ್ತಿದ್ದರು. ಯಾವುದೇ ಪಂಥಕ್ಕೆ ಅಂಟಿಕೊಳ್ಳದ ಧೀಮಂತ ಸಂತ ಶ್ರೀ ಸಾಮಾನ್ಯರಿಗೆ ನಡೆದಾಡುವ ದೇವರು. ಸಿದ್ದೇಶ್ವರ ಶ್ರೀಗಳ ಸಂದೇಶ ಸತ್ಯವು ಇಲ್ಲಾ, ಅಸತ್ಯವು ಇಲ್ಲ, ಸಹಜವು ಇಲ್ಲ, ಅಸಹಜವು ಇಲ್ಲ, ನಾನು ಇಲ್ಲ, ನೀನು ಇಲ್ಲ, ಇಲ್ಲ.. ಇಲ್ಲ.. ಎಂಬುದು ನಾನು ಇಲ್ಲ ಎಂಬ ತಮ್ಮ ಅಂತಿಮ ಸಂದೇಶ ಸಾರುತ್ತಾ ಇಹಲೋಕ ತ್ಯಜಿಸಿದ ಸ್ವಾಮಿ ಸಿದ್ದೇಶ್ವರ ಶ್ರೀಗಳು ಭಕ್ತರ ಮನದಲ್ಲಿ ಎಂದೆಂದೂ ಜೀವಂತ.

–ಕಂಗಾಣಿಸೋಮು ಪಿ.ಸಿ.,ಕ್ಯಾತಮಾರನಹಳ್ಳಿ, ಮೈಸೂರು



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಹುತಾತ್ಮನಾಗಿಯೂ ಜೀವಂತವಾಗಿರುವ ಯೋಧ ಜಸ್ವಂತ್‌ಸಿಂಗ್ ರಾವತ್





ಹುತಾತ್ಮನಾದ ನಂತರವೂ ರಜೆ, ಪೂರ್ಣವೇತನ, ಪದೋನ್ನತ ಪಡೆಯುತ್ತಿರುವ ಪ್ರಾಯಶಃ ಜಗತ್ತಿನ ಏಕೈಕ ಯೋಧ ಜಸ್ವಂತ್. ಆತನ ಮನೆಗೆ ಈಗಲೂ ಪಿಂಚಣಿ ಬದಲು ಪೂರ್ಣ ವೇತನ ನೀಡಲಾಗುತ್ತಿದೆ. ರೈಫಲ್ ಮನ್ ಆಗಿ ಸೇನೆಗೆ ಸೇರಿದ ಜಸ್ವಂತ್ ನಂತರ ಕ್ಯಾಪ್ಟನ್ ಆಗಿ ಪ್ರಸ್ತುತ ಮೇಜರ್ ಜನರಲ್ ರ್‍ಯಾಂಕ್‌ನಲ್ಲಿದ್ದಾನೆ. ಆತನಿಗಾಗಿ ನಿರ್ಮಿಸಿರುವ ಮಂದಿರದಲ್ಲಿ ಆತನ ವಸ್ತುಗಳನ್ನು ಇರಿಸಲಾಗಿದೆ. ನಾಲ್ವರು ಸೈನಿಕರು ಅವನಿದ್ದ ಕೋಣೆಯನ್ನು ನೋಡಿಕೊಳ್ಳುತ್ತಾರೆ. ಆತನಿಗೆ ಬೆಳಗಿನ ಜಾವ 4.30ಕ್ಕೆ ಚಹಾ, 9 ಗಂಟೆಗೆ ಬೆಳಗಿನ ಉಪಾಹಾರ, ಭೋಜನ ಎಲ್ಲಾ ನೀಡಲಾಗುತ್ತಿದೆ. ಉತ್ತರಾಖಂಡದ ಅವನ ಮನೆಯಲ್ಲಿ ನಡೆಯುವ ಎಲ್ಲಾ ಸಮಾರಂಭಗಳಿಗೆ ಪರಿವಾರದವರು ರಜೆಗಾಗಿ ಅರ್ಜಿ ಸಲ್ಲಿಸುತ್ತಾರೆ.

ಭಾರತ ಮಹಾನ್ ಪರಾಕ್ರಮಿಗಳ ವೀರಭೂಮಿಯಾಗಿದೆ. ಅಸಂಖ್ಯಾ ವೀರರು ಈ ದೇಶದ ರಕ್ಷಣೆಗಾಗಿ ತಮ್ಮ ಸರ್ವಸ್ವವನ್ನು ಸಮರ್ಪಿಸಿದ್ದಾರೆ. ಈ ಪರಂಪರೆ ಮುಂದುವರಿಯುತ್ತಲೂ ಇದೆ. ಇವರಲ್ಲಿ ಓರ್ವ ಜಸ್ವಂತ್ ಸಿಂಗ್ ರಾವತ್. ಇವರು ಭಾರತೀಯ ಸೇನೆಯಲ್ಲಿ ರೈಫಲ್‌ಮನ್ ಆಗಿದ್ದರು. 1962ರ ಭಾರತ–ಚೀನಾ ಯುದ್ಧದಲ್ಲಿ ಪೂರ್ವದ ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನಲ್ಲಿ ಮಿಡಿತಗಳಂತೆ ಬರುತ್ತಿದ್ದ ಐನೂರಕ್ಕಿಂತ ಹೆಚ್ಚು ಚೀನಿ ಸೈನಿಕರನ್ನು ರಾವತ್ 72 ಗಂಟೆಗಳ ಕಾಲ ಏಕಾಂಗಿಯಾಗಿ ಎದುರಿಸಿ ಯುದ್ಧದ ದಿಶೆಯನ್ನೇ ಬದಲಿಸಿದ್ದರು.

ಉತ್ತರಾಖಂಡ ರಾಜ್ಯದ ಪೌಢಿ–ಗಢವಾಲ್ ಜಿಲ್ಲೆಯ ಬದ್ಯೂಂ ಗ್ರಾಮದಲ್ಲಿ ದಿನಾಂಕ 19.8.1941 ರಲ್ಲಿ ಜಸ್ವಂತ್ ಸಿಂಗ್ ರಾವತ್ ಜನಿಸಿದರು. ತಂದೆ ಗುಮನ್ ಸಿಂಗ್ ರಾವತ್, ತಾಯಿ ಲೀಲಾ ದೇವಿ ರಾವತ್. ಬಾಲ್ಯದಲ್ಲಿಯೇ ರಾವತ್‌ನಲ್ಲಿ ದೇಶದ ಬಗ್ಗೆ ಅಪಾರ ತುಡಿತವಿತ್ತು. ದೇಶ ಸೇವೆಗೆ ಸೇನೆಯೇ ಸರಿಯಾದ ಕ್ಷೇತ್ರ ಎಂದು ದಿನಾಂಕ 19.08.1960ರಲ್ಲಿ ಭಾರತೀಯ ಸೇನೆಯಲ್ಲಿ ರೈಫಲ್‌ಮನ್ ಆಗಿ ಸೇರಿದರು.

1962ರಲ್ಲಿ ಅರುಣಾಚಲ ಪ್ರದೇಶವನ್ನು ಆಕ್ರಮಿಸಲು ಚೀನಿ ಸೇನೆ ಭಾರೀ ಸಿದ್ಧತೆಯೊಂದಿಗೆ ಭೀಷಣ ಆಕ್ರಮಣ ಮಾಡಿತು. ಭಾರತೀಯ ಸೈನಿಕರ ಪ್ರತಿ ಧಾಳಿಯಿಂದ ಚೀನಿ ಸೈನಿಕರು ಎರಡು ಬಾರಿ ಮಾಡಿದ ಆಕ್ರಮಣ ವಿಫಲಗೊಂಡಿತು. ಸಿಟ್ಟಿಗೆದ್ದು ಹೆಚ್ಚಿನ ಸೇನಾಬಲದೊಂದಿಗೆ ಮೂರನೇ ಬಾರಿ ಮಾಡಿದ ಆಕ್ರಮಣದಲ್ಲೂ ಚೀನಿ ಸೈನಿಕರು ಏನೂ ಸಾಧಿಸಲಿಲ್ಲ. ತದನಂತರ ದಿನಾಂಕ 17.11.1962 ರಂದು ನಾಲ್ಕನೇ ಬಾರಿ ಪೂರ್ಣ ಪ್ರಮಾಣದ ತಯಾರಿ ಹಾಗೂ ಭಾರೀ ಸೇನಾ ಬಲದೊಂದಿಗೆ ಚೀನಿ ಸೇನೆ, ಭಾರತೀಯ ಸೇನಾ ನೆಲೆಗಳ ಮೇಲೆ ಎರಗಿತು. ಸುಮಾರು ಒಂದು ಸಾವಿರ ಕಿ.ಮೀ. ಉದ್ದದ ಭಾರತ–ಚೀನಾ ಗಡಿಯಲ್ಲಿ ಸಮುದ್ರ ಮಟ್ಟದಿಂದ ಹದಿನಾಲ್ಕು ಸಾವಿರ ಅಡಿ ಎತ್ತರದಲ್ಲಿ ರಕ್ತ ಹೆಪ್ಪುಗಟ್ಟಿಸುವ ಭಯಾನಕ, ಭೀಷಣ ಸಂಗ್ರಾಮ ನಡೆಯಿತು. ಚೀನಿ ಸೈನಿಕರು ಭಾರತದ ಭೂ ಭಾಗವನ್ನು ಆಕ್ರಮಿಸುತ್ತಾ ತವಾಂಗ್ ಪ್ರದೇಶ ವಶಪಡಿಸಿಕೊಂಡು ಇನ್ನೂ ಮುಂದಕ್ಕೆ ನುಗ್ಗುತ್ತಿದ್ದರು. ಶೌರ್ಯಕ್ಕಿಂತ ಹೆಚ್ಚಾಗಿ ಚೀನಿ ಸೈನಿಕರ ಬಳಿ ಇದ್ದ ಅತ್ಯಾಧುನಿಕ ಶಸ್ತ್ರಾಸ್ತ್ರಗಳೇ ಅವರ ಶಕ್ತಿಯಾಗಿತ್ತು. ಪ್ರಧಾನಿ ನೆಹರು ಹಾಗೂ ಆಗಿನ ರಕ್ಷಣಾ ಮಂತ್ರಿ ಕೃಷ್ಣ ಮೆನನ್‌ರು ದೇಶ ಹಾಗೂ ಸೇನೆಗೆ ಮಾಡಿದ ಮೋಸದಿಂದ ಭಾರತೀಯ ಸೈನಿಕರ ಬಳಿ ಹಳೆಯ ಹಾಗೂ ಪರಂಪರಾಗತ ಶಸ್ತ್ರಗಳಿದ್ದವು.

ಯುದ್ಧ ಮಾಡುವುದು ಶಸ್ತ್ರಗಳಲ್ಲ ಅದರ ಹಿಂದಿರುವ ವ್ಯಕ್ತಿ. ಭಾರತೀಯ ಸೈನಿಕರಲ್ಲಿ ದೇಶ ಭಕ್ತಿ ಅದಮ್ಯವಾಗಿತ್ತು ಭಾರತೀಯ ಸೈನಿಕರ ಶೌರ್ಯದ ಎದುರು ಚೀನಿ ಸೈನಿಕರು ಕುಬ್ಜರಾಗಿ ಕಾಣುತ್ತಿದ್ದರು. ತವಾಂಗ್‌ನಲ್ಲಿ ಮುಂದಕ್ಕೆ ಬರುತ್ತಿದ್ದ ಚೀನಿ ಸೇನೆಯನ್ನು ಭಾರತೀಯ ಸೈನಿಕರು ತಡೆದು ನಿಲ್ಲಿಸಿದರು. ಭಾರತೀಯ ಪಾಳಯದಲ್ಲಿ ಶಸ್ತ್ರಾಸ್ತ್ರಗಳು ಹಾಗೂ ಆಹಾರದ ಕೊರತೆಯನ್ನು ಗಮನಿಸಿ ಭಾರತೀಯ ಸೇನಾಧಿಕಾರಿಗಳು ಮುಂಚೂಣಿಯಲ್ಲಿದ್ದ ಗಢವಾಲ್ ರೈಫಲ್ಸ್‌ನ ನಾಲ್ಕನೇ ಬೆಟಾಲಿಯನ್‌ಗೆ ಹಿಂದಕ್ಕೆ ಬರುವಂತೆ ಆದೇಶ ನೀಡಿದರು. ಪರಿಸ್ಥಿತಿ ಗಂಭೀರವಾಗಿದ್ದರೂ ಮೂವರು ಯೋಧರು ಸೇನಾ ಚೌಕಿಗಳನ್ನು ಬಿಟ್ಟು ವಾಪಾಸು ಬರಲು ನಿರಾಕರಿಸಿದರು.

ಮೂವರ ಮಹೋನ್ನತ ಬಲಿದಾನ: ರೈಫಲ್ ಮನ್ ಜಸ್ವಂತ್ ಸಿಂಗ್ ರಾವತ್, ರೈಫಲ್‌ಮನ್ ಗೋಪಾಲಸಿಂಗ್ ಮತ್ತು ಲ್ಯಾನ್ಸ್ ನಾಯಕ್ ತ್ರಿಲೋಕ್ ಸಿಂಗ್ ಮೂವರು ಚೀನಿ ಸೇನೆಯ ಮೇಲೆ ಸಿಡಿಲಿನಂತೆ ಎರಗಿದರು. ಅನಂತರ ನಡೆದದ್ದು ಇತಿಹಾಸ ಮಹೋನ್ನತ ಹೋರಾಟದ ವೀರಗಾಥೆ. ಯುದ್ಧದ ದಿಕ್ಕನ್ನೇ ಬದಲಾಯಿಸಿತು. ಚೀನಿ ಸೇನೆಯ ಭೀಕರ ಗುಂಡಿನ ಧಾಳಿ ಎದುರಿಸುತ್ತಾ ಮೂವರು ಬೇಟೆಯಾಡಲು ಹೊರಟ ಸಿಂಹಗಳಂತೆ ಬಂಡೆಗಳ ಮರೆಯಲ್ಲಿ ಅಡಗುತ್ತಾ ಪೊದೆಗಳು, ಗಿಡಗಂಟಿಗಳ ನಡುವಿನಿಂದ ತೆವಳುತ್ತಾ ಚೀನಿ ಸೈನಿಕರ ಬಂಕರ್‌ಗಳ ಬಳಿ ತಲುಪಿದರು. ಕೆಲವೇ ಗಜ ದೂರದಿಂದ ಹ್ಯಾಂಡ್ ಗ್ರೆನೇಡ್‌ಗಳನ್ನು ಎಸೆದು ಚೀನಿ ಬಂಕರ್‌ಗಳನ್ನು ಉದ್ವಸ್ಥಗೊಳಿಸಿದರು. ಅನೇಕ ಸೈನಿಕರನ್ನು ಹೊಡೆದುರುಳಿಸಿ ಅವರ ಬಳಿ ಇದ್ದ ಮೆಷಿನ್ ಗನ್‌ಗಳನ್ನು ಕಸಿದು ತೆವಳುತ್ತಾ ಗೋಪಾಲ್ ಮತ್ತು ತ್ರಿಲೋಕ್ ಭಾರತದ ಗಡಿಯೊಳಗೆ ಸುರಕ್ಷಿತವಾಗಿ ಬರುವಷ್ಟರಲ್ಲಿ ಚೀನಿ ಸೇನೆಯ ಗುಂಡಿನ ಧಾಳಿಗೆ ಇಬ್ಬರು ಹುತಾತ್ಮರಾದರು. ತೀವ್ರ ಗಾಯಗೊಂಡಿದ್ದ ಜಸ್ವಂತ್ ಮೆಷಿನ್‌ಗನ್‌ಗಳೊಂದಿಗೆ ಭಾರತೀಯ ಬಂಕರ್ ತಲುಪಿದರು. ಅನಂತರ ಜಸ್ವಂತ್ ತಮ್ಮ ಬುದ್ಧಿವಂತಿಕೆ ಸಾಹಸ ಮತ್ತು ಶೌರ್ಯದ ಅದ್ಭುತ ಪರಿಚಯ ತೋರಿದರು. ಸ್ಥಾನೀಯ ನಿವಾಸಿಗಳಾದ ಮೊನ್ಪಾ ಜನ ಜಾತೀಯ ನೂರಾ ಮತ್ತು ಸೇಲಾ ಎಂಬ ಇಬ್ಬರು ಯುವತಿಯರ ಸಹಯೋಗದಲ್ಲಿ ರಾವತ್ ಒಂದು ಫಯರಿಂಗ್ ವಲಯ ನಿರ್ಮಿಸಿ ಮೂರು ಸ್ಥಾನಗಳಲ್ಲಿ ಮೆಷಿನ್‌ಗನ್ ಮತ್ತು ಫಿರಂಗಿಗಳನ್ನು ನಿಯೋಜಿಸುತ್ತಾನೆ. ಈ ತಂತ್ರದ ಮೂಲಕ ಭಾರತದ ಕಡೆ ಭಾರಿ ಸಂಖ್ಯೆಯ ಸೈನಿಕರಿದ್ದು ಮೂರು ಸ್ಥಾನಗಳಿಂದ ಧಾಳಿ ಮಾಡುತ್ತಿದ್ದಾರೆಂಬ ಭ್ರಮೆಯನ್ನು ಚೀನಿ ಸೈನಿಕರಲ್ಲಿ ಸೃಷ್ಟಿಸುವುದರಲ್ಲಿ ಯಶಸ್ವಿಯಾಗುತ್ತಾನೆ. ವಾಸ್ತವದಲ್ಲಿ ಜಸ್ವಂತ್ ಓರ್ವನೇ, ನೂರಾ ಮತ್ತು ಸೇಲಾರೊಂದಿಗೆ ಮೂರು ಕಡೆಗಳಿಂದ ಚೀನಿ ಸೈನಿಕರ ಮೇಲೆ ಗುಂಡಿನ ಸುರಿಮಳೆಗೈಯ್ಯುತ್ತಿದ್ದನು. ಚೀನಾ ಸಹಿತ ಜಗತ್ತೆ ನಿಬ್ಬೆರಗಾಗುವ ರೀತಿಯಲ್ಲಿ, ಭಾರತೀಯ ಸೇನೆ ಗರ್ವದಿಂದ ತಲೆ ಎತ್ತಿ ನಿಲ್ಲುವಂತೆ, ಸಮಸ್ತ ಭಾರತೀಯರು ನತಮಸ್ತಕವಾಗುವಂತೆ ಜಸ್ವಂತ್ ಏಕಾಂಗಿಯಾಗಿ ಮೂರು ದಿನಗಳ ಕಾಲ ಕಾಲಯಮನಂತೆ ಹೋರಾಡಿ ಅರುಣಾಚಲ ಪ್ರದೇಶ ವಶಪಡಿಸಿಕೊಳ್ಳುವ ಚೀನಿ ಸೇನೆಯ ಕನಸನ್ನು ನುಚ್ಚು ನೂರುಗೊಳಿಸುತ್ತಾನೆ. ದುರ್ಭಾಗ್ಯವಶಾತ್ ಜಸ್ವಂತ್‌ಗೆ ಆಹಾರವನ್ನು ತರುತ್ತಿದ್ದ ಯುವತಿ ನೂರಾಳನ್ನು ಸೆರೆ ಹಿಡಿದ ಚೀನಿ ಸೈನಿಕರು ಆಕೆಗೆ ನೀಡಿದ ಯಾತನಾಮಯ ಚಿತ್ರಹಿಂಸೆ ತಾಳಲಾರದೇ ಜಸ್ವಂತ್ ಬಗ್ಗೆ ಮಾಹಿತಿ ನೀಡುತ್ತಾಳೆ. ಈ ಹೊತ್ತಿಗೆ ಜಸ್ವಂತ್ ಮುನ್ನೂರಕ್ಕೂ ಹೆಚ್ಚು ಚೀನಿ ಸೈನಿಕರನ್ನು ಬೇಟೆಯಾಡಿದ್ದನು. ಜಸ್ವಂತ್ ಓರ್ವನೇ ತಮ್ಮ ಸೈನಿಕರ ಹತ್ಯೆ ಮಾಡಿರುವುದೆಂದು ತಿಳಿಯುತ್ತಲೇ ಚೀನಿ ಸೈನಿಕರು ಸಿಟ್ಟಿನಿಂದ ಸುತ್ತುವರಿದು ಜಸ್ವಂತ್ ಮೇಲೆ ಗ್ರೆನೇಡ್ ದಾಳಿ ನಡೆಸಿದರು. ಈ ಆಕ್ರಮಣದಲ್ಲಿ ಇನ್ನೋರ್ವ ಯುವತಿ ಸೇಲಾ ವೀರಗತಿ ಪಡೆದಳು. ಚೀನಿ ಸೇನೆ ತನ್ನನ್ನು ಸಂಪೂರ್ಣವಾಗಿ ಸುತ್ತುವರಿದಿರುವುದನ್ನು ತಿಳಿದ ಜಸ್ವಂತ್ ತಾನಿನ್ನು ಬದುಕಲಾರೆನೆಂದು ತಿಳಿದ ಸಿಂಹ ಸೆರೆಯಾಳಾಗುವುದನ್ನು ಬಯಸುವುದಿಲ್ಲ. ಜಸ್ವಂತ್ ಅಂತಿಮವಾಗಿ ತನಗಾಗಿ ಉಳಿಸಿದ ಗುಂಡನ್ನು ಹಾರಿಸಿ ತಾಯಿ ಭಾರತಿಯ ರಕ್ಷಣೆಯ ಮಹೋನ್ನತ ಕಾರ್ಯದಲ್ಲಿ ಹುತಾತ್ಮನಾಗುತ್ತಾನೆ. ಜಸ್ವಂತ್ ಶವದ ಬಳಿ ಚೀನಿ ಸೈನಿಕರು ಬರುತ್ತಿದ್ದಂತೆ, ಸಿಟ್ಟಿನಿಂದ ಆತನ ಕತ್ತನ್ನು ಕತ್ತರಿಸಿ ತಮ್ಮೊಂದಿಗೆ ಒಯ್ಯುತ್ತಾರೆ.

ಜಸ್ವಂತ್‌ನನ್ನು ಗೌರವಿಸಿದ ಚೀನಿ ಸೇನೆ: ನವೆಂಬರ್ 20 ರಂದು ಕದನವಿರಾಮ ಘೋಷಣೆಯಾಯಿತು. ಜಸ್ವಂತ್ ಪರಾಕ್ರಮದಿಂದ ಪ್ರಭಾವಿತರಾಗಿದ್ದ ಚೀನಿ ಸೇನಾಧಿಕಾರಿಗಳು ಕೆಲವು ದಿನಗಳ ನಂತರ ಕತ್ತರಿಸಿದ ತಲೆ ಜತೆಗೆ ಜಸ್ವಂತ್‌ನ ಕಂಚಿನ ಪ್ರತಿಮೆಯನ್ನು ಭಾರತೀಯ ಸೇನಾಧಿಕಾರಿಗಳಿಗೆ ಸಕಲ ಮಿಲಿಟರಿ ಗೌರವದೊಂದಿಗೆ ತಂದೊಪ್ಪಿಸಿದರು.

ರಣರಂಗದಲ್ಲಿ ಅಪ್ರತಿಮ ಪರಾಕ್ರಮ ತೋರಿದ ಜಸ್ವಂತ್ ಸಿಂಗ್‌ಗೆ ಮರಣೋತ್ತರ ಮಹಾವೀರ ಚಕ್ರ ನೀಡಿದರೆ, ತ್ರಿಲೋಕ್‌ಸಿಂಗ್ ಮತ್ತು ಗೋಪಾಲ್ ಸಿಂಗ್‌ರಿಗೆ ಮರಣೋತ್ತರ ವೀರಚಕ್ರ ನೀಡಿ ಗೌರವಿಸಲಾಯಿತು. ಅಸಾಮಾನ್ಯ ಸಾಹಸ ತೋರಿದ ಯುವತಿ ಸೇಲಾ ಸ್ಮೃತಿಯಲ್ಲಿ ತವಾಂಗ್‌ನ ಒಂದು ಪ್ರದೇಶಕ್ಕೆ ಸೇಲಾಪಾಸ್ ಎಂದು ನಾಮಕರಣ ಮಾಡಲಾಗಿದೆ. ಜಸ್ವಂತ್ ಅಂತಿಮ ಹೋರಾಟ ಮಾಡಿದ ಚೌಕಿಗೆ ಜಸ್ವಂತ್‌ಗಢ ಎಂದು ಹೆಸರಿಡಲಾಗಿದೆ. ಹಾಗೂ ಆತನಿಗಾಗಿ ಒಂದು ಮಂದಿರ ನಿರ್ಮಿಸಲಾಗಿದ್ದು, ಇದರಲ್ಲಿ ಚೀನಿ ಸೇನೆ ನೀಡಿದ ಕಂಚಿನ ಪ್ರತಿಮೆ ಪ್ರತಿಷ್ಠಾಪಿಸಲಾಗಿದೆ. ಆ ದಾರಿಯಲ್ಲಿ ಹೋಗುವ ಪ್ರತಿಯೊಬ್ಬರೂ ಆತನಿಗೆ ಗೌರವ ಸಲ್ಲಿಸುತ್ತಾರೆ.

ಹುತಾತ್ಮನಾಗಿ ಜೀವಂತವಾಗಿರುವ ಜಸ್ವಂತ್: ಭಾರತೀಯ ಸೇನೆಯ ವಿಶ್ವಾಸದಂತೆ ಜಸ್ವಂತ್ ಹುತಾತ್ಮನಾದ ನಂತರ ಈಗಲೂ ದೇಶದ ಗಡಿ ಕಾಯುತ್ತಿದ್ದಾನೆ. ಭಾರತೀಯ ಸೈನಿಕರಿಗೆ ಮಾರ್ಗದರ್ಶನ ಮಾಡುತ್ತಿದ್ದಾನೆ. ಕರ್ತವ್ಯದ ಸಮಯದಲ್ಲಿ ಯಾವನಾದರೂ ಸೈನಿಕ ನಿದ್ದೆ ಮಾಡುತ್ತಿದ್ದರೆ ಜಸ್ವಂತ್‌ನ ಆತ್ಮ ಆತನನ್ನು ಎಚ್ಚರಿಸುತ್ತಿದೆ ಎಂದು ಹೇಳುತ್ತಾರೆ. ಆತ ಈಗಲೂ ಜೀವಂತವಾಗಿದ್ದು ಕರ್ತವ್ಯದಲ್ಲಿದ್ದಾನೆ ಎಂಬ ನಂಬಿಕೆಯಿಂದ ಆತನ ಹೆಸರಿನ ಮುಂದೆ ದಿವಂಗತ, ಹುತಾತ್ಮ ಪದಗಳನ್ನು ಬಳಸಲಾಗುವುದಿಲ್ಲ. ಹುತಾತ್ಮನಾದ ನಂತರವೂ ರಜೆ, ಪೂರ್ಣವೇತನ, ಪದೋನ್ನತ ಪಡೆಯುತ್ತಿರುವ ಪ್ರಾಯಶಃ ಜಗತ್ತಿನ ಏಕೈಕ ಯೋಧ ಜಸ್ವಂತ್. ಆತನ ಮನೆಗೆ ಈಗಲೂ ಪಿಂಚಣಿ ಬದಲು ಪೂರ್ಣ ವೇತನ ನೀಡಲಾಗುತ್ತಿದೆ. ರೈಫಲ್ ಮನ್ ಆಗಿ ಸೇನೆಗೆ ಸೇರಿದ ಜಸ್ವಂತ್ ನಂತರ ಕ್ಯಾಪ್ಟನ್ ಆಗಿ ಪ್ರಸ್ತುತ ಮೇಜರ್ ಜನರಲ್ ರ್‍ಯಾಂಕ್‌ನಲ್ಲಿದ್ದಾನೆ. ಆತನಿಗಾಗಿ ನಿರ್ಮಿಸಿರುವ ಮಂದಿರದಲ್ಲಿ ಆತನ ವಸ್ತುಗಳನ್ನು ಇರಿಸಲಾಗಿದೆ. ನಾಲ್ವರು ಸೈನಿಕರು ಅವನಿದ್ದ ಕೋಣೆಯನ್ನು ನೋಡಿಕೊಳ್ಳುತ್ತಾರೆ. ಆತನಿಗೆ ಬೆಳಗಿನ ಜಾವ 4.30ಕ್ಕೆ ಚಹಾ, 9 ಗಂಟೆಗೆ ಬೆಳಗಿನ ಉಪಾಹಾರ, ಭೋಜನ ಎಲ್ಲಾ ನೀಡಲಾಗುತ್ತಿದೆ. ಉತ್ತರಾಖಂಡದ ಅವನ ಮನೆಯಲ್ಲಿ ನಡೆಯುವ ಎಲ್ಲಾ ಸಮಾರಂಭಗಳಿಗೆ ಪರಿವಾರದವರು ರಜೆಗಾಗಿ ಅರ್ಜಿ ಸಲ್ಲಿಸುತ್ತಾರೆ. ರಜೆ ಮಂಜೂರಾದ ಕೂಡಲೇ ಸೇನಾ ಸಿಬ್ಬಂದಿಗಳು ಆತನ ವಿಗ್ರಹ ಪೂರ್ಣ ಸೇನಾ ಸಮ್ಮಾನದೊಂದಿಗೆ ಕಾರ್ಯಕ್ರಮಕ್ಕೆ ತಂದು ಮುಗಿದ ನಂತರ ಮತ್ತೆ ತಂದು ಆತನ ಮಂದಿರದಲ್ಲಿ ಸ್ಥಾಪಿಸುತ್ತಾರೆ. ಜಸ್ವಂತ್‌ನನ್ನು ಎಲ್ಲರೂ ಸನ್ಮಾನದೊಂದಿಗೆ ಜಸ್ವಂತ್ ಬಾಬಾ ಎಂದು ಕರೆಯುತ್ತಾರೆ.

ಗಡಿ ಕಾಯುವ ಯೋಧರು ದೇಶದ ಜನರ ಭವಿಷ್ಯಕ್ಕಾಗಿ ತಮ್ಮ ವರ್ತಮಾನವನ್ನು ಬಲಿ ಕೊಡುತ್ತಾರೆ. ಇಂತಹ ಭಾರತೀಯ ಸೇನೆಯ, ಸೈನಿಕರ ಕುರಿತು ತುಚ್ಛವಾಗಿ, ಲಘುವಾಗಿ ಮಾತನಾಡುವ ಮುನ್ನ ದೇಶದ, ರಾಜ್ಯದ ಕೆಲವು ರಾಜಕೀಯ ನಾಯಕರು ತಮ್ಮ ಬುದ್ಧಿಯನ್ನು ಸ್ಥಿಮಿತದಲ್ಲಿರಿಸಿ, ನಾಲಗೆಯನ್ನು ನಿಯಂತ್ರಣದಲ್ಲಿರಿಸಿ ಹೇಳಿಕೆಗಳನ್ನು ನೀಡಲಿ. ತನ್ನ 21ನೇ ವಯಸ್ಸಿನಲ್ಲೇ ಅಪ್ರತಿಮ ಪರಾಕ್ರಮ ತೋರಿ ದೇಶಕ್ಕಾಗಿ ಸರ್ವೋಚ್ಚ ಬಲಿದಾನ ಮಾಡಿದ ಜಸ್ವಂತ್ ಸಿಂಗ್ ರಾವತ್‌ಗೆ ನಾವೊಂದು ಸೆಲ್ಯೂಟ್ ನೀಡಿ ಗೌರವಿಸೋಣ.

ಲೀಡ್ ಚಾಂಪಿಯನ್‌ಶಿಪ್ ವಿಜೇತರು



ಮೈಸೂರು, ಜ. 13– ಲೀಡ್, ಭಾರತದ ಅತಿದೊಡ್ಡ ಸ್ಕೂಲ್ ಎಜ್ಯುಟೆಕ್ ಕಂಪನಿ ಯಾದ ಲೀಡ್, 'ಲೀಡ್ ಚಾಂಪಿಯನ್ ಶಿಪ್ 2022' ರ ವಿಜೇತರನ್ನು ಪ್ರಕಟಿಸಿದೆ. ಮೈಸೂರಿನ ಆರ್ಕಿಡ್ಸ್ ಪಬ್ಲಿಕ್ ಸ್ಕೂಲ್‌ನ ಹಂಸಿಕಾ ಮತ್ತು ಸನ್ನಿಧಿ ಭಾರದ್ವಾಜ್ ಫೈನಲ್ ತಲುಪಿದ್ದಾರೆ ಎಂದು ಲೀಡ್ ಸಹ– ಸಂಸ್ಥಾಪಕ ಮತ್ತು ಸಿಇಒ ಸುಮೀತ್ ಮೆಹ್ತಾ ತಿಳಿಸಿದ್ದಾರೆ. ಪ್ರಜ್ಞಾ ಇನ್ನೋವೇಟಿವ್ ಸ್ಕೂಲ್‌ನ ನವ್ಯಾ ಪಿಜೆ ಮತ್ತು ಹಿಮವರ್ಷ ಮಾತನಾಡಿ, ಲೀಡ್ ಚಾಂಪಿಯನ್‌ಶಿಪ್ 2022 ರಂತಹ ರಾಷ್ಟ್ರೀಯ ಮಟ್ಟದ ವೇದಿಕೆಯಲ್ಲಿ ಗುರುತಿಸಿಕೊಳ್ಳುವ ಉತ್ಸಾಹವಿದೆ. ಚಾಂಪಿಯನ್ ಶಿಪ್‌ಗಾಗಿ ತಯಾರಿ ಮಾಡಿದ ಕಾರಣದಿಂದ ಪರಿಕಲ್ಪನೆಗಳ ಬಗ್ಗೆ ನಮ್ಮ ತಿಳಿವಳಿಕೆಯನ್ನು ಸುಧಾರಿಸಲು ಇದು ನಮಗೆ ಸಹಾಯ ಮಾಡಿತು. ಉತ್ತಮವಾಗಿ ಸಂವಹನ ಮಾಡುವುದು ಮತ್ತು ಸಹಯೋಗ ಮಾಡುವುದು, ನಮ್ಮ ಸೃಜನಶೀಲ ಕೌಶಲ್ಯಗಳನ್ನು ಹೇಗೆ ಅಭಿವೃದ್ಧಿಪಡಿಸುವುದು ಎಂಬುದನ್ನು ಸಹ ನಾವು ಕಲಿಯುತ್ತಿದ್ದೇವೆ ಎಂದರು.

ನಾಳೆ ಮೈಸೂರು ರೇಸ್ ಕೋರ್ಸ್‌ನಲ್ಲಿ ಯೋಗಥಾನ್

ಕಾರ್ಯಕ್ರಮ ಯಶಸ್ಸಿಗೆ ಸಹಕರಿಸಲು ಅಧಿಕಾರಿಗಳಿಗೆ ಡಿಸಿ ಸೂಚನೆ

- ರೇಸ್ ಕೋರ್ಸ್‌ಗೆ ಭೇಟಿ; ಜವಾಬ್ದಾರಿ ನಿರ್ವಹಣೆ ಸಂಬಂಧ ಚರ್ಚೆ
- ಅಂದು ಯೋಗಾಥಾನ್‌ನಲ್ಲಿ ಪಾಲ್ಗೊಳ್ಳುವವರ ವಾಹನಗಳಿಗೆ ಆದ್ಯತೆ ನೀಡಲು ಸಲಹೆ



ಮೈಸೂರು, ಜ.13– ಜ.15ರಂದು ನಡೆಯಲಿರುವ ಯೋಗಥಾನ್‌ನಲ್ಲಿ ಭಾಗವಹಿಸಲು ಇದುವರೆಗೂ 37 ಸಾವಿರಕ್ಕೂ ಹೆಚ್ಚು ಜನರು ನೋಂದಾಯಿಸಿಕೊಂಡಿದ್ದು, 80 ಸಾವಿರದವರೆಗೆ ಜನರು ಭಾಗವಹಿಸಲಿದ್ದಾರೆ. ಭಾಗವಹಿಸುವವರಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಅಗತ್ಯ ವ್ಯವಸ್ಥೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ಜ.15 ರಂದು ಯೋಗಥಾನ್ ಕಾರ್ಯಕ್ರಮ ನಡೆಯಲಿರುವ ಮೈಸೂರು ರೇಸ್ ಕೋರ್ಸ್ ಮೈದಾನಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಅಧಿಕಾರಿಗಳೊಂದಿಗೆ ಸಿದ್ಧತೆಗಳ ಕುರಿತು ಪರಿಶೀಲಿಸಿದರು.

ನಂತರ ಅಧಿಕಾರಿಗಳೊಂದಿಗೆ ಮಾತನಾಡಿದ ಅವರು, ಕಾರ್ಯಕ್ರಮವು ಬೆಳಗ್ಗೆ 8ರಿಂದ 8.40ರವರೆಗೆ ನಡೆಯಲಿದ್ದು ಬೆಳಗ್ಗೆ 6ರಿಂದಲೇ ಯೋಗಾಪಟುಗಳು ಮೈದಾನಕ್ಕೆ ಆಗಮಿಸಲಿದ್ದು, ಬೆಳಗ್ಗೆ 7ರಿಂದ ನೋಂದಣಿ ನಡೆಯಲಿದೆ. ಬೆಳಗ್ಗೆ ರೇಸ್ ಕೋರ್ಸ್ ಮೈದಾನಕ್ಕೆ ಸಂಪರ್ಕಿಸುವ ರಸ್ತೆಗಳಲ್ಲಿ ಯೋಗಥಾನ್‌ನಲ್ಲಿ ಭಾಗವಹಿಸುವ ವಾಹನಗಳಿಗೆ ಮಾತ್ರ ಅವಕಾಶ ಕಲ್ಪಿಸಲು ಈ ಸಂದರ್ಭದಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಸ್ವಯಂ ಸೇವಕರುಗಳನ್ನು ನೇಮಿಸಿ ಅವರಿಗೆ ಸ್ಥಳದ ಮಾರ್ಗದರ್ಶನ ನೀಡುವುದು. ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ಜವಾಬ್ದಾರಿಗಳನ್ನು ವಹಿಸಿ ಎಂದರು.

ಕುಡಿಯುವ ನೀರು, ಮೊಬೈಲ್ ಶೌಚಾಲಯ, ಪಾರ್ಕಿಂಗ್, ಆಂಬುಲೆನ್ಸ್ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ಯೋಗಥಾನ್‌ನಲ್ಲಿ ಭಾಗವಹಿಸುವ ಶಾಲಾ ಮಕ್ಕಳಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಂಡು ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಧಿಕಾರಿಗಳು ಕಾರ್ಯೋನ್ಮುಖರಾಗುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಲೋಕನಾಥ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ರೋಹಿತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಡಿ.ಅಶೋಕ್ ಕುಮಾರ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ವಿವಿ ಹಾಸ್ಟೆಲ್ ಅಡುಗೆ ಸಿಬ್ಬಂದಿ, ಸ್ವಚ್ಛತಾ ನೌಕರರ ಪ್ರತಿಭಟನೆ ಅಂತ್ಯ

ಮೈಸೂರು, ಜ.13(ಆರ್‌ಕೆಬಿ)– ಮೈಸೂರಿನ ವಿಶ್ವ ವಿದ್ಯಾನಿಲಯದ ಮಾನಸ ಗಂಗೋತ್ರಿ ಕುವೆಂಪು ದ್ವಾರದಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರು ವಿವಿ ಹಾಸ್ಟೆಲ್ ಅಡುಗೆ ಸಿಬ್ಬಂದಿ ಮತ್ತು ಸ್ವಚ್ಛತಾ ಕಾರ್ಯ ನೌಕರರು ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಪ್ರತಿಭಟನೆ 3ನೇ ದಿನವಾದ ಶುಕ್ರವಾರ ಸಂಜೆ ಅಂತ್ಯಗೊಂಡಿತು.

ಮೈಸೂರು ವಿವಿ ಕುಲಸಚಿವರಾದ ಶೈಲಜಾ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಬೇಡಿಕೆ ಈಡೇರಿಸುವ ಕುರಿತು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ವಾಪಸು ಪಡೆದಿರುವುದಾಗಿ ತಿಳಿಸಿದರು.

ಜ.17ರಂದು ವೈದ್ಯಾಧಿಕಾರಿಗಳ ನೇರ ನೇಮಕಾತಿ ಸಂದರ್ಶನ

ಮೈಸೂರು, ಜ.13– ಕೆ.ಆರ್. ರಸ್ತೆಯ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ (ಇಎಸ್‌ಐ) ವತಿಯಿಂದ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜ.17ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರ ಕೊಠಡಿಯಲ್ಲಿ ಸಂದರ್ಶನ ನಡೆಯಲಿದ್ದು, ಇಚ್ಛೆಯುಳ್ಳ ಆಕಾಂಕ್ಷಿಗಳು ಶೈಕ್ಷಣಿಕ ಪ್ರಮಾಣ ಪತ್ರಗಳ ಜೊತೆಗೆ ಎರಡು ಭಾವಚಿತ್ರಗಳ ಸಹಿತ ಹಾಜರಾಗಬಹುದು ಎಂದು ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ತಂದೆ ಮಾಡಿದ 'ಸಾಲ' ಮಗ ತೀರಿಸಬೇಕು

ರಾಜ್ಯ ಹೈಕೋರ್ಟ್ ಮಹತ್ವದ ಆದೇಶ

ಬೆಂಗಳೂರು, ಜ.13– ತಂದೆಯ ಆಸ್ತಿಯನ್ನು ಹಂಚಿಕೊಳ್ಳುವ ಮಗ ಅವರು ಮಾಡಿದ ಸಾಲವನ್ನೂ ತೀರಿಸಬೇಕು ಎಂದು ರಾಜ್ಯ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಆಕ್ಟ್ ಅಡಿಯಲ್ಲಿ, ಮೃತ ತಂದೆಯ ಜವಾಬ್ದಾರಿಗಳನ್ನು ಪೂರೈಸಲು ಮಗ ಹೊಣೆಗಾರನಾಗಿರುತ್ತಾನೆ ಎಂದು ಹೈಕೋರ್ಟ್ ತೀರ್ಪು ನೀಡಿದೆ. ನ್ಯಾಯಮೂರ್ತಿ ಕೆ.ನಟರಾಜನ್ ಅವರು ತಮ್ಮ ತಂದೆ ಸಾಲ ಪಡೆದಿರುವುದರಿಂದ ಕಾನೂನು ಕ್ರಮ ಜರುಗಿಸಲು ಸಾಧ್ಯವಿಲ್ಲ ಎಂಬ ಆರೋಪಿ ಬಿ.ಟಿ.ದಿನೇಶ್ ಅವರ ವಾದವನ್ನು ತಳ್ಳಿಹಾಕಿದರು. ಅಂತಿಮವಾಗಿ ತಂದೆಯ ಸಾಲವನ್ನೂ ಮಗ ತೀರಿಸಬೇಕು ಎಂದು ಕೋರ್ಟ್ ಆದೇಶ ನೀಡಿದೆ.

ಪ್ರಕರಣದ ವಿವರಗಳನ್ನು ಗಮನಿಸಿದರೆ ಭರಮಪ್ಪ ಎಂಬ ವ್ಯಕ್ತಿ ತನ್ನ ವ್ಯಾಪಾರ ಹಾಗೂ ಕುಟುಂಬದ ಅಗತ್ಯಗಳಿಗಾಗಿ ಪ್ರಸಾದ್ ರಾಯ್ಕರ್ ಎನ್ನುವವರಲ್ಲಿ 2,60,000 ರೂಪಾಯಿ ಸಾಲವಾಗಿ ಪಡೆದಿದ್ದು, ಈ ಸಾಲ ತೀರಿಸದೇ ಸಾವನ್ನಪ್ಪಿದ್ದಾನೆ. ಈ ಬಗ್ಗೆ ಪ್ರಾಮಿಸರಿ ನೋಟ್ ಕೂಡ ಬರೆಯಲಾಗಿತ್ತು. ಭರಮಪ್ಪ ಸಾವಿನ ನಂತರ ಪ್ರಸಾದ್, ಭರಮಪ್ಪನ ಮಗನನ್ನು ಸಾಲ ತೀರಿಸುವಂತೆ ಕೇಳಿದ್ದು, ಮಗ ದಿನೇಶ್ ಕೂಡ 2005ರಲ್ಲಿ 10 ಸಾವಿರ ರೂಪಾಯಿ. ಆ ನಂತರ ಹಲವು ಕಂತುಗಳಲ್ಲಿ 2,25,000 ರೂಪಾಯಿ ಮತ್ತು ಚೆಕ್ ನೀಡಿದ್ದಾನೆ. ಆದರೆ ಅವೆಲ್ಲವೂ ಬೌನ್ಸ್ ಆಗಿವೆ. ಹೀಗಾಗಿ ಸಾಲ ಕೊಟ್ಟ ಪ್ರಸಾದ್ ನ್ಯಾಯಾಲಯದ ಮೊರೆ ಹೋಗಿದ್ದಾನೆ. ಸದ್ಯ ಹೈಕೋರ್ಟ್, ಐಸಿಡಿಎಸ್ ಲಿಮಿಟೆಡ್ ವರ್ಸಸ್ ಬೀನಾ ಶಬೀರ್ ಮತ್ತು ಅನ್ಯ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ಉಲ್ಲೇಖಿಸಿ, ತಂದೆಯ ಸಾಲವನ್ನು ಮಗ ತೀರಿಸಬೇಕೆಂದು ತೀರ್ಪು ನೀಡಿದೆ.

ದ್ವೇಷ ಭಾಷಣ ಅಪಾಯಕಾರಿ: ಸುಪ್ರೀಂಕೋರ್ಟ್

ನವದೆಹಲಿ, ಜ.13–ದ್ವೇಷ ಭಾಷಣ ಅಪಾಯಕಾರಿ. ಮುಕ್ತ ಮತ್ತು ಸಮತೋಲಿತ ವರದಿ ಬಿತ್ತರಿಸುವ ಮಾಧ್ಯಮಗಳು ದೇಶಕ್ಕೆ ಬೇಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಅಭಿಪ್ರಾಯಪಟ್ಟಿದೆ. ದೇಶದಾದ್ಯಂತ ದ್ವೇಷ ಭಾಷಣ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ, 'ದ್ವೇಷ ಭಾಷಣ ಅಪಾಯಕಾರಿ, ಅದು ನಿಲ್ಲಲೇಬೇಕು' ಎಂದು ಹೇಳಿತು.

ಇತ್ತೀಚಿನ ದಿನಗಳಲ್ಲಿ ಸುದ್ದಿವಾಹಿನಿಗಳು ಟಿಆರ್‌ಪಿಗಾಗಿ ಪರಸ್ಪರ ಸ್ಪರ್ಧೆಗೆ ಇಳಿದು, ಸಮಾಜವನ್ನು ಇಬ್ಭಾಗ ಮಾಡುತ್ತಿವೆ. ದ್ವೇಷ ಭಾಷಣ ಬಿತ್ತುವ ಅಜೆಂಡಾಗಳಲ್ಲಿ ಟಿವಿ ನಿರೂಪಕರೂ ಭಾಗಿಯಾಗಿರುವುದು ಅಚ್ಚರಿ ಉಂಟುಮಾಡಿದೆ ಎಂದಿತು. ಮುದ್ರಣ ಮಾಧ್ಯಮಗಳಂತೆ ದೃಶ್ಯ ಮಾಧ್ಯಮಗಳಿಗೆ 'ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ' ಏಕಿಲ್ಲ ಎಂದೂ ಪ್ರಶ್ನಿಸಿತು.

'ಪಾಂಚಜನ್ಯ'ದಂತೆ 'ಪ್ರಜಾಧ್ವನಿ' ಯಾತ್ರೆ ಯಶಸ್ವಿ

- ರಾಜ್ಯದ ಜನ ಈ ಸಲ ಕಾಂಗ್ರೆಸ್ ಅಧಿಕಾರಕ್ಕೆ ತರುವುದು ಶತಸಿದ್ಧ
- ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ವಿಶ್ವಾಸ
- ಗೆಲುವಿಗೆ ಬೇಕಾದ ಎಲ್ಲಾ ಸಿದ್ಧತಾ ಕಾರ್ಯಗಳಾಗಿವೆ



ಮೈಸೂರು, ಜ.13(ಎಸ್‌ಬಿಡಿ)– ಪಾಂಚಜನ್ಯ ಯಾತ್ರೆಯಂತೆ ಪ್ರಜಾಧ್ವನಿ ಯಾತ್ರೆಯೂ ಯಶಸ್ವಿಯಾಗಲಿದ್ದು, ಮುಂದಿನ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್‌ಗೆ ಅಧಿಕಾರ ನೀಡಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವ ನಾರಾಯಣ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ 'ಪ್ರಜಾಧ್ವನಿ ಯಾತ್ರೆ' ಬಗ್ಗೆ ಮಾಹಿತಿ ನೀಡಿದ ಅವರು, ಎಸ್.ಎಂ.ಕೃಷ್ಣ ಅವರ ನೇತೃತ್ವದಲ್ಲಿ ನಡೆದಿದ್ದ ಪಾಂಚಜನ್ಯ ಯಾತ್ರೆ ಯಶಸ್ವಿಯಾಗಿ ಕಾಂಗ್ರೆಸ್‌ಗೆ ಬಹುಮತ ಲಭಿಸಿದ್ದರಿಂದ ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದರು. ಹಾಗೆಯೇ ಪ್ರಜಾಧ್ವನಿ ಯಾತ್ರೆಯೂ ಯಶಸ್ವಿಯಾಗಲಿದ್ದು, ಮತದಾರರು ಕಾಂಗ್ರೆಸ್‌ಗೆ ಬಹುಮತ ನೀಡಲಿದ್ದಾರೆಂಬ ವಿಶ್ವಾಸ ಗಟ್ಟಿಯಾಗಿದೆ ಎಂದರು.

ದಕ್ಷಿಣ ಭಾರತದಲ್ಲೇ ಕರ್ನಾಟಕದ ಜನತೆ ಬಿಜೆಪಿಗೆ 2008ರಲ್ಲಿ ಅವಕಾಶ ನೀಡಿದ್ದರು. ಆದರೆ ಆಗ ಮೂವರು ಸಿಎಂ ಆದರು. 6 ಸಚಿವರು ಭ್ರಷ್ಟಾಚಾರದಿಂದ ಜೈಲಿಗೆ ಹೋಗಿದ್ದರು. ಇದೀಗ ಎರಡನೇ ಬಾರಿ ಅಧಿಕಾರ ಹಿಡಿದಿರುವಾಗಲೂ ಮೂವರ ಸಚಿವರು ಭ್ರಷ್ಟಾಚಾರದಿಂದ ರಾಜೀನಾಮೆ ನೀಡಿದ್ದಾರೆ. ದೇಶದ ಅತ್ಯಂತ ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ. 300 ಆಶ್ವಾಸನೆ ನೀಡಿದ್ದ ಬಿಜೆಪಿ ಈಡೇರಿಸಿದ್ದು 60 ಮಾತ್ರ. ಅಭಿವೃದ್ಧಿ ಸಂಬಂಧ ಮಾತನಾಡುವ ಧೈರ್ಯ ಯಾವ ನಾಯಕರಿಗೂ ಇಲ್ಲ. ರಾಮನಗರದಲ್ಲಿ ರಾಮನ ದೇವಸ್ಥಾನ, ಮಂಡ್ಯದಲ್ಲಿ ಹನುಮಂತನ ದೇವಸ್ಥಾನ ಕಟ್ಟಿಸಬೇಕೆಂದು ಭಾವನಾತ್ಮಕ ವಿಚಾರಗಳ ಬಗ್ಗೆಯೇ ಮಾತನಾಡುತ್ತಾರೆ. ಆಡಳಿತ ವಿರೋಧಿ ಅಲೆ ಎದ್ದಿದೆ. ಹಾಗಾಗಿ ಜನ ಅಭಿವೃದ್ಧಿಯೇ ಮಾನದಂಡವಾಗಿರುವ ಕಾಂಗ್ರೆಸ್ ಬೆಂಬಲಿಸುವುದು ಖಚಿತ ಎಂದರು.

ಗೆಲುವೇ ಮಾನದಂಡ: ಈವರೆಗೆ ಚುನಾವಣೆ ಘೋಷಣೆ ಬಳಿಕ ಸಿದ್ಧತಾ ಪ್ರಕ್ರಿಯೆ ಆರಂಭವಾಗುತ್ತಿತ್ತು. ಆದರೆ ಈ ಬಾರಿ ಆಕಾಂಕ್ಷಿಗಳಿಂದ ಅರ್ಜಿ ಸ್ವೀಕರಿಸಲಾಗಿದೆ. ಪ್ರತಿ ಕ್ಷೇತ್ರಕ್ಕೂ ಉಸ್ತುವಾರಿ ನೇಮಿಸಿ ಅಭಿಪ್ರಾಯ ಸಂಗ್ರಹಿಸಲಾಗಿದೆ. ಪಕ್ಷದ ಪ್ರಮುಖರಾದ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರು ನಾಳೆ ಉಸ್ತುವಾರಿಗಳ ಸಭೆ ನಡೆಸಲಿದ್ದಾರೆ. ಮುಂದಿನ ಚುನಾವಣೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದು ಗೆಲುವೇ ಮಾನದಂಡ ಎನ್ನುವ ರೀತಿಯಲ್ಲಿ ಅಭ್ಯರ್ಥಿಗಳ ಆಯ್ಕೆ ಮಾಡಿ, ದೆಹಲಿಯಲ್ಲಿ ಪಟ್ಟಿ ಪ್ರಕಟಿಸುವುದರಿಂದ ಯಾವುದೇ ಗೊಂದಲವಾಗದು ಎಂದು ಅಭಿಪ್ರಾಯಿಸಿದರು.

> **"ಬೆಂಗಳೂರಿನ ಅರಮನೆ ಮೈದಾನದಲ್ಲಿ ಜ.16ರಂದು ನಡೆಯಲಿರುವ ಕಾಂಗ್ರೆಸ್ ಮಹಿಳಾ ಸಮಾವೇಶದಲ್ಲಿ ಪ್ರಿಯಾಂಕಾ ಗಾಂಧಿ ಭಾಗವಹಿಸಲಿದ್ದಾರೆ. ಉತ್ತರಪ್ರದೇಶ, ಹಿಮಾಚಲ ಪ್ರದೇಶ ಚುನಾವಣೆ ಉಸ್ತುವಾರಿ ವಹಿಸಿಕೊಂಡಿದ್ದ ಅವರು ಈಗ ನಮ್ಮ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಆ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ 5 ಸಾವಿರ ಮಂದಿ ತೆರಳಲಿದ್ದಾರೆ.**
> **–ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ**

ಪ್ರತಿ ಜಿಲ್ಲೆಯಲ್ಲೂ ಘೋಷಣೆ: ಪ್ರಜಾಧ್ವನಿ ಸಮನ್ವಯ ಸಮಿತಿ ಅಧ್ಯಕ್ಷರೂ ಆದ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಮಾತನಾಡಿ, ಪ್ರಜಾಧ್ವನಿ ಯಾತ್ರೆಗೆ ಚಾಲನೆ ನೀಡಿದ ಸಂದರ್ಭದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಕಲ್ಪಿಸುತ್ತೇವೆಂದು ಘೋಷಿಸಿದ್ದು, ರಾಜ್ಯದೆಲ್ಲೆಡೆ ಭಾರೀ ಚರ್ಚೆಯಲ್ಲಿದೆ. ಹೀಗೆಯೇ ಯಾತ್ರೆಯಲ್ಲಿ ಪ್ರತಿ ಜಿಲ್ಲೆಯಲ್ಲೂ ಒಂದೊಂದು ಕಾರ್ಯಕ್ರಮ ಘೋಷಿಸುವ ಚಿಂತನೆ ಇದೆ. ಅವುಗಳನ್ನು ಈಡೇರಿಸುವ ವಿಶ್ವಾಸವನ್ನೂ ಜನರಲ್ಲಿ ತುಂಬಲಾಗುವುದು. ಮನಿ ಮೇಕಿಂಗ್ ಬಿಜೆಪಿ ಸರ್ಕಾರದ ದುರಾಡಳಿತದಿಂದ ಜನ ರೋಸಿ ಹೋಗಿದ್ದಾರೆ. ಎಲ್ಲಾ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲೂ ಸಂಪೂರ್ಣ ವಿಫಲವಾಗಿರುವ ಬಿಜೆಪಿಯನ್ನು ಜನ ಧಿಕ್ಕರಿಸಲಿದ್ದಾರೆ ಎಂದು ಹೇಳಿದರು.

ಹೆಚ್ಚಿದ ಸರ್ಕಾರದ ಸಾಲ: ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಸರ್ಕಾರದ ಸಾಲ ಏರಿಕೆಯಾಗುತ್ತಲೇ ಇದೆ. ಕೇಂದ್ರದಿಂದ 14 ಮತ್ತು 15ನೇ ಹಣಕಾಸು ಯೋಜನೆಯಡಿ ರಾಜ್ಯಕ್ಕೆ ಬರಬೇಕಿರುವ 15 ಸಾವಿರ ಕೋಟಿ ಹಣವನ್ನು ಕೇಳಲು ಬಿಜೆಪಿ ಸಂಸದರಿಗೆ ಧೈರ್ಯವಿಲ್ಲ. ಜಿಎಸ್‌ಟಿ ಸಂದಾಯದಲ್ಲಿ 2ನೇ ಸ್ಥಾನದಲ್ಲಿರುವ ಕರ್ನಾಟಕ, ಕೇಂದ್ರಕ್ಕೆ ದೊಡ್ಡ ನಿಧಿಯಂತಿದೆ. ಪ್ರಸಕ್ತ ಶೇ.80ರಷ್ಟು 1.05 ಲಕ್ಷ ಕೋಟಿ ರೂ. ಈಗಾಗಲೇ ಸಂದಾಯವಾಗಿದೆ. ಕರ್ನಾಟಕದಲ್ಲಿ 86 ಸಾವಿರ ಕೋಟಿ ರೂ. ನೆರೆ ನಷ್ಟವಾಗಿದೆ ಎಂದು ಎನ್‌ಡಿಆರ್‌ಎಫ್ ವರದಿ ನೀಡಿದ್ದರೂ ಕೇಂದ್ರ ಬಿಡುಗಡೆ ಮಾಡಿದ್ದು 10 ಸಾವಿರ ಕೋಟಿ ಮಾತ್ರ. ರಾಜ್ಯ ಸರ್ಕಾರ 86 ಸಾವಿರ ಕೋಟಿಗೆ ವರ್ಲ್ಡ್ ಬ್ಯಾಂಕ್ ಮುಂದೆ ನಿಲ್ಲುವಂತಾಯ್ತು. ಬಜೆಟ್‌ನಲ್ಲಿ ಮೀಸಲಿಟ್ಟ ಶೇ.50ರಷ್ಟು ಹಣವನ್ನೂ ಖರ್ಚು ಮಾಡಿಲ್ಲ. ಜಿಎಸ್‌ಟಿಯಿಂದ ಯಾವುದೇ ಯೋಜನೆಯಿಲ್ಲ. ಸಿಎಂ ಬಳಗದಲ್ಲೇ ವರ್ಗಾವಣೆ ದಂದೆ, 40 ಪರ್ಸೆಂಟ್ ವ್ಯವಹಾರ ನಡೆಯುತ್ತಿದೆ. ಬಿಜೆಪಿ ಸರ್ಕಾರದ ವೈಫಲ್ಯ ಹಾಗೂ ಭ್ರಷ್ಟಾಚಾರದ ಬಗ್ಗೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇನ್ನಿತರ ನಾಯಕರ ನೇತೃತ್ವದಲ್ಲಿ ಯಾತ್ರೆ ಮೂಲಕ ಜನರಿಗೆ ತಿಳಿಸಲಿದ್ದೇವೆ ಎಂದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ವಾಸು, ಬಾಲರಾಜ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ರಾಜ್ಯಮಟ್ಟದ ಮಕ್ಕಳ ನಾಟಕೋತ್ಸವಕ್ಕೆ ತೆರೆ



ಮೈಸೂರು, ಜ.13(ಎಸ್‌ಪಿಎನ್)– ನಟನ ರಂಗಶಾಲೆಯ ಮಕ್ಕಳು ಅಭಿನಯದ, ಹಿರಿಯ ಸಾಹಿತಿ ವೈದೇಹಿ ರಚಿತ 'ನಾಯಿಮರಿ' ನಾಟಕ ಮತ್ತು ವಿದ್ಯಾರ್ಥಿ ಬಿ.ಎಂ.ದೀಕ್ಷಿತ್ ಆರಾಧ್ಯ ಪ್ರಸ್ತುತಪಡಿಸಿದ 'ಕೀ ಬೋರ್ಡ್' ವಾದನದ ಮೂಲಕ ಐದು ದಿನಗಳ ಮಕ್ಕಳ ನಾಟಕೋತ್ಸವ ಹಾಗೂ ಜಾನಪದ ಉತ್ಸವ ತೆರೆ ಕಂಡಿತು.

ಮೈಸೂರು ಕಲಾಮಂದಿರದ ಕಿರು ರಂಗಮಂದಿರದ ಆವರಣದಲ್ಲಿ ಮೈಸೂರಿನ ಸಂಚಲನ ಸಂಸ್ಥೆ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ನಡೆದ ರಾಜ್ಯಮಟ್ಟದ ಮಕ್ಕಳ ನಾಟಕೋತ್ಸವ ಹಾಗೂ ಜಾನಪದ ಉತ್ಸವದ ಮುಕ್ತಾಯ ಸಮಾರಂಭದಲ್ಲಿ ಪ್ರದರ್ಶನಗೊಂಡು ನಾಟಕ, ಇತರೆ ಮಕ್ಕಳು ಪ್ರದರ್ಶಿಸಿದ ಜಾನಪದ ಕಲೆಗಳು ಪ್ರೇಕ್ಷಕರ ಗಮನ ಸೆಳೆದವು.


ಈ ವೇಳೆ ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಸ್.ಎಚ್.ಜಗದೀಶ್ ಮಾತನಾಡಿ, ಸಂಚಲನ ಸಂಸ್ಥೆ ವತಿಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ನಾಟಕ, ಜಾನಪದ ಕಲೆಗಳ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಇದಕ್ಕೆ ರೋಟರಿ ಸಂಸ್ಥೆ ಕೂಡ ಮುಂದಿನ ದಿನಗಳಲ್ಲಿ ಕೈ ಜೋಡಿಸುತ್ತೇವೆ ಎಂದು ಭರವಸೆ ನೀಡಿದರು.

ಕಳೆದ ಐದು ದಿನಗಳಿಂದ ಈ ವೇದಿಕೆಯಲ್ಲಿ ಪ್ರದರ್ಶನವಾಗುತ್ತಿರುವ ಜಾನಪದ ಕಲೆಗಳ ವಿವಿಧ ಪ್ರಕಾರಗಳು, ನಾಟಕ ಪ್ರದರ್ಶನ ಪ್ರೇಕ್ಷಕರ ಮೆಚ್ಚುಗೆ ಗಳಿಸಿವೆ. ಅಲ್ಲದೆ, ಮೈಸೂರು, ಚಾಮರಾಜನಗರ ಸೇರಿದಂತೆ ಇತರೆ ಜಿಲ್ಲೆಗಳಿಂದ ಆಗಮಿಸಿದ್ದ ವಿವಿಧ ಸರ್ಕಾರಿ ಶಾಲಾ ಮಕ್ಕಳು ನಾಟಕ, ಜಾನಪದ ನೃತ್ಯಗಳನ್ನು ಪ್ರದರ್ಶಿಸಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದಾರೆ.

ಕಲೆ, ಸಾಹಿತ್ಯ ಹಾಗೂ ಇತರೆ ಪಠ್ಯೇತರ ಚಟುವಟಿಕೆಗಳಿಂದ ದೂರ ಉಳಿದಿದ್ದ ಸರ್ಕಾರಿ ಶಾಲಾ ಮಕ್ಕಳಿಗೆ ಜಾನಪದ ನೃತ್ಯ ಮತ್ತು ರಂಗಭೂಮಿ ನಾಟಕಗಳನ್ನು ಕಲಿಸಿ, ಪ್ರದರ್ಶನದ ಮೂಲಕ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳಲ್ಲಿ ಆಸಕ್ತಿ ಮೂಡಿಸುವಲ್ಲಿ ಸಂಚಲನ ಸಂಸ್ಥೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಜಂಟಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರಲ್ಲದೆ, ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಯೊಂದಿಗೆ ರೋಟರಿ ಸಂಸ್ಥೆ ಕೈಜೋಡಿಸಲಿದೆ ಎಂದು ಭರವಸೆ ನೀಡಿದರು.

ಈ ವೇಳೆ ಸಂಚಲನ ಸಂಸ್ಥೆಯ ಕೆ.ದೀಪಕ್ ಮೈಸೂರು, ರೋಟರಿ ಮೈಸೂರು ಉತ್ತರ ಕಾರ್ಯದರ್ಶಿ ಲೋಕ್‌ನಾಥ್ ಸೇರಿದಂತೆ ಇತರರಿದ್ದರು.

ಹುಣಸೂರು ತಾಲೂಕು ವೀರಶೈವ ಮುಖಂಡ ಹೆಚ್.ಡಿ.ಸೋಮಶೇಖರ್ ನಿಧನ



ಹುಣಸೂರು, ಜ.13–ಹುಣಸೂರು ತಾಲೂಕು ವೀರಶೈವ ಮುಖಂಡರು, ಪರಿಸರವಾದಿ ಹಾಗೂ ಸಮಾಜವಾದಿಗಳೂ ಆದ ಚಿಕ್ಕ ಹೆಜ್ಜೂರು ಗ್ರಾಮದ ಹೆಚ್.ಡಿ.ಸೋಮಶೇಖರ್(75) ಅವರು ಇಂದು ಸಂಜೆ ನಿಧನರಾದರು.



ಶಾಸಕ ಜಿ.ಟಿ.ದೇವೇಗೌಡ, ಅವರ ಪತ್ನಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಹೆಚ್.ಡಿ.ಸೋಮಶೇಖರ್ ಅವರ ಆರೋಗ್ಯವನ್ನು ವಿಚಾರಿಸಿ, ಅವರ ಕುಟುಂಬ ಸದಸ್ಯರಿಂದ ಮಾಹಿತಿ ಪಡೆದಿದ್ದರು.

ಇವರು ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ಒಡನಾಡಿಯಾಗಿದ್ದರು. ಇವರ ಆರೋಗ್ಯ ಸ್ಥಿತಿ ಹದಗೆಟ್ಟ ಹಿನ್ನೆಲೆಯಲ್ಲಿ ಮೈಸೂರು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ವೈದ್ಯರ ಸಲಹೆ ಮೇರೆಗೆ ಇಂದು ಮನೆಗೆ ಕರೆದೊಯ್ಯಲಾಗಿತ್ತು. ಸಂಜೆ ವೇಳೆಗೆ ಅವರು ನಿಧನರಾಗಿದ್ದಾರೆ. ಅವರು ಆಸ್ಪತ್ರೆಯಲ್ಲಿದ್ದಾಗಲೇ ಭೇಟಿಯಾದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಹಾಗೂ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರೂ ಆದ ಅವರ ಪತ್ನಿ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರು ಆರೋಗ್ಯ ವಿಚಾರಿಸಿದ್ದರು. ಅಲ್ಲದೇ ಸೋಮಶೇಖರ್ ಅವರ ಕುಟುಂಬ ವರ್ಗದವರನ್ನೂ ಭೇಟಿಯಾಗಿ ನೈತಿಕ ಧೈರ್ಯ ಹೇಳಿದ್ದರು. ಈ ವೇಳೆ ದೊಡ್ಡ ಹೆಜ್ಜೂರು ಗ್ರಾಪಂ ಅಧ್ಯಕ್ಷ ಮುದಗನೂರು ಸುಭಾಷ್, ಮಾಜಿ ಅಧ್ಯಕ್ಷ ಸಾ.ರಾ.ಮಹೇಶ್ ಇತರರು ಉಪಸ್ಥಿತರಿದ್ದರು. ಹೆಚ್.ಡಿ.ಸೋಮಶೇಖರ್ ಅವರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು ಅಪಾರ ಹಿತೈಷಿಗಳು ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ನಾಳೆ (ಶನಿವಾರ) ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನ ಉಚಿತ ವಿದ್ಯುತ್ ಘೋಷಣೆ ರಾಜಕೀಯ ಗಿಮಿಕ್



ಮೈಸೂರು, ಜ.13(ಜಿಎ)– ರಾಜಕೀಯ ಗಿಮಿಕ್‌ಗಾಗಿ ಉಚಿತ ವಿದ್ಯುತ್ ಒದಗಿಸುವ ಗೃಹ ಜ್ಯೋತಿ ಯೋಜನೆ ಜಾರಿಗೊಳಿಸುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ ಎಂದು ಬಿಜೆಪಿ ನಗರ ಘಟಕದ ಅಧ್ಯಕ್ಷ ಟಿ.ಎಸ್.ಶ್ರೀವತ್ಸ ತಿಳಿಸಿದರು. ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಪ್ರತಿ ಮನೆಗೂ 200 ಯೂನಿಟ್ ಉಚಿತ ವಿದ್ಯುತ್ ಒದಗಿಸುವ ಗೃಹ ಜ್ಯೋತಿ ಯೋಜನೆ ಜಾರಿಗೊಳಿಸಲಿಲ್ಲವೇಕೆ? ವಿಧಾನ ಸಭೆ ಚುನಾವಣೆ ಸಮೀಪಿಸುತ್ತಿರುವಾಗ ಘೋಷಣೆ ಮಾಡಿರುವುದನ್ನು ಜನರು ಅರ್ಥ ಮಾಡಿಕೊಳ್ಳುತ್ತಾರೆ ಎಂದರು.

ಸಿ.ಟಿ. ರವಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗಿದೆ. ಇಂಥವರಿಗೆ ಕಾನೂನಾತ್ಮಕವಾಗಿಯೂ ಪಾಠ ಕಲಿಸುವ ಎಚ್ಚರಿಕೆಯನ್ನು ಬಿಜೆಪಿಯಿಂದ ನೀಡಲಾಗಿದೆ. ಜ.21ರಿಂದ 29ರವರೆಗೆ ಬೂತ್ ವಿಜಯ ಸಂಕಲ್ಪ ಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆ, ಸಾಧನೆಯನ್ನು ಜನರಿಗೆ ತಿಳಿಸುತ್ತೇವೆ ಎಂದರು.

ಜಿಲ್ಲಾ ಘಟಕದ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಮಾತನಾಡಿ, ಪ್ರಜಾಧ್ವನಿ ಬಸ್ ಯಾತ್ರೆ ಕಾಂಗ್ರೆಸ್‌ನ ಮತ್ತೊಂದು ರಾಜಕೀಯ ಗಿಮಿಕ್ ಆಗಿದ್ದು, 'ನಾ ನಾಯಕಿ' ಕಾರ್ಯಕ್ರಮ ಆಯೋಜಿಸಿ ಹೆಣ್ಣು ಮಕ್ಕಳನ್ನು ಸೇರಿಸಲು ಮುಂದಾಗಿರುವ ಕಾಂಗ್ರೆಸ್‌ಗೆ ನಾಚಿಕೆಯಾಗಬೇಕು. ಮಹಿಳಾ ದೌರ್ಜನ್ಯ, ವ್ಯವಸ್ಥಿತ ಲವ್ ಜಿಹಾದನ್ನು ಪ್ರಶ್ನಿಸದ ಕಾಂಗ್ರೆಸ್ ಈಗ ಮಹಿಳಾ ಪರವೆಂದು ಎಷ್ಟರ ಮಟ್ಟಿಗೆ ಸರಿ?' ಎಂದು ಟೀಕಿಸಿದರು.

ಜಿಲ್ಲೆಯಲ್ಲಿ ಜ.2ರಿಂದ 12ರವರೆಗೆ ಹಮ್ಮಿಕೊಂಡಿದ್ದ ಬಿಜೆಪಿ ಬೂತ್ ಅಭಿಯಾನ ಯಶಸ್ವಿಯಾಗಿದೆ. ಬೂತ್ ಸಮಿತಿಗಳ ಪರಿಶೀಲನೆ, ಮತದಾರರ ಪಟ್ಟಿಯ ಪೇಜ್ ಪ್ರಮುಖರ ನಿಯುಕ್ತಿ, ಬಿಜೆಪಿ ಕಾರ್ಯಕರ್ತರು, ಹಿತೈಷಿಗಳ ಮನೆಗಳ ಮೇಲೆ ಬಿಜೆಪಿ ಬಾವುಟ ಹಾರಿಸುವುದು, ಮತದಾರರು ಹಾಗೂ ಕಾರ್ಯಕರ್ತರ ವಾಟ್ಸ್‌ಆ್ಯಪ್ ಗ್ರೂಪ್‌ಗಳ ರಚನೆ ಕಾರ್ಯ ಯಶಸ್ವಿಯಾಗಿ ನಡೆದಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವಸಂತ್‌ಕುಮಾರ್, ಮೋಹನ್ ಉಪಸ್ಥಿತರಿದ್ದರು.

ಶಾಲೆಗಳಲ್ಲಿ ಶಿಕ್ಷಕರನ್ನು 'ಸರ್, ಮೇಡಂ ಅನ್ನುವಂತಿಲ್ಲ'! ಮಕ್ಕಳ ಹಕ್ಕುಗಳ ಆಯೋಗ ಸೂಚನೆ

ತಿರುವನಂತಪುರಂ, ಜ.13– ಕೇರಳದ ಶಾಲೆಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಕರನ್ನು ಸರ್, ಮೇಡಂ ಅನ್ನುವಂತಿಲ್ಲ. ಬದಲಿಗೆ ಟೀಚರ್ ಎಂದು ಕರೆಯುವಂತೆ ಅಲ್ಲಿನ ಮಕ್ಕಳ ಹಕ್ಕುಗಳ ಆಯೋಗ ಸೂಚನೆ ನೀಡಿದೆ. ಸರ್, ಮೇಡಂ ಅನ್ನುವುದಕ್ಕಿಂತ ಟೀಚರ್ ಪದ ಲಿಂಗ ತಟಸ್ಥವಾಗಿರುವುದರಿಂದ ಹೀಗೆ ಕರೆಯಬೇಕು ಎಂದು ಸೂಚಿಸಲಾಗಿದೆ. ಅಲ್ಲದೇ, ಶಿಕ್ಷಕರು ಕೂಡಾ ಈ ಪದಗಳನ್ನು ಬಳಕೆ ಮಾಡುವುದನ್ನು ಕಡಿಮೆ ಮಾಡಬೇಕು ಎಂದು ನಿರ್ದೇಶಿಸಿದೆ. ಕೇರಳ ರಾಜ್ಯ ಮಕ್ಕಳ ಆಯೋಗದ ಮುಖ್ಯಸ್ಥರಾದ ಕೆ.ವಿ. ಮನೋಜ್ ಕುಮಾರ್ ಹಾಗೂ ಸದಸ್ಯ ಸಿ. ವಿಜಯ್‌ಕುಮಾರ್, ಶಿಕ್ಷಣ ಇಲಾಖೆಗೆ ಈ ನಿರ್ದೇಶನ ನೀಡಿದ್ದಾರೆ. ಸಮಾನತೆ ಹಾಗೂ ಶಿಕ್ಷಕರೊಂದಿಗೆ ಬಾಂಧವ್ಯ ಹೆಚ್ಚಿಸುವ ನಿಟ್ಟಿನಲ್ಲಿ ಈ ಆದೇಶ ಹೊರಡಿಸಲಾಗಿದೆ ಎನ್ನಲಾಗಿದೆ.

ಯಥಾಸ್ಥಿತಿ ಜ.15ರ ಇಶಾ ಯೋಗ ಕೇಂದ್ರದ ಕಾರ್ಯಕ್ರಮದ ಮೇಲೆ ಪರಿಣಾಮ ಬೀರಲ್ಲ

ಬೆಂಗಳೂರು, ಜ.13– ಚಿಕ್ಕಬಳ್ಳಾಪುರದಲ್ಲಿ ಆದಿಯೋಗಿ ಪ್ರತಿಮೆ ಪ್ರತಿಷ್ಠಾಪನೆಗೆ ಮಂಜೂರಾಗಿರುವ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಸದೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಜನವರಿ 11 ರಂದು ನೀಡಿದ್ದ ಮಧ್ಯಂತರ ಆದೇಶವು ಜನವರಿ 15ರಂದು ನಿಗದಿಯಾಗಿರುವ ಕಾರ್ಯಕ್ರಮಕ್ಕೆ ಅಡ್ಡಿಯಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಶುಕ್ರವಾರ ಸ್ಪಷ್ಟಪಡಿಸಿದೆ. ಇಶಾ ಯೋಗ ಕೇಂದ್ರ ಜ.15ರಂದು ನಂದಿಬೆಟ್ಟದ ಕೇಂದ್ರದಲ್ಲಿ ಆದಿಯೋಗಿ ಪ್ರತಿಮೆ ಅನಾವರಣಗೊಳಿಸುತ್ತಿದ್ದು, ಈ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧಂಕರ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಅಗತ್ಯವಿರುವ ವ್ಯವಸ್ಥೆಗಳನ್ನು ಹೊರತು ಪಡಿಸಿ ಇತರೆ ಯಾವುದೇ ಅರಣ್ಯನಾಶ ಅಥವಾ ನಿರ್ಮಾಣ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದಿಲ್ಲ ಎಂದು ಇಶಾ ಯೋಗ ಕೇಂದ್ರ ಭರವಸೆ ನೀಡಿದೆ.

ಕೋಲಾರದಿಂದ ಸ್ಪರ್ಧಿಸಿದರೆ ಸಿದ್ದರಾಮಯ್ಯ ಹರಕೆಯ ಕುರಿಯಾಗಲಿದ್ದಾರೆ



ಕಲಬುರಗಿ, ಜ.13– ಕೋಲಾರ ಕ್ಷೇತ್ರ ಸಿದ್ದರಾಮಯ್ಯ ಅವರಿಗೆ ಸೇಫ್ ಕ್ಷೇತ್ರವಲ್ಲ. ಹೀಗಾಗಿ ಒಂದು ವೇಳೆ ಅವರು ಅಲ್ಲಿಂದ ಸ್ಪರ್ಧೆ ಮಾಡಿದರೆ, ಹರಕೆಯ ಕುರಿಯಾಗುವುದರಲ್ಲಿ ಅನುಮಾನವೇ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ. ಶುಕ್ರವಾರ ಅವರು ಜಿಲ್ಲೆಯ ಕಡಣಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೋಲಾರದಲ್ಲಿ ಸಿದ್ದರಾಮಯ್ಯ ಅವರಿಗೆ ನಿಲ್ಲುವಂತೆ ಯಾರು ಒತ್ತಡ ಹಾಕಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಕೋಲಾರದಲ್ಲಿ ನಿಲ್ಲಿಸುವ ಮೂಲಕ ಅವರ ಪಕ್ಷದವರೇ ಅವರನ್ನು ಹರಕೆಯ ಕುರಿ ಮಾಡಲು ಹೊರಟಿದ್ದಾರೆ ಎಂದರು.

ನಾನು ಸ್ವತಃ ಕೋಲಾರದಲ್ಲಿ ಸುತ್ತಾಡಿ, ಅಲ್ಲಿಯ ಜನರ ಭಾವನೆ ಅರಿತುಕೊಂಡಿದ್ದೇನೆ. ಕೋಲಾರದಲ್ಲಿ ಕಾಂಗ್ರೆಸ್ ಪಕ್ಷಕ್ಕಾಗಲಿ ಅಥವಾ ನಾಯಕರಿಗಾಗಲಿ ಮತ ಪಡೆಯುವ ಶಕ್ತಿ ಇಲ್ಲ. ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ನಿಲ್ಲಿಸಲು ಹೊರಟಿದ್ದಾರೆ ಎಂದರು.

ಪಂಜಾಬ್ ಮತ್ತು ಸಿಂಧ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಕೊಳ್ಳೇಗಾಲ ವಿ.ರಾಘವೇಂದ್ರ ಅವರೊಂದಿಗೆ ಒಂದು ಸಂದರ್ಶನ:



पंजाब एण्ड सिंध बैंक
Punjab & Sind Bank
जहाँ सेवा ही जीवन-ध्येय है

ಪ್ರಶ್ನೆ 1. ಬ್ಯಾಂಕುಗಳು ತಮ್ಮ ಡಿಸೆಂಬರ್ ತ್ರೈಮಾಸಿಕದ ಸಾದನೆಯನ್ನು ಮುಕ್ತಾಯಗೊಳಿಸಿವೆ. ಅನುಸೂಚಿತ ವಾಣಿಜ್ಯ ಬ್ಯಾಂಕುಗಳು (ಎಸ್‌ಸಿಬಿಗಳು) ಎರಡು ಅಂಕಿಯ ಸಾಲದ ಬೆಳವಣಿಗೆಯಾದ ಶೇಕಡಾ 17.4 ಅನ್ನು ಕಳೆದ 15 ದಿನಗಳ ಮುಕ್ತಾಯದ ದಿನವಾದ ಡಿಸೆಂಬರ್ 16, 2022ರಂದು ದಾಖಲಿಸಿವೆ. ಸಾಲದ ಬೆಳವಣಿಗೆ ಬಗ್ಗೆ ನಿಮ್ಮ ಸಲಹೆ ಅಥವಾ ಮಾರ್ಗದರ್ಶನವೇನು?

ಉತ್ತರ: ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ (ಆಡಿಟ್ ಆಗದ)ಶೇ.17ರಷ್ಟು (Y-o-Y) ಸಾಲದ ಬೆಳವಣಿಗೆಯನ್ನು ಡಿಸೆಂಬರ್ 2022ರಲ್ಲಿ ದಾಖಲಿಸಿದೆ. ರಿಟೇಲ್ ವಲಯ ಡಿಸೆಂಬರ್‌ನಲ್ಲಿ ಶೇಕಡಾ 22ರಷ್ಟು (ಆಡಿಟ್ ಆಗದ) (Y-o-Y) ಹಾಗೂ ಕಾರ್ಪೋರೇಟ್ ವಲಯದಲ್ಲಿ ಶೇಕಡಾ 11.80 ಸಾಲದ ಅಭಿವೃದ್ಧಿ ಸಾಧಿಸಿದ್ದೇವೆ.

ನಾವು ಪೂರಾ ಆರ್ಥಿಕ ವರ್ಷದಲ್ಲಿ ಶೇಕಡಾ 15ರಷ್ಟು ಸಾಲದ ಬೆಳವಣಿಗೆಯ ಗುರಿ ಹೊಂದಿದ್ದೇವೆ.ಕಾರ್ಪೋರೇಟ್ ಹಾಗೂ ಬಿಡಿ ವ್ಯಾಪಾರ (ರಿಟೇಲ್) ವಲಯದ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಈ ಗುರಿಯನ್ನು ಹಾಕಿಕೊಳ್ಳಲಾಗಿದೆ.

ಪ್ರಶ್ನೆ 2. ಬ್ಯಾಂಕುಗಳ ಸಾಲದ ಬೆಳವಣಿಗೆಗೆ ಹೋಲಿಸಿದಲ್ಲಿ ಠೇವಣಿಗಳ ಬೆಳವಣಿಗೆ ಕಡಿಮೆಯಾಗಿದೆ. ಬ್ಯಾಂಕಿಂಗ್ ವಲಯದಲ್ಲಿ ಠೇವಣಿಗಳ ಸಂಗ್ರಹ ಪ್ರತಿ ವರ್ಷ ಶೇಕಡ 9.4 ಇದೆ. ಠೇವಣಿ ಸಂಗ್ರಹಕ್ಕೆ ನಿಮ್ಮ ಮುಂದಿನ ಯೋಜನೆಗಳು?

ಉತ್ತರ: ಈ ವಿತ್ತೀಯ ವರ್ಷದಲ್ಲಿ ಠೇವಣಿಗಳು ಶೇಕಡಾ 10ರಷ್ಟು ಹೆಚ್ಚಳ ಹೊಂದುತ್ತವೆ ಎಂದು ನಾನು ಭಾವಿಸುತ್ತೇನೆ. ಪಂಜಾಬ್ ಮತ್ತು ಸಿಂಧ್ ಬ್ಯಾಂಕ್, ಈ ವಿತ್ತೀಯ ವರ್ಷದಲ್ಲಿ ಠೇವಣಿಗಳ ಸಂಗ್ರಹ ಶೇಕಡಾ 10ಕ್ಕಿಂತ ಹೆಚ್ಚು ಸಾಧ್ಯವಾಗಬಹುದೆಂದು ಆಶಿಸುತ್ತೇನೆ. ಪಂಜಾಬ್ ಮತ್ತು ಸಿಂಧ್‌ಬ್ಯಾಂಕ್, ಶೇಕಡಾ 9.1ರಷ್ಟು (Y-o-Y) ಠೇವಣಿಗಳ ಬೆಳವಣಿಗೆಯನ್ನು ಡಿಸೆಂಬರ್ 22ರಲ್ಲಿ ಸಾಧಿಸಿತ್ತು. (ಆಡಿಟ್ ಆಗದ). ಈ ಗುರಿಯನ್ನು ಮುಟ್ಟಲು ನಾವು ಕೆಲವು ಅಕರ್ಷಕ ಠೇವಣಿ ಉತ್ಪನ್ನಗಳನ್ನು ಅಂದರೆ ಪಿಎಸ್‌ಬಿಫಾಬುಲಸ್ ಪ್ಲಸ್ 601 ದಿನಗಳ ಠೇವಣಿ ಯೋಜನೆ ಮುಂತಾದವುಗಳನ್ನು ಹಮ್ಮಿಕೊಂಡಿದ್ದೆವು.

ಪ್ರಶ್ನೆ 3. ಪಾಲಿಸಿ ದರಗಳಲ್ಲಿ ಇತ್ತೀಚೆಗೆ ಹೆಚ್ಚಳವಾಗಿದೆ. ಸಾಲ ನೀಡಿಕೆಯ ದರವು ಸಾಲ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳುತ್ತೀರಾ ?

ಉತ್ತರ: ಸಾಲ ನೀಡಿಕೆಯ ದರ ಹೆಚ್ಚಳವು ಕಂಪನಿಗಳು ತೆಗೆದುಕೊಳ್ಳುವ ಸಾಲದ ವೆಚ್ಚವನ್ನು ಹೆಚ್ಚಿಸುತ್ತದೆ. ಅದಾಗ್ಯೂ, ಮಾರುಕಟ್ಟೆ ಇದಕ್ಕೆ ಸ್ಪಂದಿಸುತ್ತಿದ್ದು ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆ ಸದೃಢವಾಗಿದ್ದು ಕಂಪನಿಗಳು ಉತ್ತಮ ರೀತಿಯಲ್ಲಿ ಲಾಭಗಳಿಸುತ್ತವೆ. ಕಾರ್ಪೋರೇಟ್‌ಗಳು ಬಡ್ಡಿ ದರಗಳ ಬಗ್ಗೆ ಹೆಚ್ಚು ಪ್ರಭಾವ ಬೀರುವುದಿಲ್ಲ ಆದರೆ ಒಳಹರಿವಿನ ವೆಚ್ಚ, ಸರಕುಗಳ ಬೆಲೆಗಳ ಅಸ್ಥಿರತೆ ಹಾಗೂ ಜಾಗತಿಕ ಅನಿಶ್ಚಿತತೆ ಬಗ್ಗೆ ಯೋಚಿಸುತ್ತಾರೆ.

ಪ್ರಶ್ನೆ 4. ಬ್ಯಾಂಕುಗಳ ಅಸೆಟ್ ಕ್ವಾಲಿಟಿಯನ್ನು ಉತ್ತಮ ಪಡಿಸಲು ಯಾವ ಕ್ರಮಗಳನ್ನು ತೆಗದುಕೊಳ್ಳಲಾಗಿದೆ?

ಉತ್ತರ: ನಮ್ಮ ಅಸೆಟ್ ಕ್ವಾಲಿಟಿ ಅಂ–ದರೆ GNPA ತ್ವರಿತವಾಗಿ ಸುಧಾರಿಸಿದೆ. ನಮ್ಮ ಬ್ಯಾಂಕು ಅನುತ್ಪಾದಕ ಆಸ್ತಿಗಳ ಮಟ್ಟವನ್ನು ತಗ್ಗಿಸಲು ಸಾಂಪ್ರದಾಯಿಕ ಮತ್ತು ಡಿಜಿಟಲ್ ವಿಧಾನಗಳನ್ನು ಅಳವಡಿಸಿಕೊಂಡಿದೆ.

ಎನ್‌ಪಿಎ ಮಾಡ್ಯೂಲ್ : ಅನುತ್ಪಾದಕ ಆಸ್ತಿಗಳ (ಎನ್‌ಪಿಎ), ಬಗ್ಗೆ ನಿಗಾ ವಹಿಸಲು ಒಂದು ನೈಜ ಸಮಯಧಾರಿತ ಕಾರ್ಯಯೋಜನೆಯನ್ನು ಆರಂಭಿಸಲಾಗಿದ್ದು ಇದರಿಂದಾಗಿ ಪ್ರಕರಣ ದಾಖಲಿಸಿದ ಹಾಗೂ ಡಿಆರ್‌ಟಿ ಪ್ರಕರಣಗಳ ಬಗ್ಗೆ ನಿಗಾ ಇಡುವುದು ಸಾಧ್ಯವಾಗುತ್ತದೆ. ಇಂತಹ ಹಲವಾರು ಕ್ರಮಗಳನ್ನು ಪ್ರಾರಂಭಿಸುವ ಮೂಲಕ ನಮ್ಮ ಎನ್‌ಪಿಎ ಮತ್ತಷ್ಟು ಕಡಿಮೆಯಾಗುತ್ತದೆ.

ಪ್ರಶ್ನೆ 05. ಈ ಡಿಜಿಟಲ್ ಯುಗದ ಸ್ಪರ್ಧೆಯಲ್ಲಿ ಉಳಿಯಲು ನೀವು ಹೇಗೆ ಉನ್ನತೀಕರಿಸಿಕೊಳ್ಳುತ್ತಿದ್ದೀರಿ?

ಉತ್ತರ: ನಮ್ಮ ತಂತ್ರಜ್ಞಾನದಲ್ಲಿ ತ್ವರಿತಗತಿಯ ಬದಲಾವಣೆಗಳು ಉಂಟಾಗುತ್ತಿವೆ. ನಮ್ಮ ಬ್ಯಾಂಕು, ಮಾಹಿತಿ ಮತ್ತು ತಂತ್ರಜ್ಞಾನದ ಮೂಲ ಸೌಕರ್ಯಗಳಿಗೆ ಸಾಕಷ್ಟು ಹಣಕಾಸನ್ನು ನಿಗದಿಗೊಳಿಸಿದೆ. ವೈವಿಧ್ಯ ಶ್ರೇಣಿಯ ಡಿಜಿಟಲ್ ಉತ್ಪನ್ನಗಳನ್ನು ಬಿಡುಗಡೆ ಮಾಡಲು (ಪ್ರಾರಂಭಿಸಲು) ನಾವು ಆಲೋಚಿಸುತ್ತಿದ್ದೇವೆ. ಇತ್ತೀಚೆಗೆ ನಾವು ಡಿಜಿಟಲ್ ಮುಂಗಡ ಅಂಗೀಕೃತ ವೈಯುಕ್ತಿಕ ಸಾಲ (PAPL), ಆನ್‌ಲೈನ್ ಉಳಿತಾಯ ಬ್ಯಾಂಕ್ ಖಾತೆಯ ಪ್ರಾರಂಭ (PSB UNIC) ಇತ್ಯಾದಿಗಳನ್ನು ಪ್ರಾರಂಭಿಸಿದ್ದೇವೆ.

ಪ್ರಶ್ನೆ 06. ಶಾಖೆಯ ವಿಸ್ತರಣೆ ಬಗ್ಗೆ ನಿಮ್ಮ ಯೋಜನೆಗಳೇನು ?

ಉತ್ತರ: ನಾವು ಇತ್ತೀಚೆಗೆ, ನಾಲ್ಕು ಶಾಖೆಗಳನ್ನು ಮದ್ಯ ಕಾರ್ಪೋರೇಟ್ ಶಾಖೆಗಳಾಗಿ ಪರಿವರ್ತಿಸಿದ್ದೇವೆ ಹಾಗೂ ಈ ಆರ್ಥಿಕ ಹಾಗೂ ಮುಂದಿನ ಆರ್ಥಿಕ ವರ್ಷಗಳಲ್ಲಿ ಇನ್ನೂ ಹೆಚ್ಚು ಶಾಖೆಗಳನ್ನು ಪ್ರಾರಂಭಿಸಲು ಯೋಚಿಸಿದ್ದೇವೆ.

07.ಮಾರುಕಟ್ಟೆಯಿಂದ ಬಂಡವಾಳವನ್ನು ತರುವ ಯಾವುದಾದರೂ ಯೋಜನೆ ಇದೆಯೇ ?

ಉತ್ತರ: ನಾವು ಇತ್ತೀಚೆಗೆ ಈಕ್ವಿಟಿ ಮತ್ತು ಬಾಂಡುಗಳ ವಿತರಣೆ ಸೇರಿದಂತೆ ಇತರ ವಿಧಾನಗಳ ಮೂಲಕ 12 ತಿಂಗಳ ಅವಧಿಯಲ್ಲಿ ರೂ. 250 ಕೋಟಿವರೆಗೆ ಒಮ್ಮೆಗೆ ಅಥವಾ ಹಲವು ಬಾರಿ ಬಂಡವಾಳವನ್ನು ಸಂಗ್ರಹಿಸಲು ಒಪ್ಪಿಗೆಯನ್ನು ಪಡೆದಿರುತ್ತೇವೆ.


ಪ್ರಶ್ನೆ 8. ಕಡೆಯದಾಗಿ ವೈಯುಕ್ತಿಕವಾಗಿ, ನಿಮ್ಮ ಬಗ್ಗೆ ವಿವರಿಸುವಿರಾ ?

ಉತ್ತರ: ನಾನು ಕೊಳ್ಳೇಗಾಲದ MGSV Jr. College ನಲ್ಲಿ ನನ್ನ ಪ್ರಾರಂಭಿಕ ಶಿಕ್ಷಣವನ್ನು ಪಡೆದೆ. ನಂತರ ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಪದವಿಯನ್ನು ಪಡೆದೆ. ಆ ನಂತರ ಸ್ನಾತಕೋತ್ತರ ಪದವಿ ಪಡೆದಿರುತ್ತೇನೆ. ನನ್ನ ಪ್ರಾರಂಭಿಕ ವೃತ್ತಿಯು ಮೈಸೂರಿನ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಆರಂಭವಾಯಿತು. ಈ ರೀತಿ, ಮೈಸೂರು ನಗರದ ಜೊತೆ ನನಗೆ ವಿಶೇಷವಾದ ಸಂಬಂಧವಿದೆ. ಆದ್ದರಿಂದ, ಉದ್ಯಮೆದಾರರಿಗೆ ಪ್ರೋತ್ಸಾಹ ನೀಡುವ ಮೂಲಕ ಈ ನಗರದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ಅಥವಾ ಪ್ರೋತ್ಸಾಹ ನೀಡಲು ಬಯಸಿದ್ದೇನೆ.

ಈ ಸಂಧರ್ಭದಲ್ಲಿ, ನಿಮ್ಮ ಪತ್ರಿಕೆಯ ಎಲ್ಲಾ ಓದುಗರಿಗೂ ಮಕರ **ಸಂಕ್ರಾಂತಿ ಮತ್ತು ಲೊಹ್ರಿ** ಹಬ್ಬದ ಶುಭಾಶಯಗಳನ್ನು ತಿಳಿಸಲು ಇಷ್ಟಪಡುತ್ತೇನೆ.

ವರಿಷ್ಠರ ನಿರ್ಧಾರ ಗೌರವಿಸುವೆ

ಮಂಡ್ಯ, ಜ.13– ಮಂಡ್ಯ ಕ್ಷೇತ್ರದ ಟಿಕೆಟ್ ವಿಚಾರದಲ್ಲಿ ಜೆಡಿಎಸ್ ವರಿಷ್ಠರು ತೆಗೆದು



ಕೊಂಡಿರುವ ನಿರ್ಧಾರವನ್ನು ನಾನು ಗೌರವಿಸಲಿದ್ದು, ಎಂದಿನಂತೆ ನನ್ನ ಸಮಾಜ ಸೇವೆ ಮುಂದುವರೆಸುವೆ ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಹಾಗೂ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ತಿಳಿಸಿದರು.

ಗೆಜ್ಜಲಗೆರೆಯ ಮನ್‌ಮುಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಸಹ ಮಂಡ್ಯ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಆದರೆ ವರಿಷ್ಠರು ಹಾಲಿ ಶಾಸಕ ಎಂ.ಶ್ರೀನಿವಾಸ್ ಅವರಿಗೆ ಟಿಕೆಟ್ ನೀಡಿದ್ದಾರೆ. ಅವರ ನಿರ್ಧಾರವನ್ನು ನಾನು ವಿರೋಧಿಸುವುದಿಲ್ಲ. ಆದರೆ ಮುಂದೆ ಟಿಕೆಟ್ ಸಿಗಬಹುದು ಎಂಬ ನಂಬಿಕೆ ನನ್ನಲ್ಲಿದೆ. ಈ ನಿಟ್ಟಿನಲ್ಲಿ ವರಿಷ್ಠರು ತೆಗೆದುಕೊಂಡಿರುವ ನಿರ್ಧಾರ ಗೌರವಿಸಿ, ಪಕ್ಷದ ಅಣತಿಯಂತೆ ಕೆಲಸ ಮಾಡುವೆ ಎಂದರು.

ಶಂಭು ಸೇವಾ ಟ್ರಸ್ಟ್ ಹೆಸರಲ್ಲಿ ಕಳೆದ 2 ವರ್ಷಗಳಿಂದ ನಿರಂತರವಾಗಿ ಸಮಾಜ ಸೇವೆ ಮಾಡುತ್ತಿದ್ದು, ಮಂಡ್ಯ ತಾಲೂಕಿನ ಸಾವಿರಾರು ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ಬ್ಯಾಗ್ ವಿತರಿಸಿದ್ದು, ಸಾವಿರಾರು ಜನರನ್ನು ಧರ್ಮಸ್ಥಳ ಯಾತ್ರೆಗೆ ಕಳುಹಿಸಿದ್ದೇನೆ. ರೈತರು, ಕೂಲಿ ಕಾರ್ಮಿಕರು, ಬಡವರು ಸೇರಿದಂತೆ ಅನೇಕರಿಗೆ ಆರ್ಥಿಕ ಸಹಾಯ ಮಾಡಿದ್ದೇನೆ. ಸಂಕ್ರಾಂತಿ ಹಬ್ಬದ ಬಳಿಕ ನನ್ನ ಸಮಾಜ ಸೇವೆ ನಿರಂತರವಾಗಿ ಮುಂದುವರೆಸುವೆ. ಇದನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದರು.

ಭಾರತೀ ಕಾಲೇಜಲ್ಲಿ ಸಂಕ್ರಾಂತಿ ಸಂಭ್ರಮ



ಭಾರತೀನಗರ, ಜ.13– ಇಲ್ಲಿನ ಭಾರತೀ ಕಾಲೇಜಿನಲ್ಲಿ ಭಾರತೀ ಎಜುಕೇಷನ್ ಟ್ರಸ್ಟ್‌ನಿಂದ ಆಯೋಜಿಸಿದ್ದ ಸಂಕ್ರಾಂತಿ ಸಂಭ್ರಮಕ್ಕೆ ರಾಶಿ ಪೂಜೆ ಮಾಡುವ ಮೂಲಕ ಟ್ರಸ್ಟ್ ಸಿಇಓ ಆಶಯ್ ಚಾಲನೆ ನೀಡಿದರು.

ಭಾರತೀ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಮಧು ಜಿ.ಮಾದೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಂಕ್ರಾಂತಿ ಸಂಭ್ರಮದಲ್ಲಿ ವಿದ್ಯಾರ್ಥಿಗಳು ಕುಣಿದು ಕುಪ್ಪಳಿಸಿದರು. ಕಾಲೇಜಿನ ಆವರಣದಲ್ಲಿ ಹಬ್ಬದ ವಾತಾವರಣದಿಂದ ನಿರ್ಮಾಣವಾಗಿತ್ತು ಕಾಲೇಜಿನ ಎಲ್ಲಾ ಅಧ್ಯಾಪಕರು, ಅಧ್ಯಾಪಕೇತರರು ಸೇರಿದಂತೆ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶಿ ಉಡುಗೆ ತೊಟ್ಟು ಈ ಸಂಕ್ರಾಂತಿ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು. ಪೂರ್ವಿಕರು ಹಾಡುತ್ತಿದ್ದ ಹಾಡು, ನೃತ್ಯ, ಗಾದೆ, ಒಗಟು ಹೇಳುವುದು, ಕೋಲಾಟ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಅಂಗಳದಲ್ಲಿ ಅಂಗಡಿ ನಿರ್ಮಿಸಿ ವಿದ್ಯಾರ್ಥಿಗಳು ಚಕ್ಕುಲಿ, ನಿಪ್ಪಟ್ಟು, ರವೆಉಂಡೆ, ಕಡಲೆಕಾಯಿ, ಸೌತೆಕಾಯಿ, ಬೇಯಿಸಿದ ಹಸಿರುಕಾಳು, ತರಕಾರಿ, ಪಾನಕ, ಮಜ್ಜಿಗೆ ಮೊದಲಾದ ದೇಶಿ ತಿಂಡಿ ಪದಾರ್ಥಗಳನ್ನು ಮಾರಾಟ ಮಾಡಿದರು. ಇದರಲ್ಲಿ ತಿಂಡಿಗಳನ್ನು ರುಚಿಕರವಾಗಿ ಮಾಡಿದಂತಹ ವಿದ್ಯಾರ್ಥಿಗಳಿಗೆ ಕಜ್ಜಾಯದ ಬುಟ್ಟಿ ಮೂಲಕ 1500 ರೂ. ಬಹುಮಾನ ನೀಡಲಾಯಿತು.

ಸ್ವದೇಶಿ ಬಳಸಿ ದೇಶ ಉಳಿಸಿ, ಜಾಗತೀಕರಣ ಸಾಕು ಭಾರತೀಕರಣ ಬೇಕು. ಸ್ವದೇಶಿಯಿಂದ ರಾಷ್ಟ್ರಜಾಗೃತಿ. ಆಚಾರವೇ ಔಷಧ ಎಂಬ ಘೋಷಣೆಗಳನ್ನು ಮೊಳಗಿದ್ದು ಕಂಡು ಬಂತು.

ಅಲಂಕೃತಗೊಂಡ ಎತ್ತಿನಗಾಡಿಗಳಿಗೆ ಮತ್ತು ಸುಂದರವಾಗಿ ದೇಸಿ ವೇಷಭೂಷಣ ತೊಟ್ಟ ಇಬ್ಬರು ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರಿಗೆ "ದೇಶಿ ಚಲುವ" ಮತ್ತು "ದೇಶಿ ಚೆಲುವೆ" ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ರಾಸುಗಳನ್ನು ಕಿಚ್ಚು ಹಾಯಿಸಿದರು.

ಕಾರ್ಯಕ್ರಮಕ್ಕೂ ಮುನ್ನಾ ಉಪನ್ಯಾಸಕರು, ವಿದ್ಯಾರ್ಥಿಗಳು ಎತ್ತಿನಗಾಡಿಯ ಮೂಲಕ ಮದ್ದೂರು– ಮಳವಳ್ಳಿ ಮುಖ್ಯರಸ್ತೆಯಲ್ಲಿ ತಮಟೆ, ನಗಾರಿ ಗಳೊಂದಿಗೆ ಮೆರವಣಿಗೆ ನಡೆಸಿದರು. ಪೂಜಾ ಕುಣಿತ, ಪೂರ್ಣಕುಂಭ, ಅಲಂಕೃತ ಎತ್ತಿನ ಗಾಡಿಗಳು ಮೆರವಣಿಗೆ ಆಕರ್ಷಣೆಯಾಗಿದ್ದವು. ವಿದ್ಯಾರ್ಥಿಗಳು, ಶಿಕ್ಷಕರು, ಪ್ರಾಧ್ಯಾಪಕಿಯರು ಒಬ್ಬರಿಗೊಬ್ಬರಿಗೂ ಹಬ್ಬದ ಶುಭಾಶಯ ವಿನಿಯಮ ಮಾಡಿಕೊಂಡು ಎಳ್ಳುಬೆಲ್ಲ ಹಂಚುವ ಮೂಲಕ ಹಬ್ಬ ಸಂಭ್ರಮಿಸಿದರು.

> ಸಂಕ್ರಾಂತಿ ಹಬ್ಬ ಸಂಪ್ರದಾಯದ ಹಬ್ಬ. ಸಂಸ್ಕೃತಿ ಬಿಂಬಿಸುವ ಹಬ್ಬ. ಪೂರ್ವಿಕರು ಆಚರಿಸುತ್ತಿದ್ದ ಹಬ್ಬವನ್ನು ಇಂದಿಗೂ ಆಚರಿಸಲಾಗುತ್ತಿದೆ. ಇಂದಿನ ವಿದ್ಯಾರ್ಥಿಗಳು ಹಬ್ಬದ ಬಾಂಧವ್ಯ ಕಲಿಯಬೇಕೆಂಬ ಉದ್ದೇಶದಿಂದ ನಮ್ಮ ಕಾಲೇಜಿನಲ್ಲಿ ಸಂಕ್ರಾಂತಿ ಸಂಭ್ರಮವನ್ನು ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.
>
> – ಮಧು ಜಿ.ಮಾದೇಗೌಡ,
> ಅಧ್ಯಕ್ಷರು, ಭಾರತೀ ಎಜುಕೇಷನ್ ಟ್ರಸ್ಟ್ ಹಾಗೂ ಎಂಎಲ್‌ಸಿ.

ವಿದೇಶಿ ಸಂಸ್ಕೃತಿಗೆ ಮರುಳಾಗಿ ದೇಶಿ ಸಂಸ್ಕೃತಿ ಮರೆಯುತ್ತಿರುವ ಯುವಜನತೆ

ಭಾರತೀನಗರ, ಜ.13– ವಿದೇಶಿ ಸಂಸ್ಕೃತಿಗೆ ಮಾರು ಹೋಗಿ ವಿದ್ಯಾವಂತ ಯುವ ಜನತೆ ದೇಶಿ ಸಂಸ್ಕೃತಿ ಮರೆಯುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ವಿಧಾನ ಪರಿಷತ್ ಸದಸ್ಯ ಮಧು



ಜಿ.ಮಾದೇಗೌಡ ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಭಾರತೀ ಎಜುಕೇಷನ್ ಟ್ರಸ್ಟ್‌ನ ವಿವಿಧ ಅಂಗ ಸಂಸ್ಥೆಗಳಿಂದ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ಸಂಕ್ರಾಂತಿ ಸಂಭ್ರಮದಲ್ಲಿ ಮಾತನಾಡಿದ ಅವರು, ನಾಗರಿಕತೆ ಬೆಳೆದಂತೆ ಹಳ್ಳಿ ಸಂಸ್ಕೃತಿ ಮರೆಯಾಗುತ್ತಿದೆ ಎಂದರು. ಹಳ್ಳಿಗಾಡಿನ ವಿದ್ಯಾರ್ಥಿಗಳೇ ಹೆಚ್ಚಾಗಿ ನಗರ ಸಂಸ್ಕೃತಿ ವ್ಯಾಮೋಹಕ್ಕೆ ಒಳಗಾಗಿ ಗ್ರಾಮೀಣ ಸೊಗಡನ್ನೇ ಮರೆಯುತ್ತಿದ್ದಾರೆ. ಹೀಗಾಗಿ ದೇಶಿ ಸಂಸ್ಕೃತಿ ಉಳಿವಿಗೆ ಪ್ರತಿಯೊಬ್ಬರೂ ಶ್ರಮಿಸಿ ಎಂದರು. ಪ್ರಸಿದ್ಧ ಹರಟೆ ಕಲಾವಿದ ಬೆಂಗಳೂರಿನ ಇಂದೂಮತಿ ಸಾಲಿಮಠ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಾನವೀಯತೆ ಮರೆಯಾಗುತ್ತಿದೆ. ಸಂಪ್ರದಾಯ ಮಾಯವಾಗುತ್ತಿರುವ ದಿನಗಳಲ್ಲಿ ನಮ್ಮ ಸಂಸ್ಕೃತಿ ಅನಾವರಣ ನಿರಂತರವಾಗಿ ನಡೆಯಬೇಕು. ಸಾಮಾಜಿಕ ಜಾಲ ತಾಣಗಳಿಂದ ಸಂಸ್ಕೃತಿ ಮಾರಣಹೋಮ ನಡೆಯುತ್ತಿವೆ ಎಂದು ಕಿಡಿಕಾರಿದರು. ದೇಶಿ ಸೊಗಡು ಕೇವಲ ತೋರಿಕೆಯಾಗಬಾರದು. ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ವಿದೇಶಿ ಸಂಸ್ಕೃತಿಗೆ ಮಾರುಹೋಗಿ ದೇಶಿ ಸಂಸ್ಕೃತಿ ಮರೆಯುತ್ತಿದ್ದು, ಅದಕ್ಕೆ ಅಪವಾದ ಎಂಬಂತೆ ಭಾರತೀ ಕಾಲೇಜಿನಲ್ಲಿ ಸಂಕ್ರಾಂತಿ ಸಂಭ್ರಮ ನಡೆಯುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಇದೇ ವೇಳೆ ಹರಟೆ ಕಲಾವಿದ ಇಂದೂಮತಿ ಸಾಲಿಮಠ ಅವರನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಪ್ರಾಂಶುಪಾಲ ಡಾ.ಮ.ರಾಮಕೃಷ್ಣ, ಟ್ರಸ್ಟಿ ಬಸವೇಗೌಡ, ವಿವಿಧ ಅಂಗ ಸಂಸ್ಥೆ ಪ್ರಾಂಶುಪಾಲರಾದ ಪುಟ್ಟಸ್ವಾಮಿ, ಪ್ರವೀಣ್‌ಗೌಡ, ಜಿ.ಕೃಷ್ಣ, ಮಲ್ಲಿಕಾರ್ಜುನ, ಸುರೇಶ್, ಪ್ರತಿಮಾ, ನಾಗರಾಜು ಸೇರಿದಂತೆ ಹಲವರಿದ್ದರು.

ಸ್ಯಾಂಟ್ರೋ ರವಿ ಹುಟ್ಟೂರಲ್ಲಿ ಆಸ್ತಿ ಮಾಹಿತಿ ಕಲೆ ಹಾಕಿದ ಪೊಲೀಸರು

ಮಂಡ್ಯ, ಜ.13– ಶುಕ್ರವಾರ ಗುಜರಾತ್‌ನಲ್ಲಿ ಬಂಧನಕ್ಕೊಳಗಾಗಿರುವ ಹೈಟೆಕ್ ವೇಶ್ಯಾವಾಟಿಕೆ ದಂಧೆ ಕಿಂಗ್‌ಪಿನ್ ಸ್ಯಾಂಟ್ರೋ ರವಿ ಆಸ್ತಿಪಾಸ್ತಿ ಬಗ್ಗೆ ಮೈಸೂರು ಹಾಗೂ ಮಂಡ್ಯ ಪೊಲೀಸರು ಮಾಹಿತಿ ಕಲೆ ಹಾಕಿದ್ದಾರೆ.

ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆ ಸಿಬ್ಬಂದಿಯ ಸಹಾಯದೊಂದಿಗೆ ಮಫ್ತಿಯಲ್ಲಿ ಬಂದಿದ್ದ ಮೈಸೂರಿನ ನಾಲ್ಕೈದು ಮಂದಿ ಪೊಲೀಸ್ ಅಧಿಕಾರಿಗಳು, ರವಿ ಹುಟ್ಟೂರು ಮಂಡ್ಯ ತಾಲೂಕಿನ ಕಾಳೇನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಸ್ಯಾಂಟ್ರೋ ರವಿ ಆಸ್ತಿಪಾಸ್ತಿ ಬಗ್ಗೆ ಪಡೆದುಕೊಂಡಿದ್ದಾರೆ.

ವಸತಿ ಶಾಲೆ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಮಂಡ್ಯ, ಜ.13– ಪಾಂಡವಪುರ ತಾಲೂಕು ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಗಳಿಗೆ 2023–24ನೇ ಸಾಲಿನ 6ನೇ ತರಗತಿ ಆಂಗ್ಲ ಮಾಧ್ಯಮ ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉಚಿತ ವ್ಯಾಸಂಗ, ಊಟ, ಸಮವಸ್ತ್ರ, ಪಠ್ಯಪುಸ್ತಕ ಇನ್ನಿತರ ಶೈಕ್ಷಣಿಕ ಸಾಮಗ್ರಿ ನೀಡಲಾಗುವುದು. ಪಾಂಡವಪುರ ತಾಲೂಕಿನಲ್ಲಿ ಪ್ರಸ್ತುತ 2022–23ನೇ ಸಾಲಿನ 5ನೇ ತರಗತಿಯಲ್ಲಿ ಓದುತ್ತಿರುವವರು ವಸತಿ ಶಾಲೆ ಪ್ರಾಂಶುಪಾಲರಿಂದ ಅರ್ಜಿ ಪಡೆದು ಮುಖ್ಯ ಶಿಕ್ಷಕರಿಂದ ಭರ್ತಿ ಮಾಡಿಸಿ ಅಗತ್ಯ ದಾಖಲೆಗಳೊಡನೆ ಜ.22ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ವಸತಿ ಶಾಲೆಗಳ ತಾಲೂಕು ಸಮನ್ವಯಾಧಿಕಾರಿ ಎಸ್.ಗಣೇಶ್ ತಿಳಿಸಿದ್ದಾರೆ. ಮಾಹಿತಿಗೆ ಮೊ.9980027919 ಸಂಪರ್ಕಿಸಿ.

ನಾಗಮಂಗಲದಲ್ಲಿ ಜನಪರ ಕೆಲಸ ನಡೆದಿಲ್ಲ: ಚಲುವರಾಯಸ್ವಾಮಿ ಆರೋಪ

ನಾಗಮಂಗಲ, ಜ.13– ಕಳೆದ 5 ವರ್ಷ ತಾಲೂಕಿನಲ್ಲಿ ರಸ್ತೆ ಅಭಿವೃದ್ಧಿ ಸೇರಿದಂತೆ ಯಾವುದೇ ಜನಪರ ಕೆಲಸ ನಡೆದಿಲ್ಲ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪಿಸಿದರು.



ತಾಲೂಕಿನ ಬೈರಸಂದ್ರ ಗ್ರಾಮದ ಶ್ರೀಹದ್ದಿನ ಕಲ್ಲು ಹನುಮಂತರಾಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾಳಿಂಗನಹಳ್ಳಿ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಭೆ ಮತ್ತು ಪಕ್ಷ ಸೇರ್ಪಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಸವಲತ್ತು ಸಿಗುತ್ತವೆ. ಹೀಗಾಗಿ ರಾಜ್ಯ ಹಾಗೂ ರಾಷ್ಟ್ರಕ್ಕೆ ಕಾಂಗ್ರೆಸ್ ಅನಿವಾರ್ಯ. 3 ಬಾರಿ ಕ್ಷೇತ್ರದ ಶಾಸಕನಾಗಿದ್ದ ಅವಧಿಯಲ್ಲಿ ನಾನು ಮಾಡಿರುವ ನೂರಾರು ಅಭಿವೃದ್ಧಿ ಕೆಲಸಗಳು ಜನರ ಮುಂದಿವೆ. ಆದರೆ ನನ್ನ ವಿರುದ್ಧ 2 ಬಾರಿ ಗೆದ್ದು ಶಾಸಕರಾಗಿರುವವರು ಕ್ಷೇತ್ರದಲ್ಲಿ ಯಾವುದಾದರೊಂದು ಶಾಶ್ವತ ಅಭಿವೃದ್ಧಿ ಕೆಲಸ ಮಾಡಿದ್ದರೆ ಅದನ್ನು ವೇದಿಕೆಯಲ್ಲಿ ನಿಂತು ಹೇಳಲಿ ಎಂದು ಪರೋಕ್ಷವಾಗಿ ಶಾಸಕ ಸುರೇಶ್‌ಗೌಡಗೆ ಸವಾಲು ಹಾಕಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾಲೂಕಿನ ಹೇಮಾವತಿ ನಾಲಾ ಅಗಲೀಕರಣಕ್ಕೆ 250 ಕೋಟಿ ರೂ. ಅನುದಾನ ಬಿಡುಗಡೆ ಮಾಡದಿದ್ದರೆ ಇಂದು ತಾಲೂಕಿನ ಹಲವು ಕೆರೆ ಕಟ್ಟೆಗಳು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗುತ್ತಿರಲಿಲ್ಲ. ನಾಲಾ ಆಧುನೀಕರಣದ ಜೊತೆಗೆ ಈ ಬಾರಿ ಉತ್ತಮ ಮಳೆಯಾದ ಕಾರಣ ಎಲ್ಲ ಕೆರೆ ಕಟ್ಟೆಗಳೂ ತುಂಬಿವೆ. ಕೆರೆಕಟ್ಟೆಗಳನ್ನು ತುಂಬಿಸುವಲ್ಲಿ ಈಗಿನ ಶಾಸಕರ ಯಾವುದೇ ಪರಿಶ್ರಮವಿಲ್ಲ ಎಂದರು. ಮಾರ್ಕೋನಹಳ್ಳಿ ಜಲಾಶಯದಿಂದ ತಾಲೂಕಿನ 128 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಆರಂಭಗೊಂಡು 5 ವರ್ಷ ಕಳೆದರೂ ಇಂದಿಗೂ ಅದಕ್ಕೆ ಚಾಲನೆ ಕೊಡಿಸಲಾಗದವರಿಗೆ, ಹೊಸ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಸಾಧ್ಯವೇ ಎಂದು ಶಾಸಕರ ಆಡಳಿತ ವೈಖರಿ ಟೀಕಿಸಿದರು.

ಕೆಲಸ ಮಾಡಿ ತೋರಿಸುತ್ತೇನೆ: ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮದೇ ಸರ್ಕಾರದಲ್ಲಿ ನಾನು 5 ವರ್ಷ ಮಂತ್ರಿಯಾಗಿರುತ್ತೇನೆ. ಆ ಅವಧಿಯಲ್ಲಿ ಮುಂದಿನ 50 ವರ್ಷಗಳಿಗೆ ಆಗುವಷ್ಟು ಅಭಿವೃದ್ಧಿ ಕೆಲಸ ಮಾಡಿ ತೋರಿಸುತ್ತೇನೆ ಎಂದರು.

ಬೃಹತ್ ಬೈಕ್ ರ‍್ಯಾಲಿ: ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ತಾಲೂಕಿನ ಗಡಿ ಗ್ರಾಮ ಗೊಂದಿಹಳ್ಳಿಯಿಂದ ಗರುಡನಹಳ್ಳಿ, ಬಿಳಗುಂದ, ಬೆಟ್ಟದಕೋಟೆ ಮಾರ್ಗವಾಗಿ ಬೈರಸಂದ್ರದವರೆಗೂ ಬೃಹತ್ ಬೈಕ್‌ರ‍್ಯಾಲಿ ನಡೆಸಿದರು. ಹದ್ದಿನಕಲ್ಲು ಹನುಮಂತರಾಯಸ್ವಾಮಿ ದೇವ ಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಎನ್.ಚಲುವರಾಯಸ್ವಾಮಿ ಅವರಿಗೆ ಜೆಸಿಬಿ ಮೂಲಕ ಹೂಮಳೆ ಸುರಿಸಿ ಸೇಬಿನ ಹಾರ ಹಾಕಿ ಸ್ವಾಗತ ಕೋರಲಾಯಿತು.

ಪಕ್ಷ ಸೇರ್ಪಡೆ: ಸಮಾರಂಭದಲ್ಲಿ ಕಾಳಿಂಗನಹಳ್ಳಿ ಗ್ರಾಪಂ ವ್ಯಾಪ್ತಿಯ ನೂರಾರು ಜೆಡಿಎಸ್ ಕಾರ್ಯಕರ್ತರು ಪಕ್ಷ ತೊರೆದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಈ ವೇಳೆ ಚಲುವರಾಯಸ್ವಾಮಿ ಪುತ್ರ ಸಚ್ಚಿನ್, ಎಸ್‌ಎಲ್‌ಡಿಬಿ ನಿರ್ದೇಶಕ ತಿಮ್ಮರಾಯಿಗೌಡ, ತಾಪಂ ಮಾಜಿ ಅಧ್ಯಕ್ಷ ಮೂಡ್ಲೀಗೌಡ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ವಿ.ದಿನೇಶ್, ಜಿಪಂ ಮಾಜಿ ಸದಸ್ಯ ಬಾಲು, ಸುರೇಶ್, ಮುಖಂಡರಾದ ಪಾಪಣ್ಣ, ಬಾಬು, ರಘು, ಗವೀಗೌಡ, ಸತ್ಯಣ್ಣ ಸುನೀಲ್, ಲಕ್ಷ್ಮೀಕಾಂತ್, ಸಂಪತ್, ರಮೇಶ್, ಅಶೋಕ್ ಇದ್ದರು.

ಒಂದನೇ ಪುಟದಿಂದ

ಗುಜರಾತ್‌ನಲ್ಲಿ ಸ್ಯಾಂಟ್ರೋ ರವಿ ಬಂಧನ

ಬಂಧನದಲ್ಲಿದ್ದಾನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು ನಾಲ್ವರನ್ನು ಬಂಧಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಶೀಘ್ರ ಕರೆತರಲಾಗುವುದು: ಸ್ಯಾಂಟ್ರೋ ರವಿ, ರಾಮ್‌ಜೀ ಹಾಗೂ ಸತೀಶ್ ಕುಮಾರ್‌ನನ್ನು ಗುಜರಾತ್‌ನ ನ್ಯಾಯಾಲಯಕ್ಕೆ ಹಾಜರುಪಡಿಸಿ, ಟ್ರಾನ್ಸಿಟ್ ರಿಮಾಂಡ್ ಆರ್ಡರ್(ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಅವರು ಬಂಧಿತ ವ್ಯಕ್ತಿಯನ್ನು ಬೇರೆ ರಾಜ್ಯಕ್ಕೆ ಸಾಗಿಸುವ ಉದ್ದೇಶಕ್ಕಾಗಿ ಪೊಲೀಸ್ ಕಸ್ಟಡಿಗೆ ಒಪ್ಪಿಸುವ ಆದೇಶ) ಪಡೆದು ಬೆಂಗಳೂರಿಗೆ ಕರೆತರಲಾಗುವುದು. ಪ್ರಯಾಣ ಅವಧಿ ಹೊರತಾಗಿ 24 ಗಂಟೆ ವಿಚಾರಣೆ ನಡೆಸಲು ಅವಕಾಶವಿರುತ್ತದೆ. ನಿಯಮಾನುಸಾರ ಶನಿವಾರ ಬೆಂಗಳೂರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ಶೀಘ್ರವೇ ಮೈಸೂರು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗುವುದು. ಸ್ಯಾಂಟ್ರೋ ರವಿಗೆ ಇತರೆ ಮೂವರು ಆರೋಪಿಗಳು ಆಶ್ರಯ ನೀಡಿರುವುದಲ್ಲದೆ ಈ ಪ್ರಕರಣದಲ್ಲಿ ಮತ್ಯಾವ ರೀತಿಯ ಪಾತ್ರವಿದೆ ಎನ್ನುವುದು ವಿಚಾರಣೆಯಲ್ಲಿ ತಿಳಿಯಲಿದೆ ಎಂದರು.

ರೂಪ ಬದಲಿಸಿಕೊಂಡಿದ್ದ: ತಲೆ ತುಂಬ ಕೂದಲು, ಕನ್ನಡಕ ಧರಿಸಿರುವ ಸ್ಯಾಂಟ್ರೋ ರವಿ ಫೋಟೋಗಳು ಹೆಚ್ಚು ಹರಿದಾಡಿದ್ದವು. ಆದರೆ ಇಂದು ಪೊಲೀಸರಿಗೆ ಸಿಕ್ಕಿಬಿದ್ದಾಗ ಆತ ಮೀಸೆ ತೆಗೆದಿದ್ದ, ಹಳೆಯ ಫೋಟೋ ರೀತಿ ತಲೆಯಲ್ಲಿ ಕೂದಲಿರಲಿಲ್ಲ. ತುಂಬು ತೋಳಿನ ಸ್ವೆಟರ್ ಧರಿಸಿದ್ದ. ಬಂಧನದ ವೇಳೆ ತೆಗೆದ ಸ್ಯಾಂಟ್ರೋ ರವಿ ಫೋಟೋ ತೋರಿಸಿದ ಎಡಿಜಿಪಿ ಅಲೋಕ್ ಕುಮಾರ್ ಅವರು, ಸ್ಯಾಂಟ್ರೋ ರವಿ ಹೊಸಬನಲ್ಲ, ಹಳೆಯ ಕ್ರಿಮಿನಲ್. ಹೇಗೆ ಪರಾರಿಯಾಗಬೇಕು, ಪೊಲೀಸರಿಂದ ಹೇಗೆ ತಪ್ಪಿಸಿಕೊಳ್ಳಬೇಕೆನ್ನುವುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ನಮ್ಮ ಪೊಲೀಸರೂ ಕೂಡ ಅತ್ಯಂತ ಚಾಣಾಕ್ಷತನದಿಂದ ನಿರಂತರ ಪರಿಶ್ರಮದಿಂದ ಆತನನ್ನು ಬಂಧಿಸಿದ್ದಾರೆ ಎಂದು ಹೇಳಿದರು.

ಮೂರು ಮನೆ ಪರಿಶೀಲನೆ: ದೂರು ನೀಡಿರುವ ಸಂತ್ರಸ್ತೆ ಹಾಗೂ ಒಡನಾಡಿ ಸಂಸ್ಥೆಯವರು ಇನ್ನಿತರರೊಂದಿಗೆ ಈಗಾಗಲೇ ಮಾತನಾಡಿದ್ದೇನೆ. ಮೂರ‍್ನಾಲ್ಕು ದಿನಗಳ ಹಿಂದೆ ದಟ್ಟಗಳ್ಳಿಯ ಮನೆಯೊಂದನ್ನು ಪರಿಶೀಲಿಸಲಾಗಿತ್ತು. ಇಂದು ದಟ್ಟಗಳ್ಳಿಯಲ್ಲಿರುವ ಮತ್ತೊಂದು ಮನೆ ಹಾಗೂ ಬೆಂಗಳೂರಿನ ಆರ್‌ಆರ್ ನಗರದ ಮನೆಯನ್ನು ಪರಿಶೀಲಿಸಿ, ಕೆಲವು ವಸ್ತುಗಳನ್ನು ವಶಪಡಿಸಿಕೊಂಡು ಸಂರಕ್ಷಿಸಲಾಗಿದೆ. ಸ್ಯಾಂಟ್ರೋ ರವಿ ವಿರುದ್ಧ ಒಟ್ಟು 28 ಪ್ರಕರಣಗಳಿವೆ. ಅದರಲ್ಲಿ ಎಷ್ಟು ನ್ಯಾಯಾಲಯದಲ್ಲಿ ಬಾಕಿ ಇವೆ, ಎಷ್ಟು ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿಲ್ಲ ಎಲ್ಲವನ್ನೂ ಪರಿಶೀಲನೆ ಮಾಡಬೇಕಿದೆ. ಇಲ್ಲಿಗೆ ಕರೆತಂದು ವಿಚಾರಣೆ ನಡೆಸಿದ ಬಳಿಕ ಆ ವಂಚಕನ ವಿರುದ್ಧ ಆರೋಪ ಸಂಬಂಧ ಎಲ್ಲಾ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಕಠಿಣ ಶಿಕ್ಷೆ ಕೊಡಿಸುವ ಗುರಿಯೊಂದಿಗೆ ತನಿಖೆ ಮುಂದುವರೆಸುತ್ತೇವೆ. ಆತನಿಗೆ ಯಾರು, ಯಾವ ರೀತಿ ಸಹಾಯ ಮಾಡಿದ್ದಾರೆ ಎನ್ನುವುದನ್ನು ಕೂಲಂಕುಶವಾಗಿ ಪರಿಶೀಲನೆ ಮಾಡುತ್ತೇವೆ ಎಂದು ತಿಳಿಸಿದರು.

ಪ್ರಶಂಸೆ, ಬಹುಮಾನ: ಕಾರ್ಯಾಚರಣೆಯಲ್ಲಿ ಭಾಗಿಯಾದ ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬನೋತ್, ಡಿಸಿಪಿಗಳಾದ ಮುತ್ತುರಾಜ್, ಎಂ.ಎಸ್.ಗೀತ, ರಾಮನಗರ ಎಸ್ಪಿ ಡಾ.ಸಂತೋಷ್ ಬಾಬು, ಮಂಡ್ಯ ಎಸ್ಪಿ ಎನ್.ಯತೀಶ್, ರಾಯಚೂರು ಎಸ್ಪಿ ಬಿ.ನಿಖಿಲ್, ಪ್ರಕರಣದ ತನಿಖಾಧಿಕಾರಿ ಎನ್‌ಆರ್ ವಿಭಾಗದ ಎಸಿಪಿ ಎಂ.ಶಿವಶಂಕರ್, ಸಿಸಿಬಿ ಎಸಿಪಿ ಅಶ್ವಥ್ ನಾರಾಯಣ, ನರಸಿಂಹರಾಜ ಠಾಣೆ ಇನ್ಸ್‌ಪೆಕ್ಟರ್ ಅಜರುದ್ದೀನ್, ಸಿಬ್ಬಂದಿ ಮಂಜುನಾಥ್, ಮಹೇಶ್, ವಿದ್ಯಾರಣ್ಯಪುರಂ ಇನ್ಸ್‌ಪೆಕ್ಟರ್ ಜಿ.ಸಿ.ರಾಜು, ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ವಿಜಯನಗರ ಠಾಣೆಯ ಬಿ.ಎಸ್.ರವಿಶಂಕರ್, ಬೀಚನಹಳ್ಳಿ ಠಾಣೆಯ ಜಯಪ್ರಕಾಶ್, ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ಜಿ.ಶೇಖರ್, ಎ.ಮಲ್ಲೇಶ್, ಲಷ್ಕರ್ ಠಾಣೆ ಪಿ.ಪಿ.ಸಂತೋಷ್, ಕೆ.ಆರ್.ಠಾಣೆ ಎನ್.ವಿ.ಮಹೇಶ್, ಸೆನ್ ಠಾಣೆ ಜಯಕುಮಾರ್, ಚಾಮರಾಜನಗರ ಪೂರ್ವ ಠಾಣೆ ಎ.ಆನಂದ್, ಸಂಚಾರ ಠಾಣೆಯ ನದೀಶ್ ಕುಮಾರ್, ಚನ್ನರಾಯಪಟ್ಟಣ ಠಾಣೆಯ ಕೆ.ಎಂ.ವಸಂತ್, ಸಾಲಿಗ್ರಾಮದ ವೃತ್ತದ ಕೆ.ಎಂ.ವಸಂತ್, ಸೆನ್ ಪೊಲೀಸ್ ಠಾಣೆ ರವಿಕುಮಾರ್ ಅವರನ್ನೊಳಗೊಂಡ ತಂಡವನ್ನು ಎಡಿಜಿಪಿ ಮುಕ್ತಕಂಠದಿಂದ ಪ್ರಶಂಸಿಸಿದರು. ಆರೋಪಿಯನ್ನು ಬಂಧಿಸಿ ಕರ್ನಾಟಕ ಪೊಲೀಸ್ ಗೌರವ ಉಳಿಸಿದ್ದಾರೆ. ಈ ತಂಡಕ್ಕೆ ಮುಖ್ಯಮಂತ್ರಿಗಳು, ಗೃಹ ಸಚಿವರು ಹಾಗೂ ಡಿಜಿ ಅಭಿನಂದನೆ ತಿಳಿಸಿದ್ದು, ಬಹುಮಾನ ಘೋಷಿಸಿದ್ದಾರೆ ಎಂದರು. ಸ್ಯಾಂಟ್ರೋ ರವಿ ವಂಚಿಸಿ ಮದುವೆಯಾಗಿ, ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿ, ವರದಕ್ಷಿಣೆ ಕಿರುಕುಳ ನೀಡಿ, ಸುಳ್ಳು ಪ್ರಕರಣ ದಾಖಲಿಸಿದ್ದಾಗಿ ಆತನ 2ನೇ ಪತ್ನಿ ನೀಡಿದ್ದ ದೂರಿನ ಆಧಾರದಲ್ಲಿ ವಿಜಯನಗರ ಠಾಣೆಯಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ, ಪರಿಶಿಷ್ಟರ ಮೇಲಿನ ದೌರ್ಜನ್ಯ ನಿಯಂತ್ರಣ ಕಾಯ್ದೆ, ಐಪಿಸಿ 506(ಉದ್ದೇಶಪೂರ್ವಕ ಅವಹೇಳನ, ಮನಶಾಂತಿ ಕೆಡಿಸುವ ಪ್ರಯತ್ನ), 504(ಕ್ರಿಮಿನಲ್ ಪಿತೂರಿ), 376 (ಅತ್ಯಾಚಾರ), 270 (ಪ್ರಾಣಹಾನಿಕರವಾದ ಸೋಂಕು ಹರಡುವ ಯತ್ನ), ಬಲವಂತದ ಗರ್ಭಪಾತ (313) ಹಾಗೂ 323(ಹಲ್ಲೆ), 498ಎ(ಕೌಟುಂಬಿಕ ದೌರ್ಜನ್ಯ) ಅಡಿ ಜ.2ರಂದು ಪ್ರಕರಣ ದಾಖಲಾಗಿತ್ತು.

ವಿಗ್ ತೆಗೆದಿದ್ದ ಸ್ಯಾಂಟ್ರೋ ರವಿ

ಕೊನೆಗೂ 10 ದಿನಗಳ ನಂತರ ಶುಕ್ರವಾರ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ. ನಾಲ್ವರು ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ 11 ಟೀಂಗಳಾಗಿ ಪೊಲೀಸರು ಸ್ಯಾಂಟ್ರೋಗಾಗಿ ಹುಡುಕಾಟ ನಡೆಸಿದ್ದಾರೆ. ಆತ ಪದೇ ಪದೇ ಸಿಮ್ ಕಾರ್ಡ್‌ಗಳನ್ನು ಬದಲಿಸುತ್ತಿದ್ದ. ಒಮ್ಮೆ ಬಳಸಿದ ಸಿಮ್ ಅನ್ನು ಆತ ಮತ್ತೊಮ್ಮೆ ಬಳಸುತ್ತಿರಲಿಲ್ಲ. ಅಷ್ಟೇ ಅಲ್ಲದೇ ಆನ್‌ಲೈನ್ ಖಾತೆಯ ಮೂಲಕ ಎಲ್ಲಿಯೂ ವ್ಯವಹಾರ ನಡೆಸಿರಲಿಲ್ಲ. ಇದರಿಂದ ಪೊಲೀಸರಿಗೆ ಆತನನ್ನು ಪತ್ತೆಹಚ್ಚುವುದು ಸವಾಲಾಗಿತ್ತು. ಗುರುವಾರ ರಾತ್ರಿ ಗುಜರಾತ್‌ನ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ರವಿ ಇರುವ ಬಗ್ಗೆ ಖಚಿತ ಮಾಹಿತಿ ಪಡೆದ ಪೊಲೀಸರ ತಂಡ ಶುಕ್ರವಾರ ಮಧ್ಯಾಹ್ನ ಆತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಇಬ್ಬರು ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಸ್ಯಾಂಟ್ರೋ ರವಿಯನ್ನು ಪೊಲೀಸರು ಬಂಧಿಸಿದ್ದಾರೆ.

ರವಿ ಈ ಹಿಂದೆ ತನ್ನ ಗ್ರಾಹಕರಾಗಿದ್ದವರ ಬಳಿ ಆಶ್ರಯ ಪಡೆದಿದ್ದ. ಆತನಿಗೆ ಪೊಲೀಸ್ ಇಲಾಖೆಯ ಆಳ ಅಗಲದ ಅರಿವಿತ್ತು. ಹೀಗಾಗಿ ಪೊಲೀಸರು ಚಾಪೆ ಕೆಳಗೆ ತೂರಿದರೆ ಆತ ರಂಗೋಲಿ ಕೆಳಗೆ ತೂರುತ್ತಿದ್ದ. ರಾಜ್ಯ ಬಿಟ್ಟವನು ಸೀದಾ ಬಾಂಬೆ ಸೇರಿದ್ದ. ಆ ಬಳಿಕ ಬಾಂಬೆ ದಾಟಿ ಗುಜರಾತ್‌ಗೆ ಎಂಟ್ರಿ ಕೊಟ್ಟಿದ್ದ. ರವಿ ಬಂಧನಕ್ಕಾಗಿ ಪೊಲೀಸರು ರಾಜ್ಯದಲ್ಲಿ ಮಾತ್ರವಲ್ಲದೇ ಅಕ್ಕಪಕ್ಕದ ರಾಜ್ಯಗಳಲ್ಲೂ ಹುಡುಕಾಟ ನಡೆಸುತ್ತಿದ್ದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಗುಜರಾತ್ ಪ್ರವಾಸ ಚರ್ಚೆಗೆ ಗ್ರಾಸ

ಮೈಸೂರು: ಸ್ಯಾಂಟ್ರೋ ರವಿ ಬಂಧನದ ಹಿಂದಿನ ದಿನ ಗೃಹ ಸಚಿವ ಆರಗ ಜ್ಞಾನೇಂದ್ರ ಗುಜರಾತ್ ಪ್ರವಾಸ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಗೃಹ ಸಚಿವ ಆರಗ ಜ್ಞಾನೇಂದ್ರ 2 ದಿನಗಳ ಗುಜರಾತ್ ಪ್ರವಾಸ ಕೈಗೊಂಡಿದ್ದರು. ನಿನ್ನೆಯಷ್ಟೇ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರನ್ನು ಭೇಟಿ ಮಾಡಿ ಕರ್ನಾಟಕದಲ್ಲಿ ವಿಧಿವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆ ಸಂಬಂಧ ಚರ್ಚಿಸಿ, ನಿನ್ನೆ ಸಂಜೆಯೇ ವಾಪಸ್ಸಾದರೆಂದು ತಿಳಿದು ಬಂದಿದೆ. ಆದರೆ ನಿನ್ನೆ ತಡರಾತ್ರಿ ಗುಜರಾತ್‌ನಿಂದ ಪ್ರಯಾಣ ಬೆಳೆಸಿದರೆಂಬ ಮಾತುಗಳೂ ಕೇಳಿಬರುತ್ತಿವೆ. ಹಾಗಾಗಿ ಗೃಹ ಸಚಿವರ ಗುಜರಾತ್ ಪ್ರಯಾಣ ಹಾಗೂ ಸ್ಯಾಂಟ್ರೋ ರವಿ ಬಂಧನ ಈಗ ಚರ್ಚೆಗೆ ಗ್ರಾಸವಾಗಿದೆ.

ವೇಷ ಬದಲಾದರೇನು ಅಪರಾಧ ವಾಸನೆ ಹೋಗದು...!

ಮೈಸೂರು: ಪರಿಚಯಸ್ಥರೊಬ್ಬರಿಗೆ ಕರೆ ಮಾಡಿದ್ದರಿಂದ ಸ್ಯಾಂಟ್ರೋ ರವಿ ಪತ್ತೆ ಸಾಧ್ಯವಾಯಿತು ಎನ್ನಲಾಗಿದೆ.

ತಲೆ ತುಂಬಾ ಕೂದಲು, ಕೂಲಿಂಗ್ ಗ್ಲಾಸ್, ಕೈ–ಕೊರಳಲ್ಲಿ ಚಿನ್ನಾಭರಣ ಹಾಕಿಕೊಂಡು ಮೆರೆಯುತ್ತಿದ್ದ ಸ್ಯಾಂಟ್ರೋ ರವಿ, ಪೊಲೀಸರಿಗೆ ಸಿಕ್ಕಿಬಿದ್ದಾಗ ಕಂಡು ಬಂದ ರೀತಿ ಬೇರೆಯೇ ಆಗಿತ್ತು. ರಾಜ್ಯದ ಉಡುಪಿ, ಮಂಗಳೂರು ಇನ್ನಿತರ ಕಡೆ ಅಡ್ಡಾಡಿದ್ದ ಸ್ಯಾಂಟ್ರೋ ರವಿ, ಪೊಲೀಸರು ಬೆನ್ನತ್ತಿರುವುದನ್ನು ತಿಳಿದು ಹೊರರಾಜ್ಯಗಳಿಗೆ ಹಾರಿದ್ದ. ಆ ವೇಳೆ ಗುರುತು ಸಿಗಬಾರದೆಂಬ ಕಾರಣಕ್ಕೆ ವಿಗ್ ತೆಗೆದು, ಮೀಸೆಯನ್ನೂ ಟ್ರಿಮ್ ಮಾಡಿಸಿದ್ದ. ಸಾಮಾನ್ಯನಲ್ಲಿ ಸಾಮಾನ್ಯನಂತೆ ತುಂಬು ತೋಳಿನ ಸ್ವೆಟರ್ ಧರಿಸಿದ್ದ. ಪಕ್ಕಾ ಸ್ಥಳೀಯ ವ್ಯಕ್ತಿಯಂತೆ ವೇಷ ಹಾಕಿಕೊಂಡಿದ್ದ.

ಹೀಗಾಗಬಹುದೆಂದು ಊಹಿಸಿದ್ದ ಪೊಲೀಸರು ವಿಗ್, ಮೀಸೆ ಇಲ್ಲದ ಸ್ಯಾಂಟ್ರೋ ರವಿಯ ಭಾವ ಚಿತ್ರ ಸಿದ್ಧಪಡಿಸಿಕೊಂಡು ಹುಡುಕಾಟ ನಡೆಸಿದ್ದರು. ಆತನ ಆಪ್ತರ ಮಾಹಿತಿ ಸಂಗ್ರಹಿಸಿ ನಿಗಾ ವಹಿಸಿದ್ದರು. ಗುಜರಾತ್‌ನಲ್ಲಿ ಬೇರೆ ಬೇರೆ ಸಿಮ್ ಖರೀದಿಸಿದ್ದ ಸ್ಯಾಂಟ್ರೋ ರವಿ ತನ್ನ ಸ್ನೇಹಿತನೊಬ್ಬನಿಗೆ ಒಂದೇ ಒಂದು ಕರೆ ಮಾಡಿದ್ದ. ಅದರಿಂದಲೇ ಆತ ಗುಜರಾತ್‌ನಲ್ಲಿರುವುದು ಪೊಲೀಸರಿಗೆ ಪಕ್ಕಾ ಆಯಿತು ಎಂದು ಹೇಳಲಾಗುತ್ತಿದೆ.

ರಾಯರ ದರ್ಶನಕ್ಕೆ ಬಂದಿದ್ದವನ ಮಾಹಿತಿ: ಗುಜರಾತ್‌ನಲ್ಲಿ ಸಿಕ್ಕಿಬಿದ್ದ ಸ್ಯಾಂಟ್ರೋ ರವಿ

ಬೆಂಗಳೂರು, ಜ.13– ವೇಶ್ಯಾವಾಟಿಕೆ ದಂಧೆಯ ಕಿಂಗ್‌ಪಿನ್ ಕೆ.ಎಸ್.ಮಂಜುನಾಥ ಅಲಿಯಾಸ್ ಸ್ಯಾಂಟ್ರೋ ರವಿಯನ್ನು ಕರ್ನಾಟಕ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸ್ಯಾಂಟ್ರೋ ರವಿ ಪೊಲೀಸರ ಖೆಡ್ಡಾಕ್ಕೆ ಬಿದ್ದಿದ್ದು ಮಂತ್ರಾಲಯದ ರಾಯರ ದರ್ಶನಕ್ಕೆ ಬಂದಿದ್ದವನಿಂದಲೇ ಎನ್ನುವುದು ವಿಶೇಷ.

ಸ್ಯಾಂಟ್ರೋ ರವಿ ಜಾಮೀನು ಅರ್ಜಿಯನ್ನು ಆಪ್ತ ಲಕ್ಷ್ಮಿತ್ ಅಲಿಯಾಸ್ ಚೇತನ್ ಎನ್ನುವಾತ ಹಾಕಿದ್ದ. ಈತ ನಿನ್ನೆ(ಜ.12) ಮಂತ್ರಾಲಯದ ರಾಯರ ದರ್ಶನಕ್ಕೆ ಬಂದಿದ್ದ. ಈ ವೇಳೆ ರಾಯಚೂರು ಪೊಲೀಸರು ಚೇತನ್‌ನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ. ಆ ವೇಳೆ ಸ್ಯಾಂಟ್ರೋ ರವಿ ಬಗ್ಗೆ ಅಸಲಿ ಸತ್ಯ ಬಾಯ್ಬಿಟ್ಟಿದ್ದಾನೆ.

ಕೂಡಲೇ ಎಸ್‌ಪಿ ನಿಖಿಲ್ ಅವರು ಚೇತನ್ ನೀಡಿದ ಮಾಹಿತಿಯಿಂದ ಸ್ಯಾಂಟ್ರೋ ರವಿ ಗುಜರಾತ್‌ನಲ್ಲಿ ಇರುವುದನ್ನು ಖಚಿತಪಡಿಸಿಕೊಂಡು ಬಲೆ ಬೀಸಿದ್ದಾರೆ. ಅಂತಿಮವಾಗಿ ಸ್ಯಾಂಟ್ರೋ ರವಿ ಕರ್ನಾಟಕ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಅಕ್ರಮ ವರ್ಗಾವಣೆ, ವಂಚನೆ, ಲೈಂಗಿಕ ದೌರ್ಜನ್ಯ, ಕೌಂಟುಬಿಕ ದೌರ್ಜನ್ಯ, ಲೇವಾದೇವಿ ಪ್ರಕರಣ ಹೀಗೆ ಹತ್ತಾರು ಕೇಸ್‌ಗಳ ಕರ್ಮಕಾಂಡ ಹೊರ ಬರುತ್ತಿದ್ದಂತೆಯೇ ಸ್ಯಾಂಟ್ರೋ ರವಿ ಪೊಲೀಸರಿಂದ ತಪ್ಪಿಸಿಕೊಂಡು ತಲೆಮರೆಸಿಕೊಂಡಿದ್ದ. ಹೀಗಾಗಿ ಈತನ ಬಂಧನಕ್ಕಾಗಿ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ತನಿಖಾ ತಂಡಗಳನ್ನು ರಚಿಸಿ ಎಡಿಜಿಪಿ ಅಲೋಕ್ ಕುಮಾರ್ ಆದೇಶಿಸಿದ್ದರು. ಕೊನೆಗೂ ಪೊಲೀಸ್ ವಿಶೇಷ ತನಿಖಾ ತಂಡ ಸ್ಯಾಂಟ್ರೋ ರವಿಯನ್ನು ಬಂಧಿಸಿದೆ. ಒಟ್ಟಿನಲ್ಲಿ ರಾಯರ ದರ್ಶನಕ್ಕೆ ಬಂದಿದ್ದ ಆಪ್ತನಿಂದಲೇ ಸ್ಯಾಂಟ್ರೋ ರವಿ ಸಿಕ್ಕಿಬಿದ್ದಿದ್ದಾನೆ.

'ಮನೆ ದೇವರು' ಸೂಚನೆ

ಆದಿನಾಡು ಚಿಕ್ಕಮ್ಮ ತಾಯಿ ದೇವಸ್ಥಾನಕ್ಕೆ ಇತ್ತೀಚೆಗೆ ಮಾಜಿ ಶಾಸಕ ನರೇಂದ್ರಸ್ವಾಮಿಯೊಡಗೂಡಿ ಸಿದ್ದರಾಮಯ್ಯ ಅವರ ಪುತ್ರ ಶಾಸಕ ಡಾ. ಯತೀಂದ್ರ ಭೇಟಿ ನೀಡಿದಾಗ ದೇವಸ್ಥಾನದ ಅರ್ಚಕ ಟಿ.ಲಿಂಗಣ್ಣ ಮೈಮೇಲೆ ಬಂದ ಚಿಕ್ಕಮ್ಮ ತಾಯಿ, 'ನಿಮಗೆ ಪ್ರಬಲ ಶಕ್ತಿಗಳ ಯೋಗವಿದೆ. ಒಂದು ಕಡೆ ಬಾಹುಬಲ ಚಾಚಿದರೆ ಆಗುವುದಿಲ್ಲ. ಎರಡೂ ಕಡೆಯೂ ಬಾಹುಬಲ ಚಾಚಬೇಕು. ಒಂದೇ ಕಡೆ ಚಾಚಿದರೆ ತಪ್ಪಾಗುತ್ತದೆ. ಆಯ್ತೇನಪ್ಪಾ' ಎಂದು ಯತೀಂದ್ರ ಅವರನ್ನು ಕೇಳಿದೆ. ನಂತರ ಎರಡೂ ಕಡೆ ಬಾಹುಬಲ ಚಾಚಿದರೆ ಗೆಲ್ಲಿಸಿಕೊಂಡು ಬರುತ್ತೇನೆ ಎಂದ ಚಿಕ್ಕಮ್ಮ ತಾಯಿ, ನಾನು ನಿಮ್ಮ ಮನೆ ದೇವರು ಎಂಬುದು ಗೊತ್ತಾ? ಎಂದು ಯತೀಂದ್ರ ಅವರನ್ನು ಪ್ರಶ್ನಿಸಿದೆ. ಈ ವೀಡಿಯೋ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ.

ಕಳೆದ ವಿಧಾನಸಭೆ ಚುನಾವಣೆ ವೇಳೆಯಲ್ಲೂ ಕೂಡ ಸಿದ್ದರಾಮಯ್ಯ ಅವರ ಮನೆ ದೇವರು ಎನ್ನಲಾದ ಚಿಕ್ಕಮ್ಮ ತಾಯಿ ಎರಡು ಕಡೆ ಸ್ಪರ್ಧಿಸುವಂತೆ ಸಿದ್ದರಾಮಯ್ಯನವರಿಗೆ ಸೂಚನೆ ನೀಡಿತ್ತು ಎಂದು ಕೆಲ ಭಕ್ತರು ಹೇಳುತ್ತಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಡಾ. ಯತೀಂದ್ರ, ತಮ್ಮ ತಂದೆ ಸಿದ್ದರಾಮಯ್ಯ ಅವರು ಕೋಲಾರ ಮತ್ತು ವರುಣಾದಲ್ಲಿ ಸ್ಪರ್ಧಿಸಬೇಕೆಂದು ವರುಣಾ ಕ್ಷೇತ್ರದ ಜನರು ಒತ್ತಾಯ ಮಾಡು ತ್ತಿದ್ದಾರೆ ಎಂದಿದ್ದಾರೆ. ಎರಡು ಕ್ಷೇತ್ರದಲ್ಲಿ ಸ್ಪರ್ಧಿಸುವುದು ತಪ್ಪೇನಲ್ಲ. ಸಿದ್ದರಾಮಯ್ಯನವರು ಕಳೆದ ಚುನಾವಣೆಯಲ್ಲೂ ಕೂಡ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಯತೀಂದ್ರ, ತಮ್ಮ ತಂದೆ ವರುಣಾದಿಂದಲೂ ಸ್ಪರ್ಧಿಸಬೇಕು ಎಂಬುದು ತನ್ನ ಅಭಿಪ್ರಾಯವೂ ಆಗಿದೆ ಎಂದರು.

ಒಂದೇ ಕ್ಷೇತ್ರದಿಂದ ಸ್ಪರ್ಧೆ

ಎರಡು ಕಡೆ ನಿಲ್ಲಬೇಕು ಎಂದು ದೇವರ ಹೇಳಿಕೆ ವಿಚಾರ ಹಾಗೂ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಕುರಿತು ಜಿಲ್ಲೆಯ ಅರಕಲಗೂಡು ತಾಲೂಕಿನ ಮುದಗನೂರು ಗ್ರಾಮದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಅದು ಯತೀಂದ್ರ ಅವರು ಅಭಿಪ್ರಾಯ. ನನ್ನ ಅಭಿಪ್ರಾಯ ಅಲ್ಲ. ಪಾಪ ಅವರು ತಂದೆ ಮೇಲಿನ ಪ್ರೀತಿಯಿಂದ ಕರೆಯುತ್ತಿದ್ದಾರೆ. ನನ್ನ ಅಭಿಪ್ರಾಯ ಒಂದೇ ಕಡೆ ನಿಂತುಕೊಳ್ಳುವುದು ಎಂದರು. ಸಿದ್ದರಾಮಯ್ಯ ಅವರನ್ನು ಹರಕೆಯ ಕುರಿ ಮಾಡುತ್ತಿದ್ದಾರೆ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಕುಮಾರಸ್ವಾಮಿ ಅವರು ನಮ್ಮ ಪಕ್ಷದವರಾ? ನನ್ನನ್ನು ಯಾರೂ ಹರಕೆ ಕುರಿ ಮಾಡಲು ಸಾಧ್ಯವಿಲ್ಲ. ಜನರು ತೀರ್ಮಾನ ಮಾಡುತ್ತಾರೆ. ವಿರೋಧ ಪಕ್ಷದವರು ಹೇಳಿಕೆ ಕೊಡುತ್ತಾರೆ. ಅದಕ್ಕೆಲ್ಲ ಉತ್ತರ ಕೊಡುತ್ತ ಕೂರಲು ಆಗುವುದಿಲ್ಲ ಎಂದರು.

ಅಪರಾಧ ಕೃತ್ಯ ಪತ್ತೆಗೆ ಡ್ರೋಣ್ ಕ್ಯಾಮರಾ ಬಳಸಲು ಪೊಲೀಸ್ ಇಲಾಖೆ ನಿರ್ಧಾರ

ಬೆಂಗಳೂರು, ಜ.13(ಕೆಎಂಶಿ)–ಅಪರಾಧ ಕೃತ್ಯ ಪತ್ತೆ ಹಚ್ಚಲು ಹಾಗೂ ಸಮಾಜಘಾತುಕ ಶಕ್ತಿಗಳ ಚಲನ–ವಲನದ ಮೇಲೆ ತೀವ್ರ ನಿಗಾ ಇಡಲು ಪೊಲೀಸ್ ಇಲಾಖೆಯು ಡ್ರೋಣ್ ಕ್ಯಾಮರಾ ಬಳಕೆ ಮಾಡಲು ನಿರ್ಧರಿಸಿದೆ. ಅತ್ಯಾಧುನಿಕ ತಂತ್ರಜ್ಞಾನ, ಮೊಬೈಲ್ ಬಳಕೆ ಮೂಲಕ ಅಪರಾಧ ಕೃತ್ಯ ತಡೆಯಲು ಹಾಗೂ ಪತ್ತೆ ಹಚ್ಚಲು ಪ್ರಯತ್ನಿಸುತ್ತಿರುವ ಪೊಲೀಸ್ ಇಲಾಖೆಯು ಒಂದು ಹೆಜ್ಜೆ ಮುಂದೆ ಹೋಗಿ ಡ್ರೋಣ್ ಕ್ಯಾಮರಾ ಬಳಸಲು ಯೋಜಿಸಿದೆ.

ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೂ ಡ್ರೋಣ್ ಕ್ಯಾಮರಾ ಖರೀದಿಸಲು ಮುಂದಾಗಿದೆ. ಠಾಣೆಯ ಸಿಬ್ಬಂದಿಗೆ ಈ ಕ್ಯಾಮರಾ ಬಳಕೆಯ ಬಗ್ಗೆ ಸೂಕ್ತ ತರಬೇತಿ ನೀಡಲಾಗುತ್ತದೆ.

ಮುಂದಿನ ಆರ್ಥಿಕ ಸಾಲಿನ ಆಯವ್ಯಯದಲ್ಲಿ ರಾಜ್ಯದ ಪ್ರತಿ ಠಾಣೆಯಲ್ಲೂ ಡ್ರೋಣ್ ಕ್ಯಾಮರಾ ಬಳಸುವ ಬಗ್ಗೆ ಘೋಷಿಸಲಾಗುತ್ತದೆ. ಆಯಾ ಠಾಣೆಯಲ್ಲಿ ಅಗತ್ಯವಿರುವ ಸಂದರ್ಭದಲ್ಲಿ ಇದನ್ನು ಬಳಸಲಾಗುತ್ತದೆ. ಠಾಣೆ ವ್ಯಾಪ್ತಿಯಲ್ಲಿ ಜರುಗುವ ಸಭೆ–ಸಮಾರಂಭ, ಮೆರವಣಿಗೆಗಳ ಮೇಲೆ ನಿಗಾ ಇಡಲು ಇವು ಅನಿವಾರ್ಯವಾಗಿವೆ. ಅಲ್ಲದೆ, ಗಣ್ಯರು ಹಾಗೂ ಅತೀ ಗಣ್ಯರ ಸಮಾರಂಭ, ರ‍್ಯಾಲಿಗಳ ಸಂದರ್ಭದಲ್ಲೂ ಬಳಸಲಾಗುತ್ತದೆ. ದೊಡ್ಡ ಪ್ರಮಾಣದ ಪ್ರತಿಭಟನಾ ಮೆರವಣಿಗೆಗಳು, ಗಲಭೆಗಳು ಉಂಟಾದ ಪ್ರದೇಶಗಳಲ್ಲಿ, ಜಾತ್ರೆ, ಸಂತೆ, ಉತ್ಸವ, ಹಬ್ಬದ ಸಂದರ್ಭದಲ್ಲಿ ಡ್ರೋಣ್ ಕ್ಯಾಮರಾ ಬಳಕೆಯಿಂದ ಅನುಕೂಲ ಆಗಲಿದೆ.

ವಾಹನಗಳು ಹೋಗಲಾಗದ ಪ್ರದೇಶಗಳಲ್ಲಿ ಫೋಟೋ ಹಾಗೂ ವಿಡಿಯೋ ಚಿತ್ರೀಕರಣಕ್ಕೆ ಸಹಕಾರಿ ಆಗಲಿದೆ. ಕೆಲವೊಂದು ಸೂಕ್ಷ್ಮ ಸಂದರ್ಭ ಹಾಗೂ ಸನ್ನಿವೇಶಗಳಲ್ಲೂ ಬಳಕೆ ಮಾಡಿ ಅಪರಾಧ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಡಲು ಇಲಾಖೆ ಯೋಜಿಸಿದೆ. ಈಗ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹೊರಗುತ್ತಿಗೆ ಮೂಲಕ ಡ್ರೋಣ್ ಕ್ಯಾಮರಾದ ಬಳಕೆಯನ್ನು ಪೊಲೀಸ್ ಇಲಾಖೆ ಮಾಡುತ್ತಿದೆ.

ಕಾಲ ಕಾಲಕ್ಕೆ ಬದಲಾಗುವ ತಂತ್ರಜ್ಞಾನವನ್ನು ಬಳಸುತ್ತಿರುವ ಇಲಾಖೆಯು ಸಾಮಾನ್ಯ ಕ್ಯಾಮರಾಗಳ ಬದಲಾಗಿ ಡ್ರೋಣ್ ಕ್ಯಾಮರಾ ಉಪಯೋಗಕ್ಕೆ ಸಜ್ಜಾಗುತ್ತಿದೆ. ಗಂಟೆಗಟ್ಟಲೆ, ಕಿಲೋ ಮೀಟರ್‌ಗಟ್ಟಲೆ ಸಂಚಾರದ ದಟ್ಟಣೆ ಉಂಟಾದ ಸಂದರ್ಭದಲ್ಲಿ ಅಂತಹ ದೃಶ್ಯ ಸೆರೆ ಹಿಡಿಯಲು ಅನುಕೂಲ ಮಾಡಿಕೊಡುತ್ತದೆ.


ಪ್ರವಾಹ ಸೇರಿದಂತೆ ನಾನಾ ರೀತಿಯ ವಿಕೋಪ ಸಂದರ್ಭಗಳಲ್ಲೂ ನೆರವಿಗೆ ಬರಲಿದೆ. ಆ ಮೂಲಕ ಸಂಕಷ್ಟದ ತೀವ್ರತೆ ಅರಿತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ.

ಈಗ ಖಾಸಗಿಯಾಗಿ ಮದುವೆ ಸೇರಿದಂತೆ ವಿವಿಧ ಸಭೆ–ಸಮಾರಂಭಗಳಲ್ಲಿ ಬಳಸಲಾಗುತ್ತದೆ. ರಾಜಕೀಯ ಪಕ್ಷಗಳ ರ‍್ಯಾಲಿಗಳಲ್ಲೂ ಉಪಯೋಗಿಸಲಾಗುತ್ತದೆ. ಆದರೆ, ಪೊಲೀಸ್ ಠಾಣೆಗಳಲ್ಲಿ ಈ ಸೌಲಭ್ಯ ಇರಲಿಲ್ಲ.

ಪಿಓಕೆಯಲ್ಲಿ ಆಹಾರಕ್ಕೆ ಹಾಹಾಕಾರ

ಬಾಗ್, ಜ.13– ಪಾಕಿಸ್ತಾನದಲ್ಲಿ ಎದುರಾಗಿರುವಂತೆಯೆ, ಪಾಕ್ ಆಕ್ರಮಿತ ಕಾಶ್ಮೀರದ ಬಾಗ್ ಮತ್ತು ಮುಜಾಫರಾಬಾದ್ ಸೇರಿದಂತೆ ಅನೇಕ ಕಡೆಗಳಲ್ಲಿ ಆಹಾರಕ್ಕಾಗಿ ತೀವ್ರ ಹಾಹಾಕಾರ ಉಂಟಾಗಿದೆ. ಇದಕ್ಕೆ ಪಾಕಿಸ್ತಾನ ಮತ್ತು ಪಿಓಕೆ ಸರ್ಕಾರ ಕಾರಣ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂದು ಕಡೆ ಸರ್ಕಾರ ಸಬ್ಸಿಡಿ ಸಹಿತ ಗೋಧಿ ಪೂರೈಕೆಯನ್ನು ಸ್ಥಗಿತಗೊಳಿಸಿರುವಂತೆ ಮತ್ತೊಂದೆಡೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ದಿನಸಿ ಅಂಗಡಿಗಳಲ್ಲಿ ಆಹಾರ ಪದಾರ್ಥಗಳೇ ಸಿಗುತ್ತಿಲ್ಲ. ಕೆಲವು ದಿನಗಳಿಂದ ಹತಾಶ ಪರಿಸ್ಥಿತಿ ಮನೆ ಮಾಡಿದ್ದು, ಜನರ ನಡುವೆ ಘರ್ಷಣೆಗಳು ಸಂಭವಿಸುತ್ತಿವೆ.

ನ್ಯೂಜಿಲೆಂಡ್, ಆಸ್ಟ್ರೇಲಿಯಾ ಸರಣಿಗೆ ಭಾರತ ತಂಡ ಪ್ರಕಟ



ಮುಂಬೈ, ಜ.13– ಮುಂಬರುವ ನ್ಯೂಜಿಲೆಂಡ್ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಸರಣಿಗೆ ಬಿಸಿಸಿಐ ಭಾರತ ತಂಡವನ್ನು ಪ್ರಕಟಿಸಿದೆ. ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧ 3 ಏಕದಿನ ಹಾಗೂ ಟಿ20 ಪಂದ್ಯ ನಡೆಯಲಿದ್ದು, ಬಿಸಿಸಿಐ ಭಾರತ ತಂಡದಲ್ಲಿ 2 ಬದಲಾವಣೆ ಮಾಡಿದೆ. ಕೆ.ಎಲ್.ರಾಹುಲ್ ವೈವಾಹಿಕ ಬದುಕಿಗೆ ಕಾಲಿಡುತ್ತಿರುವ ಕಾರಣ ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೆ ಲಭ್ಯವಿಲ್ಲ. ಇತ್ತ ಆಲ್‌ರೌಂಡರ್ ಅಕ್ಷರ್ ಪಟೇಲ್ ಕೂಡ ವೈಯಕ್ತಿಕ ಕಾರಣದಿಂದ ಲಭ್ಯವಿಲ್ಲ.

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡ: ರೋಹಿತ್ ಶರ್ಮಾ(ನಾಯಕ), ಶುಭಮನ್ ಗಿಲ್, ಇಶಾನ್ ಕಿಶನ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸೂರ್ಯ ಕುಮಾರ್ ಯಾದವ್, ಕೆಎಸ್ ಭರತ್(ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ವಾಶಿಂಗ್ಟನ್ ಸುಂದರ್, ಶಹಬಾಜ್ ಅಹಮ್ಮದ್, ಶಾರ್ದೂಲ್ ಠಾಕೂರ್, ಯುಜುವೇಂದ್ರ ಚಹಾಲ್, ಕುಲ್ದೀಪ್ ಯಾದವ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲ್ಲಿಕ್.

ನ್ಯೂಜಿಲೆಂಡ್ ವಿರುದ್ಧದ ಟಿ20 ತಂಡಕ್ಕೆ ಕೆಲ ಮಹತ್ವದ ಬದಲಾವಣೆ ಮಾಡಲಾಗಿದೆ. ನಾಯಕ ರೋಹಿತ್ ಶರ್ಮಾಗೆ ವಿಶ್ರಾಂತಿ ನೀಡಿ ಹಾರ್ದಿಕ್ ಪಾಂಡ್ಯಗೆ ಮತ್ತೆ ನಾಯಕತ್ವ ನೀಡಲಾಗಿದೆ. ಇನ್ನು ವಿರಾಟ್ ಕೊಹ್ಲಿಗೆ ವಿಶ್ರಾಂತಿ ನೀಡಲಾಗಿದ್ದು, ಪೃಥ್ವಿ ಶಾ ಗೆ ಸ್ಥಾನ ನೀಡಲಾಗಿದೆ. ವಿಕೆಟ್ ಕೀಪರ್ ಆಗಿ ಜಿತೇಶ್ ಶರ್ಮಾಗೆ ಸ್ಥಾನ ನೀಡಲಾಗಿದೆ.

ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಗೆ ಭಾರತ ತಂಡ: ಹಾರ್ದಿಕ್ ಪಾಂಡ್ಯ(ನಾಯಕ), ಸೂರ್ಯ ಕುಮಾರ್ ಯಾದವ್, ಇಶಾನ್ ಕಿಶನ್, ಋತುರಾಜ್ ಗಾಯಕ್ವಾಡ್, ಶುಭಮನ್ ಗಿಲ್, ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ಜಿತೇಶ್ ಶರ್ಮಾ, ವಾಶಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯುಜುವೇಂದ್ರ ಚಹಾಲ್, ಅರ್ಶದೀಪ್ ಸಿಂಗ್, ಉಮ್ರಾನ್ ಮಲ್ಲಿಕ್, ಶಿವಂ ಮಾವಿ, ಪೃಥ್ವಿ ಶಾ, ಮುಖೇಶ್ ಕುಮಾರ್.

ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯ ಆರಂಭಿಕ 2 ಪಂದ್ಯಕ್ಕೆ ಟೀಂ ಇಂಡಿಯಾ ಪ್ರಕಟಿಸಲಾಗಿದೆ. ಏಕದಿನ ಹಾಗೂ ಟಿ20 ಸರಣಿಯಿಂದ ಹೊರಗುಳಿದಿದ್ದ ಕೆ.ಎಲ್.ರಾಹುಲ್ ಆಸೀಸ್ ವಿರುದ್ಧದ ಟೆಸ್ಟ್ ಸರಣಿಗೆ ಮರಳಿದ್ದಾರೆ. ಗಾಯಗೊಂಡು ಸುದೀರ್ಘ ದಿನಗಳಿಂದ ವಿಶ್ರಾಂತಿಯಲ್ಲಿರುವ ರವೀಂದ್ರ ಜಡೇಜಾ ಕಮ್‌ಬ್ಯಾಕ್ ಮಾಡಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧದ 2 ಟೆಸ್ಟ್ ಪಂದ್ಯಕ್ಕೆ ಭಾರತ ತಂಡ: ರೋಹಿತ್ ಶರ್ಮಾ(ನಾಯಕ), ಕೆ.ಎಲ್.ರಾಹುಲ್, ಶುಭಮನ್ ಗಿಲ್, ಚೇತೇಶ್ವರ ಪೂಜಾರ, ಶ್ರೇಯಸ್ ಅಯ್ಯರ್, ಕೆ.ಎಸ್.ಭರತ್, ಇಶಾನ್ ಕಿಶನ್, ಆರ್.ಅಶ್ವಿನ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ರವೀಂದ್ರ ಜಡೇಜಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಜಯದೇವ್ ಉನಾದ್ಕಟ್, ಸೂರ್ಯಕುಮಾರ್ ಯಾದವ್.

ಕಳೆದ ವರ್ಷ ತಿರುಪತಿ ಹುಂಡಿಯಲ್ಲಿ 1,450 ಕೋಟಿ ಸಂಗ್ರಹ

ತಿರುಪತಿ, ಜ.13– ವಿಶ್ವದ ಅತ್ಯಂತ ಶ್ರೀಮಂತ ಹಿಂದೂ ದೇವಾಲಯ ಎಂದೇ ಪ್ರಸಿದ್ಧಿಯಾಗಿರುವ ವೆಂಕಟೇಶ್ವರ ಸ್ವಾಮಿ ದೇವಾಲಯದ ಹುಂಡಿಯಲ್ಲಿ 2022ರಲ್ಲಿ 1,450 ಕೋಟಿ ಸಂಗ್ರಹವಾಗಿರುವುದಾಗಿ ತಿರುಮಲ ತಿರುಪತಿ ದೇವಸ್ಥಾನಗಳ (ಟಿಟಿಡಿ) ಕಾರ್ಯ ನಿರ್ವಾಹಕ ಅಧಿಕಾರಿ ಧರ್ಮಾ ರೆಡ್ಡಿ ತಿಳಿಸಿದ್ದಾರೆ.



2021ರಲ್ಲಿ 1.04 ಕೋಟಿ ಭಕ್ತರು ದೇವಾಲಯಕ್ಕೆ ಭೇಟಿ ನೀಡಿದ್ದು, 833.41 ಕೋಟಿ ರೂ. ಹಣ ಸಂಗ್ರಹವಾಗಿತ್ತು. "2022 ರಲ್ಲಿ 2.37 ಕೋಟಿ ಭಕ್ತರು ದೇವಾಲಯಕ್ಕೆ ಭೇಟಿ ನೀಡಿದ್ದು, 1,450.50 ಕೋಟಿ ರೂ. ಹುಂಡಿಯಲ್ಲಿ ಸಂಗ್ರಹವಾಗಿದೆ" ಎಂದು ರೆಡ್ಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 2021 ಮತ್ತು 2022 ಆರಂಭದಲ್ಲಿ ಕೊರೊನಾ ನಿರ್ಬಂಧಗಳಿದ್ದವು. ಹೀಗಾಗಿ ಇವೆರಡು ವರ್ಷಗಳನ್ನು ಹೋಲಿಸಲು ಸಾಧ್ಯವಿಲ್ಲ ಎಂದು ದೇವಾಲಯ ಆಡಳಿತ ಮಂಡಳಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ, ಡಿಸೆಂಬರ್ ತಿಂಗಳೊಂದರಲ್ಲೇ 129.37 ಕೋಟಿ ರೂ. ಹುಂಡಿಯಲ್ಲಿ ಸಂಗ್ರಹವಾಗಿದೆ. 2023ರ ಜನವರಿ 11ರವರೆಗೆ 6 ಲಕ್ಷಕ್ಕೂ ಹೆಚ್ಚು ಭಕ್ತರು ದೇವಾಲಯಕ್ಕೆ ಭೇಟಿ ನೀಡಿದ್ದು, ರೂ.39.40 ಕೋಟಿ ಕಾಣಿಕೆ ಸಲ್ಲಿಸಿದ್ದಾರೆ. 2022ರಲ್ಲಿ 11.54 ಲಕ್ಷ ಲಡ್ಡು ಪ್ರಸಾದ ಮಾರಾಟ ಮಾಡಲಾಗಿದೆ.



ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ ಮತ್ತು ಪ್ರೊ. ಟಿ. ಅನುತಾರಾಮಯ್ಯನವರ ಒಡನಾಡಿ ಬಳಗದ ವತಿಯಿಂದ ಮಾನಸಗಂಗೋತ್ರಿಯ ಗಾಂಧಿ ಭವನದಲ್ಲಿ ಮೈಸೂರು ವಿವಿ ಇತಿಹಾಸ ವಿಭಾಗದ ಅಧ್ಯಕ್ಷ ಹಾಗೂ ಗಾಂಧಿ ಭವನದ ನಿರ್ದೇಶಕರಾಗಿದ್ದ ಪ್ರೊ. ಟಿ. ಅನುತಾರಾಮಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮೈಸೂರು ವಿವಿ ಪ್ರಭಾರ [illegible], ಗಾಂಧಿ ಭವನ ನಿರ್ದೇಶಕ ಪ್ರೊ. ಎಸ್.ನರೇಂದ್ರ ಕುಮಾರ್, ಪ್ರೊ.ಎಸ್.ಶಿವರಾಜಪ್ಪ, ಕೆ.ಟಿ.ವೀರಪ್ಪ, ಎಂ.ಜಿ.ಬಸವರಾಜು, ಪ್ರೊ. ಗುರುಸಿದ್ದಯ್ಯ ಸೇರಿದಂತೆ ಮತ್ತಿತರರಿದ್ದರು.

ಸ್ವಾಮಿ ವಿವೇಕಾನಂದ ನ್ಯೂ ಮಿಷನ್ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ



ಮೈಸೂರು, ಜ.13(ಜಿಎ)– ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಯಾವುದೇ ಸಂಸ್ಥೆ ಸ್ಥಾಪಿಸಿದರೂ ಅದು ಯಶಸ್ವಿಯಾಗುತ್ತದೆ ಎಂದು ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ರಾಜೇಂದ್ರ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಜೆಎಲ್‌ಬಿ ರಸ್ತೆಯ ಹೋಟೆಲ್ ಮಯೂರ ಹೊಯ್ಸಳದಲ್ಲಿ ಸ್ವಾಮಿ ವಿವೇಕಾನಂದ ನ್ಯೂ ವಿಷನ್ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ ಮತ್ತು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರು ಎಂದರೆ, ಯುವಕರಿಗೆ ಸ್ಫೂರ್ತಿ, ಶಕ್ತಿ ಹಾಗೂ ಪ್ರೇರಣೆಯಿಂದತೆ ಅಂತಹ ಮಹಾವ್ಯಕ್ತಿಯ ಜಯಂತಿಯಂದು ಈ ಸಂಸ್ಥೆ ಉದ್ಘಾಟನೆಯಾಗುತ್ತಿರುವುದು ಸಂತಸದ ವಿಚಾರವಾಗಿದೆ ಎಂದರು.

ಡಾ. ಬಾಲಸುಬ್ರಮಣ್ಯಂ ಅವರು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯನ್ನು ಕಟ್ಟುವ ಮೂಲಕ ಗ್ರಾಮೀಣ ಪ್ರದೇಶದ ಜನರ ಸೇವೆಗಾಗಿ ಮುಂದಾದರು. ಇಂದು ಅದು ದೇಶದ ಉತ್ತಮ ಸ್ಥಾನದಲ್ಲಿದೆ. ಹೀಗೆ ವಿವೇಕಾನಂದರ ಹೆಸರಿನಲ್ಲಿ ಸಂಸ್ಥೆಗಳು ಸಮಾಜ ಸೇವೆಗಳ ಮೂಲಕ ಗುರುತಿಸಿಕೊಂಡಿದ್ದಾರೆ. ಹಾಗೇ ಈ ಸಂಸ್ಥೆಯೂ ಉತ್ತಮ ಸಮಾಜ ಮುಖಿ ಕಾರ್ಯಗಳ ಮೂಲಕ ಯಶಸ್ಸು ಕಾಣಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಟ್ರಸ್ಟ್ ಅಧ್ಯಕ್ಷೆ ರಜಿನಿ ಶಂಕರ್, ಉಪಾಧ್ಯಕ್ಷ ಗೋಪಾಲ್, ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಪ್ರಸಾದ್ ಸೇರಿದಂತೆ ಮತ್ತಿತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ ಫಾರ್ ಸೇಲ್
ಜ್ಞಾನಭಾರತಿ ಲೇಔಟ್, ದಡದಹಳ್ಳಿ 30x40 "ರಾಷ್ಟ್ರೋತ್ಥಾನ ವಿದ್ಯಾಕೇಂದ್ರ" ರೋಡ್, ಈಸ್ಟ್ ಫೇಸಿಂಗ್, ಮುಡಾ ಖಾತೆ, ಬೆಲೆ : 24 ಲಕ್ಷ
9342123373

CAN WORK FROM HOME !!!
MCA/EC/EE Graduates, if interested to work on ES, IOT and FPGA Hardware and Software, Please send your brief resume with Photo to
smnsimha@gmail.com
Saroja Enterprises, Mysuru

ಸೈಟು ಮಾರಾಟಕ್ಕಿದೆ
ಉರ್ದು ಶಿಕ್ಷಕರ ಬಡಾವಣೆ, ಮೌಲೀಂನಗರ, ಮೈಸೂರಿನಲ್ಲಿ 30x40 ಸೈಟು ಮಾರಾಟಕ್ಕಿದೆ.
9972459598
8711880861

ನಾಟಿ ಔಷಧ
ಮಂಡಿ ನೋವು ಎಷ್ಟು ಹಳೆಯದಾದರೂ ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿವಸಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ. (ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ.)
8904081333

ಬೇಕಾಗಿದ್ದಾರೆ
ಸರಸ್ವತಿಪುರಂನ ರಿಯಲ್ ಎಸ್ಟೇಟ್ ಕಛೇರಿಯಲ್ಲಿ Part Time ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆ, ವಿದ್ಯಾರ್ಹತೆ: II PUC, ಸಂಬಳ: 7,000/–. ಸಂಪರ್ಕಿಸಿ:
8861042449

ಬೇಕಾಗಿದ್ದಾರೆ
1) ಫೀಲ್ಡ್ ಸೂಪರ್ ವೈಸರ್ – 2 ಮಂದಿ. (ದ್ವಿಚಕ್ರ ವಾಹನದ ಜೊತೆಗೆ ಸೆಕ್ಯೂರಿಟಿ ಫೀಲ್ಡ್ ಅನುಭವವಿರಬೇಕು)
2) ಸೆಕ್ಯೂರಿಟಿ ಗಾರ್ಡ್‌ಗಳು – 10 ಮಂದಿ
ಸ್ಥಳ: 1) ವಿದ್ಯಾರಣ್ಯಪುರಂ, 2) ನಜರ್‌ಬಾದ್, 3) ಹಿನಕಲ್, 4) ಬೆಳಗೊಳ, 5) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ.
3) ಹೌಸ್‌ಕೀಪರ್ (ಮಹಿಳೆಯರು ಮಾತ್ರ)
ಸ್ಥಳ: GSSS ಮಹಿಳಾ ಕಾಲೇಜ್ ಹಾಸ್ಟೆಲ್, ಮೇಟಗಳ್ಳಿ
7204816261 / 9242406261

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಕೂರ್ಗಳ್ಳಿ ಕೈಗಾರಿಕಾ ಪ್ರಾದೇಶಿಕ, ಇಲ್ಲಿ ಉನ್ನತ ಕಂಪನಿ. ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಮಹಿಳೆಯರು / ಪುರುಷರು. ವಿದ್ಯಾರ್ಹತೆ: 8th, 9th, SSLC, PUC, Any Degree & ITI Deploma (Helper, Security House Keeping, Computer work, Mechnical) (B.Com Accounts knowledge ಬೇಕಾಗಿದ್ದಾರೆ.
7204810152 / 7892713020
7259245905

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
8861612486

ಸುವರ್ಣ ಯಾತ್ರ
ಕಾಶಿ ಪ್ರವಾಸ, 2 ಜ್ಯೋತಿರ್ಲಿಂಗ ಸೇರಿ 7 ದಿನಗಳು 24-2–2023, ನೇಪಾಳ್ ಪ್ರವಾಸ–ಮುಕ್ತಿನಾಥ, ಪೋಕ್ರ ಕಟ್ಮಂಡ್, ಸೋನಾಲಿ ಮನೋಕಮನ. 9 ದಿನಗಳು 9–3–2023, ಗುಜರಾತ್ ಪ್ರವಾಸ – ಸೋಮನಾಥ್ ನಾಗೇಶ್ವರ ದ್ವಾರಕ ಬಾವ ನಗರ, ಡಿಯು 30–01–2023.
9019462508, 8970949434



SUNZONE SOLAR SYSTEM
VM Double Road, Kuvempunagar, Mysuru
9845175443

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್ ಕೆಲಸಕ್ಕೆ ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ. ಹಿನಕಲ್, ಮೈಸೂರು. ಕ್ಯಾಷಿಯರ್, ಹೆಲ್ಪರ್, ಏರ್‌ಬಾಯ್. ಸಂಪರ್ಕಿಸಿ:
8088393837
9380546330

Dr.D.H.BAGALKOT SEXOLOGIST (Since 1983)
ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ
ಶೀಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತೆಳುವಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ
*ಮೈಸೂರು: ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ, ಧನವಂತ್ರಿ ರೋಡ್
Cell:9743193428
www.drbagalkot.com

WANTED
HOUSE KEEPING
ROYAL LOOK SALON
PROFESSIONAL UNISEX
LADIES ONLY
#468/A, Vinaya Marga, Opp. Jain Temple, Siddartha Layout, Nazarbad Mohalla, Mysore - 570011
M : 89712 32898

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ಮೈಸೂರಿನಲ್ಲಿ 40 ವರ್ಷ ವಯೋಮಿತಿ ಒಳಗೆ ಇರುವ ನಿರುದ್ಯೋಗ ಯುವತಿಯರು ಮತ್ತು ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9844264134
9844736136

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000/-
Ph.9380142144
ಶಿವರಾಂಪೇಟೆ, ಮೈಸೂರು

TNI TECHNOLOGIES
871, 1ST FLOOR, 4TH CROSS, BANK COLONY ROAD, BOGADI, MYSORE-570026.
TRAINING + JOB
- Office Essentials
- Accounting With Tally
- GST Skills

Python
Saturday & Sunday Batches for College Students
8951208347

NUETECH SOLAR WATER HEATER
ಬಿಸಿ ನೀರಿನ ಸಮಸ್ಯೆಗೆ ಹಾಗೂ ದೀರ್ಘ ಕಾಲದ ಬಾಳಿಕೆಗಾಗಿ ಹಾಗೂ 10 ವರ್ಷ ವಾರಂಟಿ.
Company Super Stockist
USHA KIRAN AGENCY
9844069190

SITES FOR SALE
ಕೇಶವಮೂರ್ತಿ ಬಡಾವಣೆ
KSOU ACADEMIC BHAVAN MANDAKALLI OPPOSIT, Dadadahalli road GURURU, Mysore Taluku & District.
30x40, 30x50
MUDA APPROVED
SK DEVELOPER & PROPERTIES, JP nagar, Ringroad, Mysore.
8453531221

ಸೋಲಾರ್ ವಾಟರ್ ಹೀಟರ್
Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ। ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ.: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲ ಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ), ಮೈಸೂರು.

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಜಮೀನುಗಳು ಮಾರಾಟಕ್ಕಿವೆ
ಮೈಸೂರು ಮತ್ತು ನಂಜನಗೂಡಿನ ತಾಲ್ಲೂಕಿನಲ್ಲಿ ಮುಡಾ ಮತ್ತು ಡಿಸಿ ಕನ್ವರ್ಷನ್ ನಿವೇಶನ ಮಾಡಲು ಮತ್ತು ಒಳೆಯ ತೋಟಗಳು ಜಮೀನುಗಳು ನಿವೇಶನಗಳು ಮಾರಾಟಕ್ಕಿವೆ.
9611320189

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ಖಿಲ್ಲೆಯಭ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.
Mob.: 9986926101

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್ (ರಿ)
8/2:– ಕಾಶಿ, ಗಂಗಾ, ಬುದ್ಧಗಂಗಾ, ಪ್ರಯಾಗ್‌ರಾಜ್, ಅಯೋಧ್ಯೆ.
11/2:– ಪುರಿ ಜಗನ್ನಾಥ್, ಕೋನಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ್, ಚಂದ್ರಭಾಗ್ ಬೀಚ್.
21/2:– ದೆಹಲಿ, ವೈಷ್ಣೋದೇವಿ, ಧರ್ಮಶಾಲ, ಶಕ್ತಿ ಪೀಠ ಇತ್ಯಾದಿ.
9/3:– ನೇಪಾಳ ಮುಕ್ತಿನಾಥ್, ಪಶುಪತಿನಾಥ
9591017782
9964527782

ಹಕ್ಕುಪತ್ರ ಕಳೆದಿದೆ
ಶಿವೇಗೌಡ, ಮನುಗನಹಳ್ಳಿ ಗ್ರಾಮ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ–571130, ಇವರಿಗೆ ಸೇರಿದ ನಿವೇಶನ ಸಂಖ್ಯೆ 28ರ ಹಕ್ಕುಪತ್ರ (Issued year 1980-1981) ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9008878771

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ಆಟೋಮೆಟಿಕ್ ಆಕ್ಸೆಲ್ ಹತ್ತಿರ ಇರುವ ಕಂಪನಿಗೆ 48 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 12 ಗಂಟೆ ಕೆಲಸಕ್ಕೆ 16,000/ – ಕೆಲಸದ ಸಮಯ – ಬೆಳಿಗ್ಗೆ 8 ರಿಂದ ಸಂಜೆ 8 ರವರಗೆ ಕೂಡಲೇ ಸಂಪರ್ಕಿಸಿ. ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್.ಎಸ್.
8722844236

ಜಮೀನು ಮಾರಾಟಕ್ಕಿದೆ
17.04 ಗುಂಟೆ ಜಮೀನು ಮಾರಾಟಕ್ಕಿದೆ. ahad ಸಿಟಿ ಪಕ್ಕ ಫೋರಮ್ ಮಾಲ್‌ನಿಂದ 8.3 km
7892565278

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ನಿವೇಶನ ಮಾರಾಟಕ್ಕಿದೆ
N/F, 20x40
ಅಡಿಯ ಪೋಲೀಸ್ ಲೇಔಟ್, 2ನೇ ಹಂತದಲ್ಲಿ ನಿವೇಶನ ಮಾರಾಟಕ್ಕಿದೆ.
9739151987
9844669696

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಫುಡ್ ಐಟಮ್ ಶಾಪ್‌ನಲ್ಲಿ ಕೆಲಸ ಮಾಡಲು ಬಿಲ್ಲಿಂಗ್ ಮಾಡಲು, ಪುರುಷ / ಮಹಿಳೆ, ಬೇಸಿಕ್ ಕಂಪ್ಯೂಟರ್ ಜ್ಞಾನ, ಶ್ರೀನಿವಾಸ್ ಥಿಯೇಟರ್ ಹತ್ತಿರ, ಬನ್ನಿಮಂಟಪ. ವೇತನ: 12,000/–
8088939347

ಮಾರಾಟಕ್ಕಿವೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ ಮತ್ತು ಹಂಪಾಪುರ ಹೋಬಳಿಯಲ್ಲಿ ತೆಂಗಿನ ತೋಟ ಹಾಗೂ ಮಾವಿನ ತೋಟ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿವೆ. ಮಾರಾಟಗಾರರು ಸಂಪರ್ಕಿಸಬಹುದು.
9945661696
9663793666

HOUSE FOR RENT
4 Beded House in Jayalakshmipuram, Mysore.
9886828539

WANTED
Marketing Executive for Security Agency, Experience: Minimum 2-3 Years in Security Agency with Two Wheeler, Education: Any Degree with Good Communication Skill. Mail Your CV to
mahesh.m1976@gmail.com

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ, ಬೆಳವಾಡಿ, ವಿ.ವಿ.ಮೊಹಲ್ಲ ಏರಿಯಾದಲ್ಲಿ ಕಾರ್ಯನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವಯೋಮಿತಿ: 30 to 50 ವರ್ಷ, ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ. ಪಾಸ್ or ಫೇಲ್. ಸಂಪರ್ಕಿಸಿ:
9739199355

SITE FOR SALE
30x40
Sites Bank Loan upto 80%, Near Guru Bus Stop, Ramabainagar, Mysore. DTCP approved (Corporation Limits), 1.5 kms from J P Nagar Ring Road.
8660105902

FOR RENT
900 Sq.Ft Office Use 1st Floor, Near Orchids School, Sharadadevinagar
9844775166

WANTED
Reputed cake Shop in Gokulam requires Girls only as Assistants or Helpers. Contact:
7259722778

ಜಮೀನು ಮಾರಾಟಕ್ಕಿದೆ
ಟಿ.ನರಸೀಪುರ ರಸ್ತೆ, ಮೇಗಳಪುರ ಸಮೀಪ ವಿಸ್ತೀರ್ಣ 1 ಎಕರೆ 10 ಗುಂಟೆ ಜಮೀನು, ಫಾರ್ಮ್ ಹೌಸ್‌ಗೆ ಸೂಕ್ತವಾಗಿದೆ. ಡಾಂಬರ್ ರಸ್ತೆಗೆ ಹೊಂದಿಕೊಂಡಿದೆ. ಮಾಲೀಕರು ಸಂಪರ್ಕಿಸಿ:
9606375060

FOR SALE
1) 30x40 30x50 sites in Defence Apartment Near Kote Road
2) 2 Acr land tvs factory Near. 1 Acr Harohalli Hd Kote Road
3) Semi Commercial 40x45 s/w c RK Nagar I BLK
4) 40x60 KC Layout. 30x40 KRS Road.
5) 30x40 Duplex House Srirampura
6) 20x30 Sites Roopanagar.

PRAKRUTHI PROPERTIES
90359 90359 / 95386 90359

40x60 ಸೈಟು S/F @ Rs. 34 ಲಕ್ಷ
MUDA Approved Layout
ಬ್ಯಾಂಕ್ ಲೋನ್ ಲಭ್ಯ / ತಕ್ಷಣ ನೋಂದಣಿ ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ
9538583377

SC ಆದಿ ಕರ್ನಾಟಕ (ಬಲಗೈ)
BE, M.Tech, MBBS, MD, MS, BAMS, M.Sc, MBA, MCA, M.Com, MA, P.hd, B.Sc, B.Com, B.A, B.Ed.
ವಧು ವರರಿಗೆ ಸಂಪರ್ಕಿಸಿ: "ನವಿಲೂರು ರಂಗಸ್ವಾಮಿ" ಮೈಸೂರು ಸಿಟಿ, ವಧು ವರ ಮಾಹಿತಿಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು.
8711974172

ಬೇಕಾಗಿದ್ದಾರೆ
ಡೆಲಿವರಿ ಸಂಸ್ಥೆಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ: 15,000 – 30,000, ಸ್ಥಳಗಳು: ಮಂಡ್ಯ, ಬಿಡದಿ, ರಾಮನಗರ, ಚನ್ನಪಟ್ಟಣ, ಶ್ರೀರಂಗಪಟ್ಟಣ, ನಂಜನಗೂಡು, ಚಾಮರಾಜನಗರ ಹಾಗೂ ಕರ್ನಾಟಕದಾದ್ಯಂತ. ಸಂಪರ್ಕಿಸಿ:
9741836111
9060438484

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ / ಯುವತಿಯರು, ವಿಧವೆ / ವಿಚ್ಛೇದಿತರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಉಚಿತ ಊಟ ವಸತಿಯೊಂದಿಗೆ ಸಂಬಳ: 10,000 ರಿಂದ 15,000/– ಕೂಡಲೇ ಸಂಪರ್ಕಿಸಿ:
9035324777
7259306665

ಸುಂದರ ನಿರ್ವಾಣ ಬೀಚ್‌ಗೆ 2 ದಿನಗಳ ಪ್ರವಾಸ
ಉಡುಪಿ, ಮುರುಡೇಶ್ವರ, ಮಿರ್ಜಾನ್ ಕೋಟೆ, ಯಾಣ ಗುಹೆಗಳು, ಗೋಕರ್ಣ, ಇಡಗುಂಜಿ ಗಣಪತಿ ದೇವಸ್ಥಾನ, ನಿರ್ವಾಣ ಬೀಚ್ ಖಾಸಗಿ ರೆಸಾರ್ಟ್, ಟೆಂಟ್ ಸ್ಟೇ, ತಿಂಡಿ, ಊಟ, ಕಾಫೀ / ಟೀ, ಮಿನರಲ್ ವಾಟರ್, ಕ್ಯಾಂಪ್‌ಫೈರ್ ಮತ್ತು ಮುಸಿಕ್, ಒಬ್ಬರಿಗೆ ಕೇವಲ ರೂ. 4000/–
7022271023

ಬೇಕಾಗಿದ್ದಾರೆ
ಸಲೂನ್ ಮೆನ್ಸ್ ಪಾರ್ಲರ್‌ಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ: 15 ರಿಂದ 20 ಸಾವಿರ. ಸ್ಥಳ: ಸಾತಗಳ್ಳಿ, ಮೈಸೂರು. ಸಂಪರ್ಕಿಸಿ: ಶಿವು:
9844341652
9880467652

ಸೆಕ್ಯೂರಿಟಿಗಳು ಬೇಕಾಗಿದ್ದಾರೆ
ನಂಜನಗೂಡು ರಸ್ತೆಯ ಕಡಕೊಳ ಇಂಡಸ್ಟ್ರಿಯಲ್ ಏರಿಯಾ ಹಾಗೂ ಬೇಗೂರು ಹತ್ತಿರ ಮತ್ತು ಶ್ರೀರಂಗಪಟ್ಟಣದ ಗಾರ್ಮೆಂಟ್ಸ್ ಹಾಗೂ ಮೈಸೂರಿನ ದೇವೇಗೌಡ ಸರ್ಕಲ್ – ಬನ್ನೂರ್ ರಸ್ತೆ, ಹೆಬ್ಬಾಳು ಇಂಡಸ್ಟ್ರೀಯಲ್ ಹಾಗೂ ಸಿಟಿ ಏರಿಯಾದಲ್ಲಿ ಕೆಲಸ ಮಾಡಲು ಧೃಢಕಾಯರಾದ ಲೇಡಿ ಹಾಗೂ ಜೆಂಟ್ಸ್ ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
9035050656
9035050653

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

WANTED
1) Architects (B.Arch / D.Arch)
2) Total Station Survey Operator
3) Site Engineer (Civil B.E / Diploma) Exp.
4) Survey Asst. (SSLC / PUC) Pass / Fail

"Cadd Forum"
#195/B, 17th Main, 13th Cross, Saraswathipuram, Mysore.
9916266181
9945621188

ವಧು ಬೇಕಾಗಿದೆ
40 ವರ್ಷ ಗುತ್ತಿಗೆದಾರನಾಗಿರುವ ಸ್ವಂತ ಮನೆ ಜಮೀನು ಇರುವ ವರನಿಗೆ ಸಂಪ್ರದಾಯ ಕುಟುಂಬದ ವರನಿಗೆ ಎಸ್‌ಎಸ್‌ಎಲ್‌ಸಿ ಇಂದ ಡಿಗ್ರಿ ವರೆಗೂ ವಿದ್ಯಾಭ್ಯಾಸ ಮಾಡಿರುವ ತೆಳ್ಳಗಿನ ಎಸ್.ಸಿ ಬಲಗೈ ವಧು ಬೇಕಾಗಿದೆ. ವಿಧವೆ ಆದರೂ ಸರಿ ಮಕ್ಕಳು ಇರಬಾರದು. ಹಳ್ಳಿ ಅಥವಾ ಬಡ ವಧುವಾದರೂ ಸರಿ ಜಾತಿಯ ಅಭ್ಯಂತರವಿಲ್ಲ.
9060377177

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ಎನ್.ಆರ್.ಮೊಹಲ್ಲಾ, ಜೆ.ಪಿ.ನಗರ, ಒಂಟಿಕೊಪ್ಪಲು ಮುಂತಾದ ಏರಿಯಾಗಳಲ್ಲಿನ ಕಂಪನಿ, ಆಫೀಸ್, ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ: 14,000/– – 38,000/–. ಸಂಪರ್ಕಿಸಿ:
9663704915
9980630131

ಉದ್ಯೋಗ ಅವಕಾಶ ಬೇಕಾಗಿದ್ದಾರೆ
ಸಿಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ. ವಿದ್ಯಾರ್ಹತೆ: ಎಸ್.ಎಸ್.ಎಲ್‌ಸಿ ಮೇಲ್ಪಟ್ಟು, ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ. ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಸೂರೆನ್ಸ್ ಪ್ರತಿನಿಧಿಗಳು, ಚಿಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು. ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು. ಸಂದರ್ಶನ ದಿನಾಂಕ: 16-01-2023, ಸಮಯ: 1.00pm ಕ್ಕೆ ಸಂಪರ್ಕಿಸಿ:
7892303484 / 9483247455

WANTED
We are urgently hiring female professionals Ladies Beauty Salon & SPA in Mysore
* Female Receptionist cum Telecallers
* Female Body Massage Theraphists
* Nail Art / Hair Extensions / Bridal Make up Specialist. Ladies Hair Dresser cum Beautician (Female) All above job for females Candidates only. Attractive Salary + Commission Free Food + Accomodation

Please call at 6366066601

PH: 8867774447
BULK SMS & BULK WhatsApp Providers
B-Soft Infotech
Vontikoppal, Mysuru


ಮೈಸೂರು ಮಿತ್ರ 43 – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಶನಿವಾರ 14 ಜನವರಿ 2023

ಸುಂಟಿಕೊಪ್ಪ ಬಳಿ ಕಾರ್ಯಾಚರಣೆ ವೇಳೆ ದುರಂತ

ಸೆರೆಸಿಕ್ಕ ಕಾಡಾನೆ ಸಾವು

ಅರವಳಿಕೆ ನೀಡಿದ ನಂತರ ಓಡಿ ಕುಸಿದು ಬಿದ್ದು ಪ್ರಾಣ ಬಿಟ್ಟಿತು





ಮಡಿಕೇರಿ, ಜ.13– ಕಾರ್ಯಾಚರಣೆ ವೇಳೆ ಸೆರೆ ಸಿಕ್ಕಿದ್ದ ಕಾಡಾನೆಯೊಂದು ಕುಸಿದು ಬಿದ್ದು ಸಾವನ್ನಪ್ಪಿದ ಘಟನೆ ಸುಂಟಿಕೊಪ್ಪ ಬಳಿಯ ಅತ್ತೂರು ನಲ್ಲೂರು ಗ್ರಾಮದಲ್ಲಿ ನಡೆದಿದೆ. ಮೃತಪಟ್ಟ ಸಲಗ 20 ವರ್ಷ ಪ್ರಾಯದ್ದಾಗಿರ ಬಹುದು ಎಂದು ಅಂದಾಜಿಸಲಾಗಿದೆ.

ಅತ್ತೂರು ನಲ್ಲೂರು ಗ್ರಾಮದ ಕೃಷಿ ಪ್ರದೇಶಗಳಿಗೆ ದಾಳಿಯಿಟ್ಟು, ಕೃಷಿ ಫಸಲು ಧ್ವಂಸಗೊಳಿಸಿ, ಕೃಷಿಕರ ನಿದ್ದೆಗೆಡಿ ಸಿದ್ದ ಹಾಗೂ ಜನರನ್ನು ಕಂಡಲ್ಲಿ ದಾಳಿಗೆ ಮುಂದಾಗುತ್ತಿದ್ದ ಕಾಡಾನೆ ಕಾರ್ಯಾಚರಣೆ ಯಲ್ಲಿ ಸೆರೆಸಿಕ್ಕಿದ ಬಳಿಕ ಸಾವನ್ನಪ್ಪಿದೆ.

ಸಾಕಾನೆಗಳಿಂದ ಕಾರ್ಯಾಚರಣೆ: ಮೋದೂರು, ಅತ್ತೂರು ನಲ್ಲೂರಿನ ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ್ದ ಕಾಡಾನೆಯನ್ನು ಸೆರೆಹಿಡಿ ಯಲು ಕಳೆದ 6 ತಿಂಗಳ ಹಿಂದೆಯೇ ಸರಕಾರ ದಿಂದ ಅನುಮತಿ ಸಿಕ್ಕಿತ್ತು. ಆದರೆ ಮಳೆಯ ಕಾರಣದಿಂದಾಗಿ ಕಾಡಾನೆ ಸೆರೆ ಕಾರ್ಯಾ ಚರಣೆ ತಡವಾಗಿತ್ತು. ಈ ವ್ಯಾಪ್ತಿಯಲ್ಲಿ ಮತ್ತೆ ಕಾಡಾನೆ ಹಾವಳಿ ಮಿತಿ ಮೀರಿದ್ದ ರಿಂದ ಕಳೆದ 3 ದಿನಗಳಿಂದ ಅರಣ್ಯ ಇಲಾಖೆ ಕಾಡಾನೆ ಸೆರೆ ಕಾರ್ಯಾಚರಣೆಯನ್ನು ಕೈಗೊಂಡಿತ್ತು.

ದುಬಾರೆ ಸಾಕಾನೆ ಶಿಬಿರದ ಪ್ರಶಾಂತ್, ಹರ್ಷ, ಸುಗ್ರೀವ, ಶ್ರೀರಾಮ, ಲಕ್ಷ್ಮಣ ಸಾಕಾನೆಗಳ ಸಹಕಾರದೊಂದಿಗೆ ಸಹಾ ಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ಕುಶಾಲನಗರ ವಲಯ ಅರಣ್ಯಾಧಿಕಾರಿ ರಂಜನ್, ಇಲಾಖೆಯ ವೈದ್ಯರಾದ ಡಾ.ಚಿಟ್ಟಿಯಪ್ಪ ಮತ್ತು ಡಾ. ರಮೇಶ್ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಕಾಡಾನೆ ಸೆರೆ ಕಾರ್ಯಾ ಚರಣೆಯನ್ನು ಕೈಗೊಂಡಿದ್ದರು..

ಮೀನುಕೊಲ್ಲಿ ಅರಣ್ಯದಲ್ಲಿ ಮರಣೋತ್ತರ ಪರೀಕ್ಷೆ

> " ಅರವಳಿಕೆ ನೀಡಿದ ಬಳಿಕ ಓಡಿದ ಕಾಡಾನೆ ಕಾಫಿ ಕಣದಲ್ಲಿ ಬಿದ್ದಿದೆ. ಈ ವೇಳೆ ಉಂಟಾದ ಆಂತರಿಕ ಗಾಯ ಮತ್ತು ರಕ್ತಸ್ರಾವದಿಂದಾಗಿ ಕಾಡಾನೆ ಸಾವಪ್ಪಿರುವ ಶಂಕೆ ಇದೆ. ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಆ ಮರಣೋತ್ತರ ಪರೀಕ್ಷಾ ವರದಿಯನ್ನು ಇಲಾಖೆಯ ಉನ್ನತಾಧಿಕಾರಿಗಳು ಹಾಗೂ ಸರಕಾರಕ್ಕೆ ಸಲ್ಲಿಸಲಾಗುತ್ತದೆ.
>
> –ಗೋಪಾಲ್, ಎಸಿಎಫ್

ಕಾಡಾನೆ ಸೆರೆ: ಈ ನಡುವೆ ಗುರುವಾರ ರಾತ್ರಿ ಮನೆಯೊಂದರ ಮೇಲೆ ದಾಳಿ ನಡೆಸಿದ ಈ ಕಾಡಾನೆ ಸೊಂಡಿಲಿನಿಂದ ಮನೆಯ ಬಾಗಿಲನ್ನು ಮುರಿಯಲು ಯತ್ನಿಸಿತ್ತು. ಈ ಮಾಹಿತಿ ತಿಳಿದ ಅರಣ್ಯ ಇಲಾಖಾಧಿಕಾರಿಗಳು ಶುಕ್ರವಾರ ಮುಂಜಾನೆ 5 ಗಂಟೆ ಸಮಯದಲ್ಲಿ ಕಾಡಾನೆ ಪತ್ತೆ ಕಾರ್ಯ ಆರಂಭಿಸಿದ್ದರು. ಬೆಳಗಿನ ಸುಮಾರು 9 ಗಂಟೆಯ ವೇಳೆಗೆ ಮೋದೂರು ತೋಟವೊಂದರಲ್ಲಿ ಈ ಕಾಡಾನೆ ಬೀಡು ಬಿಟ್ಟಿರುವುದನ್ನು ಕಾರ್ಯಾಚರಣೆ ತಂಡ ಗುರುತಿಸಿತ್ತು. ಬಳಿಕ ಡಾ. ರಮೇಶ್ ಅವರು ಅದರ ಮೇಲೆ ಅರವಳಿಕೆಯನ್ನು ಪ್ರಯೋ ಗಿಸಿದ್ದಾರೆ. ಇದರಿಂದ ಗಾಬರಿಯಾದ ಕಾಡಾನೆ ಸುಮಾರು 500 ಮೀಟರ್ ದೂರವರೆಗೆ ಓಡಿದೆ. ಅತ್ತೂರು ನಲ್ಲೂರು ಗ್ರಾಮದ ಮುತ್ತಣ್ಣ ಎಂಬುವರಿಗೆ ಸೇರಿದ ಇಳಿಜಾರು ಪ್ರದೇಶದಲ್ಲಿದ್ದ ತೋಟದ ಸುಮಾರು 35 ಅಡಿ ಆಳದ ಸಿಮೆಂಟ್ ಕಾಫಿ ಕಣಕ್ಕೆ ಬಿದ್ದಿದೆ.

ಕುಸಿದು ಬಿದ್ದ 'ಮದಕರಿ': ಬಳಿಕ ಸಾಕಾನೆ ಗಳ ಸಹಾಯದಿಂದ ಹಗ್ಗದ ಮೂಲಕ ಪುಂಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಗಳು ಮೇಲಕ್ಕೆತ್ತಿದರು. ನಂತರ ಚೇತರಿಸಿ ಕೊಂಡ ಕಾಡಾನೆಯನ್ನು ಕಾಫಿ ತೋಟ ಮಾರ್ಗವಾಗಿ ಸುಮಾರು 100 ಮೀಟರ್ ದೂರ ಕರೆತರುವ ಸಂದರ್ಭ ಏಕಾಏಕಿ ಮತ್ತೆ ಕುಸಿದು ಬಿದ್ದಿದೆ. ತಕ್ಷಣವೇ ಇಲಾಖೆಯ ನುರಿತ ವೈದ್ಯರಾದ ಡಾ. ಚಿಟ್ಟಿಯಪ್ಪ ಮತ್ತು ಡಾ.ರಮೇಶ್ ಅವರು ಕಾಡಾನೆಗೆ ಚಿಕಿತ್ಸೆ ನೀಡಲು ಮುಂದಾಗಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಕಾಡಾನೆ ಮೃತಪಟ್ಟಿದೆ. ನಂತರ ಮೃತ ಕಾಡಾನೆಯ ಕಳೇಬರ ವನ್ನು ಕ್ರೇನ್ ಸಹಾಯದಿಂದ ಲಾರಿಯಲ್ಲಿ ಮೀನುಕೊಲ್ಲಿ ಅರಣ್ಯಕ್ಕೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಗ್ರಾಮಸ್ಥರಾದ ಕಾರ್ಯಪ್ಪ ಅವರು ಮಾತನಾಡಿ, ಈ ವ್ಯಾಪ್ತಿಯಲ್ಲಿ ಸುಮಾರು 40 ವರ್ಷದಿಂದ ಕಾಡಾನೆಗಳ ಹಾವಳಿ ಇದೆ. ಮೀನುಕೊಲ್ಲಿ ಅರಣ್ಯ ವ್ಯಾಪ್ತಿ ಯಲ್ಲೇ ಈ ಹಿಂದೆ 17 ಕಾಡಾನೆಗಳಿದ್ದವು. ಅವುಗಳ ಸಂಖ್ಯೆ ಈಗ ಎಷ್ಟಿದೆ ಎಂದು ತಿಳಿದಿಲ್ಲ. ಕಾರ್ಯಾಚರಣೆ ಸಂದರ್ಭ ಸೆರೆಸಿಕ್ಕಿ ಸಾವನ್ನಪ್ಪಿದ ಪುಂಡಾನೆ, ಈ ವ್ಯಾಪ್ತಿಯಲ್ಲಿ ಕೃಷಿ ಫಸಲುಗಳನ್ನು ನಿರಂತರ ವಾಗಿ ಧ್ವಂಸಗೊಳಿಸುತ್ತಿತ್ತು. ಮಾತ್ರವಲ್ಲದೇ 1 ವರ್ಷದ ಹಿಂದೆ ತೋಟ ಕೆಲಸಕ್ಕೆ ತೆರಳು ತ್ತಿದ್ದ ಮಹಿಳೆಯೊರ್ವರ ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿತ್ತು ಎಂದು ಮಾಹಿತಿ ನೀಡಿದರು.

ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸದಿದ್ದರೆ ಜ.31ರಂದು ಕೆಲಸ ಸ್ಥಗಿತ



ಮಡಿಕೇರಿ, ಜ.13– ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರನ್ನು ಜ.25ರೊಳಗೆ ಖಾಯಂಗೊಳಿಸದಿದ್ದರೆ ಜ.31ರಂದು ರಾಜ್ಯವ್ಯಾಪಿ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ 'ವಿಧಾನ ಸೌಧ' ಮುತ್ತಿಗೆ ಹಾಕುವುದಾಗಿ ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾ ಯಿತಿ ಹೊರಗುತ್ತಿಗೆ ನೌಕರರ ಸಂಘದ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಡಿ.ಡಿ. ಈರಪ್ಪ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಹೊರಗುತ್ತಿಗೆ ನೌಕರರನ್ನು ಮಲತಾಯಿ ಧೋರಣೆಯಿಂದ ನಡೆಸಿಕೊಳ್ಳುತ್ತಿದೆ. ಈ ಬಾರಿ ನಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ನೀರು ಸರಬ ರಾಜು, ಡಾಟಾ ಆಪರೇಟರ್‌ಗಳು, ಸ್ವಚ್ಛತಾ ಕಾರ್ಯದಲ್ಲಿ ನಿರತ ಕಾರ್ಮಿಕರು ತಮ್ಮ ಕೆಲಸವನ್ನು ಪ್ರತಿಭಟನೆಯ ಸಂದರ್ಭ ಸ್ಥಗಿತಗೊಳಿಸಲಿದ್ದಾರೆ. ಸಾರ್ವಜನಿಕರು ನಮ್ಮ ಸಂಕಷ್ಟಗಳನ್ನು ಅರಿತು ಸಹಕರಿ ಸುವಂತೆ ಮನವಿ ಮಾಡಿದರು.

ಪೌರಕಾರ್ಮಿಕರ ನೇರ ನೇಮಕಾತಿ ಯನ್ನು ಸ್ವಾಗತಿಸುತ್ತೇವೆ. ಆದರೆ, ಹೊರ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿ ರುವ ವಾಹನ ಚಾಲಕರು, ನೀರು ಸರಬ ರಾಜುದಾರರು, ಡಾಟಾ ಆಪರೇಟರ್ಸ್, ಸಹಾಯಕರು, ಲೋಡರ್ಸ್, ಕ್ಲೀನರ್ಸ್, ಹೆಲ್ಪರ್ಸ್‌ಗಳು ಸೇರಿದಂತೆ 15 ಸಾವಿರಕ್ಕೂ ಹೆಚ್ಚು ನೌಕರರನ್ನು ಗುತ್ತಿಗೆಯಲ್ಲಿ ಉಳಿಸಿ ಒಂದೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸು ವವರ ಮಧ್ಯೆ ಒಡೆದಾಳುವ ನೀತಿ ಅನುಸರಿ ಸುವುದು ಸರಕಾರಕ್ಕೆ ಶೋಭೆ ತರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರ ಸ್ವಚ್ಛತೆ ಹಾಗೂ ಕುಡಿಯುವ ನೀರು ನಿರ್ವಹಣೆಯಲ್ಲಿ ಹೊರಗುತ್ತಿಗೆ ನೌಕರರ ಪಾತ್ರ ಮಹತ್ವದ್ದಾಗಿದೆ. 2017ರಲ್ಲಿ ಪೌರಕಾರ್ಮಿಕರ ನೇಮಕಾತಿಗೊಳಿಸಿದಾ ಗಲೂ ಹೊರಗುತ್ತಿಗೆ ನೌಕರರನ್ನು ಗುತ್ತಿಗೆಯಲ್ಲೇ ಉಳಿಸಲಾಯಿತು. ಈಗಲೂ ಸಹ ಹೊರ ಗುತ್ತಿಗೆ ನೌಕರರನ್ನು ಗುತ್ತಿಗೆಯಲ್ಲೇ ಮುಂದು ವರಿಸುವ ಸರಕಾರದ ನೀತಿ ಖಂಡನೀಯ ಎಂದರು. ಕೊಡಗು ಜಿಲ್ಲೆಯಲ್ಲಿ 72 ಮಂದಿ ಹೊರಗುತ್ತಿಗೆ ನೌಕರರಿದ್ದು, 21 ಮಂದಿ ಯನ್ನು ಮಾತ್ರ ಖಾಯಂಗೊಳಿಸಲಾಗಿದೆ. ಹೊರಗುತ್ತಿಗೆ ನೌಕರರ ನ್ಯಾಯಬದ್ಧ ಹಕ್ಕಿಗಾಗಿ ಆಗ್ರಹಿಸುವುದು ನಮ್ಮ ಹಕ್ಕಾಗಿದೆ ಎಂದು ಡಿ.ಡಿ.ಈರಪ್ಪ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಹೊರಗುತ್ತಿಗೆ ನೌಕರ ಸಂಘದ ಉಪಾಧ್ಯಕ್ಷ ಎ.ಎ.ಬೋಪಣ್ಣ, ಸಂಚಾಲಕ ಕೆ.ಎಸ್.ಮಹದೇವಪ್ಪ, ಕಾರ್ಯದರ್ಶಿ ಟಿ.ಬಿ.ರಮೇಶ್ ಕುಟ್ಟಪ್ಪ, ಖಜಾಂಚಿ ಎಂ.ಎ.ಅಹಮ್ಮದ್ ಕಬೀರ್, ನೀರು ಸರಬರಾಜು ವಿಭಾಗದ ಜಿಲ್ಲಾಧ್ಯಕ್ಷ ಶಿವಪ್ರಕಾಶ್ ಶೆಟ್ಟಿ ಉಪಸ್ಥಿತರಿದ್ದರು.

ಜಾನುವಾರುಗಳನ್ನು ಸಾಗಿಸುತ್ತಿದ್ದ ಇಬ್ಬರ ಬಂಧನ: ಹಸು, ಕರು ರಕ್ಷಣೆ



ವಿರಾಜಪೇಟೆ, ಜ.13– ಅಕ್ರಮವಾಗಿ ಲಾರಿಯಲ್ಲಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಆರೋಪಿಗಳಿ ಬ್ಬರನ್ನು ವಿರಾಜಪೇಟೆ ಟೌನ್ ಪೊಲೀಸರು ಬಂಧಿಸಿ, ಹಸುಗಳು ಮತ್ತು ಕರುವನ್ನು ರಕ್ಷಿಸಿದ್ದಾರೆ.

ಕೇರಳದ ಕಣ್ಣನೂರು ಜಿಲ್ಲೆ ಕೈಯರಾಳಂ ಗ್ರಾಮದ ಎನ್.ಪಿ. ಸೈನುದ್ದೀನ್ (38), ಪಿರಿಯಾಪಟ್ಟಣ ತಾಲೂಕು ಕಿತ್ತೂರು ಗ್ರಾಮದ ಫರ್ವೀಸ್‌ಬಾಷಾ (35) ಬಂಧಿತ ಆರೋಪಿಗಳು. ಈ ಆರೋಪಿಗಳು ಈಚರ್ ಲಾರಿ (ಕೆಎಂ 03, ಎಬಿ359)ಯಲ್ಲಿ ಅಕ್ರಮವಾಗಿ ಜಾನುವಾರು ಗಳನ್ನು ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಸಬ್‌ಇನ್ಸ್‌ಪೆಕ್ಟರ್ ಸಿ.ವಿ. ಶ್ರೀಧರ್ ಅವರು ತಮ್ಮ ಸಿಬ್ಬಂದಿ ಗಳೊಂದಿಗೆ ದಾಳಿ ನಡೆಸಿ ಲಾರಿ ವಶಪಡಿಸಿಕೊಂಡು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಲಾರಿಯಲ್ಲಿದ್ದ 6 ಹಸುಗಳು ಮತ್ತು ಕರುವೊಂದನ್ನು ರಕ್ಷಿಸಿದ್ದಾರೆ. ವಿರಾಜಪೇಟೆ ಟೌನ್ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಗಾಂಜಾ ಮಾರಾಟ ಯುವಕ ಬಂಧನ

ಕುಶಾಲನಗರ, ಜ.13– ಗಾಂಜಾ ಮಾರಾಟದಲ್ಲಿ ತೊಡಗಿದ್ದ ಯುವಕನನ್ನು ಕುಶಾಲನಗರ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಹೆರೂರು ಗ್ರಾಮದ ನಾಗರಾಜ್ ಎಂಬವರ ಪುತ್ರ ವಿನಯ್ (21) ಬಂಧಿತ ಆರೋಪಿ. ಮೈಸೂರು ಜಿಲ್ಲೆ ವ್ಯಾಪ್ತಿಯಿಂದ ಗಾಂಜಾ ಸಾಗಾಟ ಮಾಡಿ ಕುಶಾಲನಗರ, ಗುಡ್ಡೆಹೊಸೂರು, ಹೆರೂರು ಸುತ್ತ ಮುತ್ತ ಮಾರಾಟ ಮಾಡುತ್ತಿದ್ದ. ಈತನನ್ನು ಬಂಧಿಸಿ ಆತನ ಬಳಿ ಯಿದ್ದ 4500 ಮೌಲ್ಯದ 40 ಗ್ರಾಂ ಗಾಂಜಾ ವಶಪಡಿಸಿಕೊಂಡ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಬ್ಬೂರುವಿನಲ್ಲಿ ಹುಲಿ ದಾಳಿಗೆ ಹಸು,ಮೇಕೆ, ಕೋಳಿ ಬಲಿ

ಸಿದ್ದಾಪುರ, ಜ.13– ಪಾಲಿಬೆಟ್ಟ ಸಮೀಪದ ಅಬ್ಬೂರು ಬಳಿ ಹುಲಿಯೊಂದು ಕೊಟ್ಟಿಗೆಯಲ್ಲಿದ್ದ ಎರಡು ಹಸು, ಒಂದು ಮೇಕೆ, ಕೋಳಿಯನ್ನು ಕೊಂದು ಮೇಕೆಯನ್ನು ಹೊತ್ತೊಯ್ದಿರುವ ಘಟನೆ ವಿರಾಜಪೇಟೆ ತಾಲೂಕಿನ ಚನ್ನಂಗಿ ಸಮೀಪದ ಅಬ್ಬೂರು ಬಳಿ ನಡೆದಿದೆ.

ಅಬ್ಬೂರು ಗ್ರಾಮದ ರತನ್ ಕೊಟ್ಟಿಗೆಯಲ್ಲಿ ಹಸು, ಮೇಕೆ, ಕೋಳಿಯನ್ನು ಕಟ್ಟಿ ಹಾಕಿದ್ದರು. ಬೆಳಗಿನ ಜಾವ ಕೊಟ್ಟಿಗೆಗೆ ನುಗ್ಗಿದ ಹುಲಿ ಮೊದಲು ಕೋಳಿ ಯನ್ನು ತಿಂದಿದಲ್ಲದೆ ಎರಡು ಹಸುಗಳನ್ನು ಬಲಿ ತೆಗೆದುಕೊಂಡು ಕೊಂದು ಹಾಕಿದೆ. ಕೊಟ್ಟಿಗೆಯಲ್ಲಿದ್ದ ಮತ್ತೊಂದು ಮೇಕೆಯನ್ನು ಕೊಂದು ಹೊತ್ತೊಯ್ದಿದೆ.

ಬೆಳಿಗ್ಗೆ ಕೊಟ್ಟಿಗೆಗೆ ಆಗಮಿಸಿದ ಸಂದರ್ಭದಲ್ಲಿ ಎರಡು ಜಾನುವರುಗಳು ಬಲಿಯಾಗಿದ್ದು, ಕೋಳಿ ಹಾಗೂ ಮೇಕೆ ಕಾಣೆಯಾಗಿರುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ವನ್ಯಜೀವಿ ವಲಯ ಅರಣ್ಯಾಧಿಕಾರಿ ದಿಲೀಪ್, ಉಪ ವಲಯ ಅರಣ್ಯಾಧಿಕಾರಿ ಚೆನ್ನವೀರೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಚೆನ್ನಯ್ಯನಕೋಟೆ ಗ್ರಾಪಂ ಅಧ್ಯಕ್ಷ ಮೇಕೆರರ ಅರುಣ್ ಸ್ಥಳಕ್ಕೆ ಭೇಟಿ ನೀಡಿ, ಕಾಡು ಪ್ರಾಣಿಗಳ ಹಾವಳಿಯಿಂದ ಸುತ್ತಮುತ್ತಲ ಜನರು ಬಾಯಿಭೀತರಾಗಿದ್ದು, ನಾಡಿಗೆ ಬಾರದ ಹಾಗೆ ಶಾಶ್ವತ ವಾಗಿ ತಡೆಗಟ್ಟಬೇಕೆಂದು ಒತ್ತಾಯಿಸಿದಲ್ಲದೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಯುವತಿ ಮೇಲೆ ಲೈಂಗಿಕ ದೌರ್ಜನ್ಯ: ನಾಲ್ವರ ಬಂಧನ

ಸಿದ್ದಾಪುರ, ಜ.13– ಯುವತಿ ಮನೆಗೆ ನುಗ್ಗಿ ಲೈಂಗಿಕ ದೌರ್ಜನ್ಯವೆಸಗಿದ ಆರೋಪದ ಮೇಲೆ ನೆಲ್ಯಹುದಿಕೇರಿ ನಲ್ವತ್ತೆಕ್ರೆ ಗ್ರಾಮದ ನಾಲ್ವರು ಯುವಕರನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗ್ರಾಮದ ವಾಸಿಗಳಾದ ಶೌಕತ್, ಅಶ್ರಫ್, ಮನಾಫ್, ಜಲೀಲ್ ಬಂಧಿತ ಆರೋಪಿಗಳು. ಇವರುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ನಲ್ವತ್ತೇಕರೆಯ ಶೌಕತ್ ಮೊಬೈಲ್ ರಿಚಾರ್ಜ್ ಅಂಗಡಿಯನ್ನಿಟ್ಟುಕೊಂಡಿದ್ದು, ಮೊಬೈಲ್ ರಿಚಾರ್ಜ್ ಮಾಡಿಸಿಕೊಂಡು ಹೋದ ಗ್ರಾಮದ ಯುವತಿಯ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಅಸಹ್ಯವಾಗಿ ವರ್ತಿಸಿದ್ದಾನೆ ಮತ್ತು ಲೈಂಗಿಕವಾಗಿ ಪೀಡಿಸಿ ತನ್ನೊಂದಿಗೆ ಇತರರನ್ನು ಯುವತಿಯ ಮನೆಗೆ ಕರೆದೊಯ್ದು ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾನೆ ಎಂದು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣ ದಾಖಲಿಸಿಕೊಂಡ ಸಿದ್ದಾಪುರ ಠಾಣಾಧಿಕಾರಿ ಮೋಹನ್ ರಾಜ್ ತಕ್ಷಣ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮೂಡ್ನಕೂಡು ಚಿನ್ನಸ್ವಾಮಿ, ಸ್ವಾಮಿ ಪೊನ್ನಾಚಿಗೆ ಸನ್ಮಾನ

- ಎಲ್ಲ ಕ್ಷೇತ್ರಗಳಲ್ಲೂ ಪ್ರಾಮಾಣಿಕತೆ ನಾಪತ್ತೆ : ಹೊರೆಯಾಲ ದೊರೆಸ್ವಾಮಿ
- ಮಂಜು ಕೋಡಿಉಗನೆರವರ ಮಾರಿಕೋಳಿ, ನೆಲದ ಜೀವ ಕೃತಿ ಲೋಕಾರ್ಪಣೆ



ಚಾಮರಾಜನಗರ, ಜ.13– ಕೇಂದ್ರ ಸಾಹಿತ್ಯ ಕ್ಷೇತ್ರದವಲ್ಲದೆ ಎಲ್ಲಾ ಕ್ಷೇತ್ರ ಗಳಲ್ಲೂ ಪ್ರಾಮಾಣಿಕತೆ ನಾಪತ್ತೆಯಾಗಿದೆ ಎಂದು ಚಿಂತಕ ಹೊರೆಯಾಲ ದೊರೆ ಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದ ಡಾ. ರಾಜ್‌ಕುಮಾರ್ ರಂಗ ಮಂದಿರದಲ್ಲಿ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಕನ್ನಡ ಉಪನ್ಯಾಸಕರ ಸಂಘ ಹಾಗೂ ಜೋಳಿಗೆ ಪ್ರಕಾಶದ ಸಹ ಯೋಗದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾ ರಂಭ ಹಾಗೂ ಮಂಜು ಕೋಡಿಉಗನೆ ಯವರ ಮಾರಿಕೋಳಿ ಮತ್ತು ನೆಲದ ಜೀವ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದರು.

ಅನುಭವ, ಪ್ರಾಮಾಣಿಕತೆ, ಸೂಕ್ಷ್ಮ ಮತೀಯ ಚಿಂತಕ, ಸಾಹಿತಿಗಳಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಹೊರತು ರಾಜ ಕಾರಣಿಗಳಿಂದ ಸಾಧ್ಯವಿಲ್ಲ. ಸೂಕ್ಷ್ಮಮತೀಯ ಚಿಂತಕ ಸಾಲಿಗೆ ಮೂಡ್ನಕೂಡು ಚಿನ್ನಸ್ವಾಮಿ ಸೇರುತ್ತಾರೆ. ತಮ್ಮ ಕೃತಿ, ನಾಡಿಗೆ ಉತ್ತಮ ಸಂದೇಶ ನೀಡಿದ್ದಾರೆ. ಸಮಾಜದಲ್ಲಿ ಜಾತಿ, ಮತ, ಕುಲಗಳ ಮಿತಿಗಳಲ್ಲೇ ಮನುಷ್ಯ ಬದುಕುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ಈ ನೆಲದ ಸಾಹಿತಿ ಮತ್ತು ಕವಿಗಳಾದ ಮೂಡ್ನಾಕೂಡ ಚಿನ್ನಸ್ವಾಮಿ, ಮಂಜು ಕೋಡಿಉಗನೆ ಹಾಗೂ ಸ್ವಾಮಿ ಪೊನ್ನಾಚಿ ಅವರ ಸಾಹಿತ್ಯ ಮಾನವೀಯತೆ ಕಡೆ ಕೊಂಡೊಯ್ಯುತ್ತಿದೆ. ಈ ಮೂರು ಜನರ ಮನಸ್ಥಿತಿ ಒಂದೇ ತರವಾಗಿದ್ದು, ವಿಷಯ ವ್ಯಾಪ್ತಿ ಬಹುದೊಡ್ಡದಾಗಿರುತ್ತದೆ. ಅದರಲ್ಲೂ ಮೂಡ್ನಕೂಡು ಚಿನ್ನಸ್ವಾಮಿ ಅವರ ಆತ್ಮ ಜನಸಾಮಾನ್ಯರ ಅಶೋತ್ತರಗಳನ್ನೇ ಬಿತ್ತುತ್ತದೆ. ಅವರ ಕೃತಿಗಳು ಅನನ್ಯತೆ ಯಲ್ಲಿ ಏಕತೆ ಮೂಡಿಸುತ್ತದೆ ಎಂದರು.

ಮಂಜು ಕೋಡಿಉಗನೆಯವರ ಬರೆದಿ ರುವ ಕೃತಿಗಳಾದ ಮಾರಿಕೋಳಿ, ನೆಲದ ಜೀವ ಕೃತಿಗಳು ನೆಲದ ಕ್ರಮಗಳು, ಪರಿಸರ ವನ್ನೊಳಗೊಂಡು ಚೆನ್ನಾಗಿ ಮೂಡಿದೆ. ಅದೇ ರೀತಿಯಲ್ಲಿ ಸ್ವಾಮಿ ಪೊನ್ನಾಚಿಯವರ ಧೂಪದ ಮಕ್ಕಳು ಕೃತಿ ಚೆನ್ನಾಗಿದೆ ಎಂದರು.

ಮಕ್ಕಳಲ್ಲಿ ಶೀಲ, ಸಮಾಧಿ ಪ್ರಜ್ಞೆ ಮೂಡಿಸ ಬೇಕು: ಸನ್ಮಾನ ಸ್ವೀಕರಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಮೂಡ್ನ ಕೂಡು ಚಿನ್ನಸ್ವಾಮಿ ಮಾತನಾಡಿ, ಯಾರನ್ನು ಕೇಳಬೇಕು ಅವರನ್ನು ಬಿಟ್ಟು ಸರ್ಕಾರಗಳು ಸ್ವಾಮೀಜೀಗಳನ್ನು ಕರೆಸಿಬಿಟ್ಟು ಶಿಕ್ಷಣ ವ್ಯವಸ್ಥೆಗಳು ಹೇಗಿರಬೇಕು ಎಂದು ಕೇಳುತ್ತದೆ. ಮಠಾಧೀಶರು ಅವರ ಅನುಭವ ದಂತೆ ಒಬ್ಬ ಬ್ರಾಹ್ಮಣ ಸ್ವಾಮೀಜಿ ಸಾತ್ವಿಕ ಆಹಾರ ಕೊಡಿ ಎಂದು ಹೇಳಿದ್ದಾರೆ. ಮತ್ತೊಬ್ಬ ಸ್ವಾಮೀಜಿ, ಜನರನ್ನು ಒಗ್ಗೂಡಿ ಸುವಂತೆ ಹೇಳಿದ್ದಾರೆ. ಅವರ ಕಾಳಜಿ ಹಾಗೆಯೇ ಆದರೆ ಶಿಕ್ಷಣ ವ್ಯವಸ್ಥೆಯಲ್ಲಿ ಬುದ್ಧರು ಹೇಳಿರುವಂತೆ ಶೀಲ, ಸಮಾಧಿ ಪ್ರಜ್ಞೆಯನ್ನು ಮಕ್ಕಳಲ್ಲಿ ತುಂಬಬೇಕಿದೆ. ಶೀಲ ಇಲ್ಲದಿದ್ದರೆ ಒಳ್ಳೆಯ ಸಮಾಜ ನಿರ್ಮಾಣ ಸಾಧ್ಯವಾಗಲ್ಲ. ಇಂತಹ ವಿಷಯ ಬಿಟ್ಟು ಆಹಾರದ ಬಗ್ಗೆ ಮಾತನಾಡುತ್ತಾರೆ. ಇದು ಬಹಳ ಬೇಸರದ ವಿಚಾರವಾಗಿದೆ ಎಂದರು.

ದಲಿತರ ಮೇಲೆ ದೌರ್ಜನ್ಯಗಳು ನಡೆಯು ತ್ತಲೇ ಇದೆ. ಅದರಲ್ಲಿ ತಮಿಳುನಾಡಿ ಗ್ರಾಮವೊಂದರಲ್ಲಿ ಕುಡಿಯುವ ನೀರಿನ ಟ್ಯಾಂಕ್‌ವೊಂದಕ್ಕೆ ಮಲ ಹಾಕಿರುವುದು ನನಗೆ ಬಹಳ ನೋವುಂಟು ಮಾಡಿದೆ. ನಮ್ಮ ಜಿಲ್ಲೆಯ ಬಗ್ಗೆ ತುಂಬಾ ಹೆಮ್ಮೆ ಇದೆ. ಜಿಲ್ಲೆಗೆ ಮುಖ್ಯಮಂತ್ರಿಗಳು ಬರುತ್ತಿಲ್ಲ ಎಂಬ ಆರೋಪಗಳಿವೆ. ಇದು ಸರಿಯಾಗಬೇಕಾ ದರೆ ಜಿಲ್ಲೆಯಿಂದಲ್ಲೇ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡುವ ಕೆಲಸ ಆಗಬೇಕು. ಸಣ್ಣ ಪುಟ್ಟ ತಾಲೂಕುಗಳು ಕೂಡ ಅಭಿವೃದ್ಧಿ ಯಾಗಿದೆ. ಆದರೆ ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿಲ್ಲ. ಜಿಲ್ಲೆಯಲ್ಲಿ ದಲಿತರು, ಆದಿ ವಾಸಿಗಳು ಹೆಚ್ಚಾಗಿದ್ದಾರೆ ಎಂದು ಅಭಿವೃದ್ಧಿ ಪಡಿಸಿಲ್ಲವೇ ಎಂದು ಸರ್ಕಾರ ಪ್ರಶ್ನಿಸಿದರು.

ಮೇಲುಧ್ವನಿಯ ಲೇಖಕ ಮೂಡ್ನಾಕೂಡು ಚಿನ್ನಸ್ವಾಮಿ: ವಿಮರ್ಶಕ ಎಸ್.ಆರ್.ವಿಜಯ ಶಂಕರ್ ಅಭಿನಂದನಾ ಭಾಷಣದಲ್ಲಿ ಮಾತ ನಾಡಿ, ಮೂಡ್ನಕೂಡ ಚಿನ್ನಸ್ವಾಮಿ ಅವರ ಬರವಣಿಗೆ ಶೈಲಿಯನ್ನು ನೋಡಿದರೆ ಅರ್ಥ ವಾಗುತ್ತದೆ ಅವರೊಬ್ಬ ಮೇಲುಧ್ವನಿಯಲ್ಲಿ ತೀವ್ರವಾಗಿ ಮಾತನಾಡ ಬಲ್ಲ ಶಕ್ತಿಯುಳ್ಳ ಲೇಖಕ, ಹೋರಾಟಗಾರ, ಚಿಂತಕ ಹಾಗೆಯೇ ಮೌನದಲ್ಲಿ ಆಕ್ರಂದನ ಧ್ವನಿಯನ್ನು ಕೇಳಿಸಬಲ್ಲ ಒಬ್ಬ ಬರಹಗಾರರಾಗಿದ್ದಾರೆ. ಆಕ್ರಂದನ ಸಂಗೀತದಲ್ಲಿ ಆಗಲಿ ಅಥವಾ ಸ್ವರದಲ್ಲಿ ಆಗಲಿ, ಭಾವನೆಯಲ್ಲಿ ಆಗಲಿ ಅದು ಬಂದಾಗ ಆಕ್ರಂದನ ಕೇಳಿಸುತ್ತದೆ. ಅಂದರೆ ಮೌನದಲ್ಲೂ ಆಕ್ರಂದನ ಮೀರಿಸುವ ಶಕ್ತಿಯುಳ್ಳವರಿಗೆ ಅದು ಮನಸ್ಸಿನೊಳಗೆ ಬಿಗಿಯಾಗಿ ಉಳಿದುಕೊಳ್ಳುತ್ತದೆ ಅದು ಚಿಂತನೆ ವೃಕ್ಷವಾಗಿ ಬೆಳುವಂತ ಒಂದು ಶಕ್ತಿಯುಳ್ಳಂತ ಒಬ್ಬ ಲೇಖಕರು ಮೂಡ್ನ ಕೂಡು ಚಿನ್ನಸ್ವಾಮಿಯವರು ಎಂದರು.

2020ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸ್ವಾಮಿ ಪೊನ್ನಾಚಿ, ಪ್ರಾಂಶುಪಾಲ ಬಿ.ಮಹೇಶ್ ಹರವೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಗುರು ಲಿಂಗಯ್ಯ, ವಿಮರ್ಶಕ ವಿ.ಎಲ್. ನರಸಿಂಹ ಮೂರ್ತಿ ಮಾತನಾಡಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಸ್.ಮಹದೇವಪ್ರಭು ಪ್ರಾಸ್ತಾವಿಕ ಭಾಷಣ ಮಾಡಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಚಾಮರಾಜನಗರ, ಜ.13– ಬಸ್ ವ್ಯವಸ್ಥೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ನಗರದ ಹೊರ ವಲಯದ ಬೇಡರ ಪುರ ಬಳಿಯ ಸ್ನಾತಕೋತ್ತರ ಕೇಂದ್ರದ ಮುಂಭಾಗ ಜಮಾಯಿಸಿದ ನೂರಾರು ವಿದ್ಯಾರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿ ಸಿದರು. ಸ್ನಾತಕೋತ್ತರ ಕೇಂದ್ರಕ್ಕೆ ಸಮ ರ್ಪಕ ಬಸ್ ವ್ಯವಸ್ಥೆ, ಹಾಸ್ಟೆಲ್ ವ್ಯವಸ್ಥೆ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸು ವಂತೆ ವಿದ್ಯಾರ್ಥಿಗಳು ಒತ್ತಾಯಿಸಿದರು.

ಚಾಮರಾಜನಗರದಿಂದ ಸ್ನಾತಕೋತ್ತರ ಕೇಂದ್ರಕ್ಕೆ ಸೂಕ್ತ ಸಾರಿಗೆ ಬಸ್ ವ್ಯವಸ್ಥೆ ಇಲ್ಲ. ಈ ಹಿಂದೆ ಕೇಂದ್ರಕ್ಕೆ ಮೂರು ಬಸ್ ಗಳನ್ನು ಓಡಿಸಲಾಗುತ್ತಿತ್ತು. ಆದರೆ, ಈಗ ಒಂದು ಬಸ್ ಮಾತ್ರ ಬರುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲದೇ ಮೈಸೂರು ಮುಖ್ಯ ರಸ್ತೆಯಿಂದ ಕೇಂದ್ರಕ್ಕೆ ಎರಡು ಕಿ.ಮೀ ದೂರವಿದ್ದು ಇಲ್ಲಿಯೂ ಕೂಡ ಬಸ್‌ಗಳನ್ನು ನಿಲ್ಲಿಸುವು ದಿಲ್ಲ. ಇದರಿಂದ ಸಮಯಕ್ಕೆ ಸರಿಯಾಗಿ ತರಗತಿಗಳಿಗೆ ಹಾಜರಾಗಲು ಆಗುತ್ತಿಲ್ಲ.

ಈ ಸಂಬಂಧ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನ ವಾಗಿಲ್ಲ. ಹೆಚ್ಚುವರಿ ಬಸ್‌ಗಳನ್ನು ಬಿಡುವ ಭರವಸೆ ನೀಡಿದ್ದರೂ ಈಡೇರಿಲ್ಲ ಎಂದರು.

ಕಾಲೇಜಿಗೆ ಸೇರು ವಾಗ ಹಾಸ್ಟೆಲ್ ವ್ಯವಸ್ಥೆ ಕೊಡುವುದಾಗಿ ಹೇಳು ತ್ತಾರೆ. ಆದರೆ, ಆ ನಂತರ ಹಾಸ್ಟೆಲ್ ವ್ಯವಸ್ಥೆ ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸ್ನಾತಕೋತ್ತರ ಕೇಂದ್ರ ದಲ್ಲಿ ಓದುವ ವಿದ್ಯಾರ್ಥಿನಿಯರಿಗೆ ಜೆಎಸ್‌ಎಸ್ ಕಾಲೇಜಿನ ಹಾಸ್ಟೆಲ್‌ನಲ್ಲಿ ವ್ಯವಸ್ಥೆ ಕಲ್ಪಿಸ ಲಾಗಿದೆ. ಹಾಸ್ಟೆಲ್‌ನಲ್ಲಿರುವ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಇನ್ನೂ ವಿದ್ಯಾರ್ಥಿ ವೇತನ ಬಂದಿಲ್ಲ. ಆದ್ದರಿಂದ 10 ಸಾವಿರ ಶುಲ್ಕ ಕಟ್ಟುವಂತೆ ಹೇಳುತ್ತಾರೆ. ಕಾಲೇಜಿಗೆ ಬರುವ ಬಹುತೇಕ ವಿದ್ಯಾರ್ಥಿಗಳು ಬಡ ಕುಟುಂಬದವರಾಗಿದ್ದು ಅಷ್ಟು ಹಣ ಕಟ್ಟಲು ಆಗುತ್ತಿಲ್ಲ ಎಂದು ದೂರಿದರು.

ಅಲ್ಲದೇ ಕಾಲೇಜಿನಲ್ಲಿರುವ ಹುಡುಗರ ಹಾಸ್ಟೆಲ್‌ನಲ್ಲಿ ಒಂದು ತಿಂಗಳಿಂದಲೂ ಊಟದ ವ್ಯವಸ್ಥೆ ಇಲ್ಲ. ಇದರಿಂದ ಅನಿ ವಾರ್ಯವಾಗಿ ಹೊರಗೆ ಹೋಟೆಲ್‌ಗಳಲ್ಲಿ ಊಟ ಮಾಡಬೇಕಾದ ಸ್ಥಿತಿ ಇದೆ ಎಂದು ದೂರಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಯಳಂದೂರು, ಜ.13– ತಾಲೂಕಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕ ಗಳಿಸಿದ ತಾಲೂಕಿನ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ತಂದೆ, ತಾಯಿಗಳು ಕಡ್ಡಾಯವಾಗಿ ರಾಜ್ಯ ಸರ್ಕಾರದ ಕಾಯಂ ನೌಕರರಾಗಿರಬೇಕು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಅಂಕಪಟ್ಟಿ ಮತ್ತು ಇಲಾಖಾ ಸೇವಾ ದೃಢೀಕರಣ ಪ್ರಮಾಣ ಪತ್ರವನ್ನು ಜ.28 ರೊಳಗೆ ಸರ್ಕಾರಿ ನೌಕರರ ಭವನದ ಕಚೇರಿಗೆ ಸಲ್ಲಿಸಲು ಮನವಿ ಮಾಡಲಾಗಿದೆ. ಮಾಹಿತಿಗಾಗಿ 9740376062, 9916694775 ಸಂಖ್ಯೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಅಥ್ಲೆಟಿಕ್ಸ್‌ನಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ಬೇಗೂರು(ಗುಂಡ್ಲುಪೇಟೆ), ಜ.13– ಸಮೀಪದ ನಿಟ್ರೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಜಿಲ್ಲಾಮಟ್ಟದ ಪ್ರಾಥಮಿಕ ಶಾಲಾ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ನಿಟ್ರೆ ಶಾಲೆಯ ವಿದ್ಯಾರ್ಥಿ ಕಾರ್ತಿಕ್.ಎಂ. 600 ಮೀ.ಓಟವನ್ನು 1.35 ಸೆಕೆಂಡುಗಳಲ್ಲಿ ಕ್ರಮಿಸಿದರೆ, ಸಂಜಯ್ 400 ಮೀ. ಓಟವನ್ನು 1.03 ಸೆಕೆಂಡುಗಳಲ್ಲಿ ಕ್ರಮಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ಮತ್ತೋರ್ವ ವಿದ್ಯಾರ್ಥಿ ಸಂಜಯ್ 600 ಮೀ ಓಟದಲ್ಲಿ ತೃತಿಯ ಸ್ಥಾನ ಪಡೆದಿರುತ್ತಾರೆ. ಇವರ ಸಾಧನೆಗೆ ಶಾಲಾ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವೃಂದದವರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ಅಭಿನಂದಿಸಿದ್ದಾರೆ.

ಗುಂಡ್ಲುಪೇಟೆಗೆ ಪ್ರತಿನಿತ್ಯ ಕಬಿನಿ ನೀರು ಪೂರೈಕೆ



ಗುಂಡ್ಲುಪೇಟೆ, ಜ.13– ಪಟ್ಟಣಕ್ಕೆ ಪ್ರತ್ಯೇಕ ಕಬಿನಿ ಎಕ್ಸ್ ಪ್ರೆಸ್ ಪೈಪ್ ಲೈನ್ ಮೂಲಕ ದಿನ ನಿತ್ಯ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಶಾಸಕ ಸಿ.ಎಸ್.ನಿರಂಜನ್ ಕುಮಾರ್ ತಿಳಿಸಿದರು.

ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಗುರುವಾರ ಪಟ್ಟಣದ ದ.ರಾ.ಬೇಂದ್ರೆ ನಗರ (ಅಶ್ವಿನಿ ಬಡಾವಣೆ) ಯಲ್ಲಿ 60 ಲಕ್ಷ ರೂ.ಗಳ ವೆಚ್ಚದಲ್ಲಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪಟ್ಟಣದ ಹಲವು ಭಾಗಗಳಲ್ಲಿ ಈಗಲೂ ಸಹ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅರಿತಿದ್ದೇನೆ. ಇದನ್ನು ಸಂಪೂರ್ಣವಾಗಿ ಬಗೆಹರಿಸಿ ಪಟ್ಟಣಕ್ಕೆ ಪ್ರತಿನಿತ್ಯ ಕುಡಿಯುವ ನೀರು ದೊರಕುವಂತೆ ಮಾಡಲು 157 ಕೋಟಿ ರೂ.ಗಳ ವೆಚ್ಚದಲ್ಲಿ ಎಕ್ಸ್‌ಪ್ರೆಸ್ ಲೈನ್ ನಿರ್ಮಾಣ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿದೆ. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಕಬಿನಿ ನದಿ ಮೂಲದಿಂದ ಪಟ್ಟಣಕ್ಕಾಗಿ ಯೇ ಪ್ರತ್ಯೇಕ ಪೈಪ್‌ಲೈನ್ ನಿರ್ಮಿಸಿ ಮುಂದಿನ ದಿನಗಳಲ್ಲಿ ಕಬಿನಿ ಎಕ್ಸಪ್ರೆಸ್ ಪೈಪ್‌ಲೈನ್ ಮೂಲಕ ದಿನ ನಿತ್ಯ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷ ಪಿ.ಗಿರೀಶ್, ಉಪಾಧ್ಯಕ್ಷೆ ದೀಪಿಕಾ ಅಶ್ವಿನ್, ಮುಖ್ಯಾಧಿಕಾರಿ ಆರ್. ಹೇಮಂತರಾಜು, ಸದಸ್ಯರಾದ ವೀಣಾ ಮಂಜುನಾಥ್, ನಾಗೇಶ್, ಶಶಿಧರ್‌ದೀಪು, ಪಟ್ಟಾಭಿರಂಗ ಸ್ವಾಮಿ, ಶ್ರೀನಿವಾಸ್, ಕಿರಣ್, ಮಂಗಳಾಮಂಜುನಾಥ್, ಇತರರಿದ್ದರು.

ತೋಟದ ಮನೆಗಳಿಗೆ ವಿದ್ಯುತ್ ನೀಡಲು ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಜ.13– ತಾಲೂಕಿನ ಉಡಿಗಾಲ ಗ್ರಾಮದ ಸುತ್ತಮುತ್ತಲಿನ ತೋಟದ ಮನೆಗಳಿಗೆ ರಾತ್ರಿ ವೇಳೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂತೆ ಆಗ್ರಹಿಸಿ ಗ್ರಾಮದ ಸೆಸ್ಕ್ ಕಚೇರಿ ಮುಂಭಾಗ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಗ್ರಾಮದ ಸೆಸ್ಕ್ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಸೆಸ್ಕ್ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಉಡಿಗಾಲ ಭಾಗದ ಹಲವು ಗ್ರಾಮ ಗಳಲ್ಲಿ ರಾತ್ರಿ ವೇಳೆ ವಿದ್ಯುತ್ ಕಡಿತ ಮಾಡಲಾ ಗುತ್ತಿದೆ. ಇದರಿಂದ ತೋಟದ ಮನೆಗಳಲ್ಲಿ ರಾತ್ರಿ ವೇಳೆ ವಿದ್ಯುತ್ ಇಲ್ಲದೇ ತೊಂದರೆಯಾ ಗುತ್ತಿದೆ. ಇದರ ಜೊತೆಗೆ ವಿದ್ಯುತ್ ಬಿಲ್ ಕಟ್ಟದ ರೈತರ ಮನೆಗಳ ವಿದ್ಯುತ್ ಸಂಪರ್ಕ ಕಡಿತ ಮಾಡಲಾಗುತ್ತಿದೆ ಎಂದರು.

ಸರ್ಕಾರಿ ಕಚೇರಿಗಳಲ್ಲಿ ಲಕ್ಷಾಂತರ ರೂ. ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದು, ಈ ಕಚೇರಿಗಳಲ್ಲಿ ವಿದ್ಯುತ್ ಕಡಿತ ಮಾಡದ ಅಧಿಕಾರಿಗಳು ರೈತರ ಮನೆಗಳಲ್ಲಿ ಕಡಿತ ಮಾಡಲು ಮುಂದಾಗುತ್ತಿರುವುದು ಖಂಡನೀಯ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕ ವಿದ್ಯುತ್ ನೀಡಬೇಕು ಎಂದರು.

ಲೋಡ್ ಶೆಡ್ಡಿಂಗ್ ಮಾಡುವುದನ್ನು ನಿಲ್ಲಿಸ ಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಮೈಸೂರು ವಿವಿ ಅತಿಥಿ ಉಪನ್ಯಾಸಕರು, ತಾತ್ಕಾಲಿಕ ಬೋಧಕೇತರ ಸಿಬ್ಬಂದಿ ವೇತನ ಪರಿಷ್ಕರಣೆ ಪ್ರಸ್ತಾವನೆ ತಿರಸ್ಕರಿಸಿದ ಸರ್ಕಾರ

ಮೈಸೂರು, ಜ. 13– ಅತಿಥಿ ಉಪನ್ಯಾಸಕರು ಹಾಗೂ ಇತರ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯ ವೇತನ ಪರಿಷ್ಕರಣೆ ಕುರಿತು ಮೈಸೂರು ವಿಶ್ವವಿದ್ಯಾನಿಲಯ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಆರ್ಥಿಕ ಸಚಿವಾಲಯ ತಿರಸ್ಕರಿಸಿದೆ. ಮೈಸೂರು ವಿವಿ ಹಣಕಾಸು ಸಮಿತಿ ಸಭೆ 2022ರ ಡಿಸೆಂಬರ್ 9ರಂದು ನಡೆದಿದ್ದು, ಈ ಸಭೆಯಲ್ಲಿ ವಿವಿಯ ವಿವಿಧ ವಿಭಾಗಗಳು ಹಾಗೂ ಪಿಜಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಮತ್ತು ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯ ವೇತನ ಪರಿಷ್ಕರಣೆ ಸಂಬಂಧ ಘಟನೋತ್ತರ ಮಂಜೂರಾತಿ ನೀಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ರವಾನಿಸಲಾಗಿತ್ತು.

ಮೈಸೂರು ವಿವಿಯ 2021–22ನೇ ಸಾಲಿನ ಆದಾಯ ಮತ್ತು ವೆಚ್ಚದ ಪಟ್ಟಿಯ ಪ್ರಕಾರ 23.88 ಕೋಟಿ ವಿತ್ತೀಯ ಕೊರತೆ ಉಂಟಾಗಿತ್ತು. ಅದೇ ರೀತಿ 2021–22ನೇ ಸಾಲಿನಲ್ಲಿ 40.17 ಕೋಟಿ ರೂ. ದುಪ್ಪಟ್ಟಾಗಿರುತ್ತದೆ ಎಂದು ತನ್ನ ಅನಧಿಕೃತ ಟಿಪ್ಪಣಿಯಲ್ಲಿ ತಿಳಿಸಿರುವ ಆರ್ಥಿಕ ಸಚಿವಾಲಯವು ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸ ಸಂಯೋಜಿಸುವ ವಿವಿಗಳೆಂದು ಸ್ಥಾಪಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಮೈಸೂರು ವಿವಿ ವ್ಯಾಪ್ತಿಯು ಕೇವಲ ಮೈಸೂರು ಜಿಲ್ಲೆಗೆ ಮಾತ್ರ ಸೀಮಿತಗೊಂಡಿದ್ದು, ಇದರಿಂದ ಮುಂದಿನ ದಿನಗಳಲ್ಲಿ ವಿವಿಯ ಆರ್ಥಿಕ ಸಂಪನ್ಮೂಲ ಗಣನೀಯವಾಗಿ ಇಳಿಕೆಯಾಗಲಿದ್ದು, ವಿವಿಯು ತನ್ನ ವೆಚ್ಚಗಳನ್ನು ನಿಯಂತ್ರಿಸುವ ಅವಶ್ಯಕತೆ ಇದೆ ಎಂದು ತಿಳಿಸಲಾಗಿದೆ.

> **ಮೈಸೂರು ವಿವಿಯು 900ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರನ್ನು ಹೆಚ್ಚುವರಿಯಾಗಿ ನೇಮಿಸಿಕೊಂಡಿದ್ದು, ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದವರನ್ನೂ ಕೂಡ ನೇಮಿಸಿಕೊಳ್ಳಲಾಗಿದೆ. ಯುಜಿಸಿ ಮಾನದಂಡಗಳ ಪ್ರಕಾರ ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರವೇ ನಿಯಮಾನುಸಾರ ನೇಮಿಸಿಕೊಳ್ಳಬೇಕು. ಆದರೆ, ಮೈಸೂರು ವಿವಿ ಈ ಮಾನದಂಡಗಳನ್ನು ಅನುಸರಿಸಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡಿಲ್ಲ ಎಂದಿರುವ ಆರ್ಥಿಕ ಇಲಾಖೆ ಮೈಸೂರು ವಿವಿ ಅತಿಥಿ ಉಪನ್ಯಾಸಕರನ್ನು ಕಡ್ಡಾಯವಾಗಿ ಯುಜಿಸಿ ಮಾನದಂಡಗಳನ್ನು ಅನುಸರಿಸಿ ನೇಮಿಸಿಕೊಳ್ಳಲು ಕ್ರಮ ವಹಿಸಬೇಕು ಎಂದು ಸೂಚಿಸಿದೆ.**

ಮೈಸೂರು ವಿವಿಯು ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯ ವೇತನ ಪಾವತಿಗಾಗಿ ಈಗಾಗಲೇ ವಾರ್ಷಿಕ 43.47 ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದೆ. ಈ ಸಿಬ್ಬಂದಿಯ ವೇತನವನ್ನು 2020ರಲ್ಲಿ ಪರಿಷ್ಕರಿಸಿದ್ದು, ಕೇವಲ 2 ವರ್ಷದ ಅಂತರದಲ್ಲಿ ಮತ್ತೆ ವೇತನ ಪರಿಷ್ಕರಿಸುವುದರಲ್ಲಿ ಯಾವುದೇ ಸಮರ್ಥನೆ ಇಲ್ಲ ಎಂದಿರುವ ಆರ್ಥಿಕ ಇಲಾಖೆ 12 ಗಂಟೆ ಕಾರ್ಯಭಾರ ಹೊಂದಿರುವ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರ ವೇತನವನ್ನು ಹಾಲಿ 28 ಸಾವಿರ ರೂ.ಗಳಿಂದ 37 ಸಾವಿರ ರೂ.ಗಳಿಗೆ ಹಾಗೂ ಯುಜಿಸಿ ವಿದ್ಯಾರ್ಹತೆ ಹೊಂದಿಲ್ಲದ ಉಪನ್ಯಾಸಕರ ವೇತನವನ್ನು 24 ಸಾವಿರ ರೂ.ಗಳಿಂದ 26,400 ರೂ.ಗಳಿಗೆ ಮತ್ತು ಕೆಲವು ಉಪನ್ಯಾಸಕರಿಗೆ ಮಾಸಿಕ ಗರಿಷ್ಠ 60 ಸಾವಿರ ರೂ.ಗಳಿಗೆ ವೇತನವನ್ನು ಹೆಚ್ಚಿಸಲಾಗಿದೆ. ಇದು ಯುಜಿಸಿಯು ಪೂರ್ಣ ಕಾರ್ಯಭಾರಕ್ಕೆ ನಿಗದಿಪಡಿಸಿರುವ ಗರಿಷ್ಠ 50 ಸಾವಿರ ರೂ.ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ 2022ರ ಜನವರಿ 14ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ಸರ್ಕಾರ ನಿಗದಿಪಡಿಸಿರುವ ಸಂಭಾವನೆಗಿಂತಲೂ ಹೆಚ್ಚಾಗಿರುತ್ತದೆ ಎಂದು ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

ಮೈಸೂರು ವಿವಿಯು ಬೋಧಕ ಹಾಗೂ ಬೋಧಕೇತರ ವೃಂದಗಳಲ್ಲಿ ಮಂಜೂರಾಗಿರುವ ಹುದ್ದೆಗಳಿಗೂ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದು, ಅವುಗಳನ್ನು ಮರುಪರಿಶೀಲಿಸುವಂತೆ ತಿಳಿಸಿರುವ ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಅವರು, ಮೇಲೆ ವಿವರಿಸಿರುವ ಕಾರಣಗಳಿಂದಾಗಿ ಮೈಸೂರು ವಿವಿಯ ವಿವಿಧ ಭಾಗಗಳು ಹಾಗೂ ಪಿಜಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಮತ್ತು ಇತರ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯ ವೇತನ ಪರಿಷ್ಕರಣೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಒಪ್ಪುವುದಿಲ್ಲ ಎಂದು ತಿಳಿಸಿದ್ದಾರೆ.

ಉತ್ತಮ ಆರೋಗ್ಯ, ವಿನಯತೆಗೆ ಕ್ರೀಡೆ ಸಹಕಾರಿ



ಮೈಸೂರು, ಜ.13(ಎಸ್‌ಪಿಎನ್)–ವಿದ್ಯಾರ್ಥಿ ದಿಸೆಯಿಂದಲೇ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವ ಕ್ರೀಡಾಪಟು ಸಾಮಾಜಿಕ ಸಮಸ್ಯೆಗೆ ಸ್ಪಂದಿಸುವ ಗುಣ ಅಳವಡಿಸಿಕೊಂಡಿರುತ್ತಾರೆ ಎಂದು ನೈಋತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆಯ ಮೈಸೂರು ವಿಭಾಗದ ಅಧ್ಯಕ್ಷೆ ಪೂಜಾ ಅಗರ್‌ವಾಲ್ ಅಭಿಪ್ರಾಯ ಪಟ್ಟರು.

ಮೈಸೂರು ವಿಭಾಗದ ನೈಋತ್ಯ ರೈಲ್ವೆ ಮಹಿಳಾ ಸಂಸ್ಥೆಯು ಮೈಸೂರಿನ ಯಾದವಗಿರಿ ಲಲಿತಾ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕ ಕ್ರೀಡಾ ದಿನಾಚರಣೆ ಹಾಗೂ ಭಾರತೀಯ ಮಹಿಳಾ ಬಾಸ್ಕೆಟ್‌ಬಾಲ್ ತಂಡದ ನಾಯಕಿ ಎಂ.ಎಸ್.ಬಾಂಧವ್ಯ ಅವರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕ್ರೀಡೆಯಲ್ಲಿ ಭಾಗವಹಿಸಿ ಪದಕ ಗೆದ್ದರೂ, ಗೆಲ್ಲದಿದ್ದರೂ, ಸ್ಪರ್ಧೆಯಲ್ಲಿ ಭಾಗವಹಿಸಿದವರೆಲ್ಲರೂ ಸಮಾನರು ಎಂಬ ಭಾವನೆ ನನ್ನದು. ಪ್ರತಿಯೊಬ್ಬರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಉತ್ತಮ ಆರೋಗ್ಯ, ವ್ಯಕ್ತಿತ್ವದಲ್ಲಿ ವಿನಯತೆ, ಸಂಸ್ಕಾರ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಅಲ್ಲದೆ, ಕ್ರೀಡಾಪಟುಗಳು ರಾಷ್ಟ್ರೀಯ ಸಂಬಂಧಗಳನ್ನು ಬೆಸೆಯುವ ಪ್ರತಿನಿಧಿಗಳಾಗಿ ಹೊರಹೊಮ್ಮುತ್ತಾರೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಭಾರತೀಯ ಮಹಿಳಾ ಬಾಸ್ಕೆಟ್‌ಬಾಲ್ ತಂಡದ ನಾಯಕಿ ಎಂ.ಎಸ್.ಬಾಂಧವ್ಯ, ಇತ್ತೀಚೆಗೆ ಶಾಲಾ ದಿನಗಳಲ್ಲಿ ಶಿಕ್ಷಣದ ಕಡೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿರುವುದರಿಂದ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸುವುದು, ಬಿಡುವಿನ ವೇಳೆ ಆಟವಾಡುವುದು ಹವ್ಯಾಸವಾಗಿ ಮಾರ್ಪಟ್ಟಿದೆ ಎಂದು ವಿಷಾಧ ವ್ಯಕ್ತಪಡಿಸಿದರು.

ಶಾಲಾ ಹಂತದಿಂದ ಕ್ರೀಡೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿದರೆ, ಮುಂದಿನ ದಿನಗಳಲ್ಲಿ ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಿ ದೇಶಕ್ಕೆ ಕೀರ್ತಿ ತರಲಿದ್ದಾರೆ. ಹಾಗಾಗಿ ಚಿಕ್ಕ ವಯಸ್ಸಿನಿಂದಲೇ ತಮ್ಮ ಮಕ್ಕಳಿಗೆ ಪೋಷಕರು ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಇದರಿಂದ ವಿದ್ಯಾರ್ಥಿಯ ಮನಸ್ಸಿನಲ್ಲಿ ಮಾನಸಿಕ ಸ್ಥೈರ್ಯ, ಕ್ರೀಡಾ ಮನೋಭಾವ, ದೇಶ ಭಕ್ತಿ ಹಾಗೂ ಜೀವನ ಕೌಶಲ್ಯಗಳನ್ನು ಕಲಿಸುತ್ತದೆ ಎಂದು ಸಲಹೆ ನೀಡಿದರು.

ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕಿ ಇ.ವಿಜಯಾ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಮಂಜುನಾಥ ಕನಮಡಿ, ಮೈಸೂರು ವಿಭಾಗದ ನೈಋತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆಯ ಕಾರ್ಯಕಾರಿ ಸದಸ್ಯರು ಹಾಗೂ ಶಾಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ವಿವಿಧ ಕ್ರೀಡೆಯಲ್ಲಿ ಭಾಗವಹಿಸಿದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದಕ ಹಾಗೂ ಪ್ರಮಾಣ ಪತ್ರ ವಿತರಿಸಿದರು.

2023 ಜನವರಿ 31ರಿಂದ ಏಪ್ರಿಲ್ 6ರವರೆಗೆ ಕೇಂದ್ರ ಬಜೆಟ್ ಅಧಿವೇಶನ

ನವದೆಹಲಿ, ಜ.13– ಸಂಸತ್ತಿನ ಬಜೆಟ್ ಅಧಿವೇಶನ ಜನವರಿ 31 ರಿಂದ ಪ್ರಾರಂಭವಾಗಲಿದ್ದು, ಏಪ್ರಿಲ್ 6 ರವರೆಗೆ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಶುಕ್ರವಾರ ತಿಳಿಸಿದ್ದಾರೆ. 66 ದಿನಗಳ ಅವಧಿಯಲ್ಲಿ 27 ಅಧಿವೇಶನಗಳು ನಡೆಯಲಿದ್ದು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆಬ್ರವರಿ 1 ರಂದು ಕೇಂದ್ರ ಬಜೆಟ್ ಅನ್ನು ಮಂಡಿಸುವ ಸಾಧ್ಯತೆಯಿದೆ. ಇದು ಸೀತಾರಾಮನ್ ಮಂಡಿಸುವ ಐದನೇ ಕೇಂದ್ರ ಬಜೆಟ್ ಆಗಿದೆ. 2024 ರ ಲೋಕಸಭಾ ಚುನಾವಣೆಯ ಮೊದಲು ಕೇಂದ್ರ ಬಜೆಟ್ ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರದ ಅಡಿಯಲ್ಲಿ ಅಂತಿಮ ಪೂರ್ಣ ವರ್ಷದ ಬಜೆಟ್ ಆಗಿ ಮಂಡಿಸಲಾಗುವುದು ಎನ್ನಲಾಗಿದೆ.

"ಸಂಸತ್ತಿನ ಬಜೆಟ್ ಅಧಿವೇಶನ 2023 ಜನವರಿ 31 ರಿಂದ ಪ್ರಾರಂಭವಾಗುತ್ತದೆ ಮತ್ತು ಏಪ್ರಿಲ್ 6 ರವರೆಗೆ 66 ದಿನಗಳ ಕಾಲ ಸಾಮಾನ್ಯ ವಿರಾಮದೊಂದಿಗೆ 27 ಅಧಿವೇಶನಗಳನ್ನು ವಿಸ್ತರಿಸುತ್ತದೆ. 2023 ರ ಬಜೆಟ್ ಅಧಿವೇಶನದಲ್ಲಿ, ಇಲಾಖೆ–ಸಂಬಂಧಿತ ಸಂಸದೀಯ ಸ್ಥಾಯಿ ಸಮಿತಿಗಳು ಅನುದಾನಕ್ಕಾಗಿ ಬೇಡಿಕೆಗಳನ್ನು ಪರಿಶೀಲಿಸಲು ಮತ್ತು ತಮ್ಮ ಸಚಿವಾಲಯಗಳು ಅಥವಾ ಇಲಾಖೆಗಳಿಗೆ ಸಂಬಂಧಿಸಿದ ವರದಿಗಳನ್ನು ಮಾಡಲು ಅನುವು ಮಾಡಿಕೊಡಲು ಫೆಬ್ರವರಿ 14 ರಿಂದ ಮಾರ್ಚ್ 12 ರವರೆಗೆ ಬಿಡುವು ನೀಡಲಾಗುವುದು ಎಂದು ಜೋಶಿ ಟ್ವೀಟ್ ಮಾಡಿದ್ದಾರೆ.

ಜ.25ರಂದು ಚಾ.ನಗರ, ಮೈಸೂರಲ್ಲಿ ಕಾಂಗ್ರೆಸ್ 'ಪ್ರಜಾಧ್ವನಿ ಯಾತ್ರೆ'

●ಮೈಸೂರಲ್ಲಿ ನಡೆದ ಮೈಸೂರು ವಿಭಾಗದ ಐದು ಜಿಲ್ಲೆಗಳ ಮುಖಂಡರ ಸಭೆಯಲ್ಲಿ ಯಾತ್ರೆ ಯಶಸ್ಸಿಗೆ ಸಹಕರಿಸಲು ಮನವರಿಕೆ ●ಲಕ್ಷಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ●ಹಾಸನದಲ್ಲಿ ಜ.21ರಂದು ಯಾತ್ರೆ ನಿಗಧಿ



ಜ.25ರಂದು ಚಾಮರಾಜನಗರ ಮತ್ತು ಮೈಸೂರಿನಲ್ಲಿ ನಡೆಯಲಿರುವ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆಗೆ ಸಂಬಂಧಿಸಿದಂತೆ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ವಿಭಾಗದ ಐದು ಜಿಲ್ಲೆಗಳ ಹಾಲಿ ಮತ್ತು ಮಾಜಿ ಶಾಸಕರು, ಮಾಜಿ ಸಂಸದರು, ಎಂಎಲ್‌ಸಿಗಳು, ಕೆಪಿಸಿಸಿ ಹಾಗೂ ಡಿಸಿಸಿ ಅಧ್ಯಕ್ಷರು ಮತ್ತು ಬ್ಲಾಕ್ ಸಮಿತಿ ಅಧ್ಯಕ್ಷರು, ಪ್ರಮುಖ ಮುಖಂಡರ ಸಭೆಯಲ್ಲಿ ಪ್ರಜಾಧ್ವನಿ ಯಾತ್ರೆಯ ಸಮನ್ವಯ ಸಮಿತಿ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಮಾತನಾಡಿದರು. ಚಿತ್ರದಲ್ಲಿ ರಾಜ್ಯ ಉಸ್ತುವಾರಿಯೂ ಆದ ಎಐಸಿಸಿ ಕಾರ್ಯದರ್ಶಿ ರೋಜಿ ಜೋನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಇನ್ನಿತರರು ಭಾಗವಹಿಸಿದ್ದರು.

ಮೈಸೂರು, ಜ.13 (ಆರ್‌ಕೆಬಿ)– ರಾಜ್ಯ ವಿಧಾನಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಕಾಂಗ್ರೆಸ್‌ನ ಪ್ರಜಾಧ್ವನಿ ಬಸ್ ಯಾತ್ರೆ ಜ.25 ರಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದ್ದು, ಯಾತ್ರೆಯು ಬೆಳಗ್ಗೆ ಚಾಮರಾಜನಗರ ಹಾಗೂ ಮಧ್ಯಾಹ್ನ ಮೈಸೂರಿನಲ್ಲಿ ಸಂಚರಿಸಲಿದೆ.

ಈ ಸಂಬಂಧ ಶುಕ್ರವಾರ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಎಐಸಿಸಿ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರೋಜಿ ಜೋನ್, ಬಸ್ ಯಾತ್ರೆಯ ಸಮನ್ವಯ ಸಮಿತಿ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರ ಸಮ್ಮುಖದಲ್ಲಿ ಪೂರ್ವಭಾವಿ ಸಭೆ ನಡೆಯಿತು. ಜ.21ರಂದು ಹಾಸನದಲ್ಲಿ ಹಾಗೂ ಜ.25 ರಂದು ಬೆಳಗ್ಗೆ ಚಾಮರಾಜನಗರ, ಮಧ್ಯಾಹ್ನ ಮೈಸೂರಿನಲ್ಲಿ ಪ್ರಜಾಧ್ವನಿ ಯಾತ್ರೆ ಯಶಸ್ವಿಗೊಳಿಸುವ ಸಂಬಂಧ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯದ ಉಸ್ತುವಾರಿಯೂ ಆದ ಎಐಸಿಸಿ ಕಾರ್ಯದರ್ಶಿ ರೋಜಿ ಜಾನ್, ರಾಹುಲ್ ಗಾಂಧಿ ಕೈಗೊಂಡಿರುವ ಭಾರತ್ ಜೋಡೋ ಯಾತ್ರೆ ಜ.30 ರಂದು ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ ಸಮಾರೋಪಗೊಳ್ಳಲಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಬಳ್ಳಾರಿ ಪಾದಯಾತ್ರೆ, ಮೇಕೆದಾಟು ಪಾದಯಾತ್ರೆ ಹೀಗೆ ಅನೇಕ ಯಾತ್ರೆಗಳನ್ನು ಯಶಸ್ವಿಯಾಗಿ ನಡೆಸಿ ಜನರನ್ನು ತಲುಪಿದೆ. ಅದೇ ರೀತಿ ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಮ್ಮಿಕೊಂಡಿರುವ 'ಪ್ರಜಾಧ್ವನಿ ಬಸ್ ಯಾತ್ರೆ' ಯಶಸ್ವಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಕೇವಲ ಹಿಂದುತ್ವದ ಅಜೆಂಡಾ ಇಟ್ಟುಕೊಂಡು ಹೊರಟಿರುವ ಬಿಜೆಪಿಗೆ ಮೈಸೂರು ವಿಭಾಗದಲ್ಲಿ ಯಾವುದೇ ಪ್ರಯೋಜನ ಆಗುವುದಿಲ್ಲ. ರಾಜ್ಯದಲ್ಲಿ ರಾಜಕೀಯ ಬದಲಾವಣೆಗೆ ಈ ಪ್ರಜಾಯಾತ್ರೆ ಹೆಚ್ಚು ಪ್ರಯೋಜನವಾಗಲಿದೆ ನಾವು ಚುನಾವಣೆಯನ್ನು ಸಮರ್ಥವಾಗಿ ಎದುರಿಸಲು ಬಿಜೆಪಿಯ ಜನವಿರೋಧಿ ವಿಚಾರಗಳ ಬಗ್ಗೆ ಜನರನ್ನು ಸೆಳೆಯಬೇಕಿದೆ. ಅದಕ್ಕಾಗಿ ಈ ಯಾತ್ರೆ ಬಗ್ಗೆ ಹೆಚ್ಚು ಪ್ರಚಾರ ಆಗಬೇಕು. ಕಾಂಗ್ರೆಸ್‌ನ ಕಾರ್ಯಕ್ರಮಗಳ ಬಗ್ಗೆ ಪರಿಣಾಮಕಾರಿಯಾಗಿ ಪರಿಚಯ ಮಾಡಿಕೊಡಬೇಕು. ಯಾತ್ರೆ ಪೂರ್ಣ ಯಶಸ್ವಿಗೆ ಎಲ್ಲರೂ ಶ್ರಮಿಸಬೇಕು ಎಂದು ಕರೆ ನೀಡಿದರು.

ಬೂತ್ ಮಟ್ಟದಲ್ಲಿ ಬಿಎಲ್ಎ–2 ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ನಿರಂತರ ಸಭೆಗಳನ್ನು ನಡೆಸಿ, ಹಳ್ಳಿ ಹಳ್ಳಿಗಳಲ್ಲಿ ಪ್ರಜಾಧ್ವನಿ ಯಾತ್ರೆ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು. ಈ ಬಗ್ಗೆ ಸೋಶಿಯಲ್ ಮೀಡಿಯಾ ಸದ್ಬಳಕೆ ಮಾಡಿಕೊಂಡು, ಹೆಚ್ಚು ಪ್ರಚಾರ ಮಾಡಿ, ಯಾತ್ರೆ ಯಶಸ್ವಿಯಾಗುವಂತೆ ಶ್ರಮಿಸಲು ಕರೆ ನೀಡಿದರು.

ಚುನಾವಣೆ ಗೆಲ್ಲುವುದು ನಮ್ಮ ಗುರಿಯಾಗಬೇಕು: ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಪ್ರಜಾಧ್ವನಿ ಬಸ್ ಯಾತ್ರೆ ಜ.21ರಂದು ಹಾಸನದಿಂದ ಆರಂಭವಾಗಲಿದ್ದು, ನಂತರ ಚಿಕ್ಕಮಗಳೂರು, ಜ.25ರಂದು ಚಾಮರಾಜನಗರ, ಮೈಸೂರಿನಲ್ಲಿ ನಡೆಯಲಿದೆ. ಹಾಸನದಲ್ಲಿ ಬಸ್ ಯಾತ್ರೆ ಯಶಸ್ವಿಗೊಳಿಸಲು ಅಲ್ಲಿನ ಮುಖಂಡರು ನಾ ಮುಂದು ತಾ ಮುಂದು ಎಂದು ಮುಂದೆ ಬಂದಿದ್ದಾರೆ. ಇದು ಅಲ್ಲಿನ ಸಭೆ ಸಂಪೂರ್ಣ ಯಶಸ್ವಿಯಾಗುವ ಮುನ್ಸೂಚನೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯವರು ಸಹ ಯಾತ್ರೆಗೆ ಸಂಬಂಧಿಸಿದಂತೆ ಮೂರು ಸಭೆ ನಡೆಸಿ, ಯಾತ್ರೆ ಯಶಸ್ಸಿಗೆ ಕೈಜೋಡಿಸಿದ್ದಾರೆ ಎಂದರು.

ಚಾಮರಾಜನಗರ ಮತ್ತು ಮೈಸೂರಿನಲ್ಲಿ ಯಾತ್ರೆ ಯಶಸ್ವಿಗೊಳಿಸಲು ಎಲ್ಲರೂ ಸಂಘಟಿತರಾಗಿ ಸಿದ್ಧತೆಯಲ್ಲಿ ತೊಡಗಿದ್ದಾರೆ. ಮೈಸೂರಿನಲ್ಲಿ ಸಿದ್ದರಾಮಯ್ಯನವರ ಸೂಚನೆಯಂತೆ ಯಾತ್ರೆ ನಡೆಯುವ ಸ್ಥಳ ನಿಗದಿಪಡಿಸಲಾಗುವುದು. ಅಲ್ಲದೆ ಕನಿಷ್ಟ ಒಂದೂವರೆ ಲಕ್ಷ ಜನರು ಭಾಗವಹಿಸಲು ಸಿದ್ಧತೆ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಮೈಸೂರು ವಿಭಾಗದ 48 ವಿಧಾನಸಭಾ ಕ್ಷೇತ್ರಗಳನ್ನು ಗೆಲ್ಲುವುದು ನಮ್ಮ ಗುರಿಯಾಗಬೇಕು. ಸರ್ವೆ ವರದಿಗಳ ಪ್ರಕಾರ ರಾಜ್ಯದಲ್ಲಿ ಕಾಂಗ್ರೆಸ್ ತೀರಾ ಮುಂದಿದೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಬೂತ್ ಮಟ್ಟದಲ್ಲಿ ಬಿಎಲ್‌ಎ–2 ಗಳ ನೇಮಕ ಶೀಘ್ರ ಆಗಬೇಕು ಎಂದು ಕರೆ ನೀಡಿದರು.

ಯಾತ್ರೆಗಳಲ್ಲಿ ಲಕ್ಷ ಮಂದಿ ಭಾಗವಹಿಸಲು ಕರೆ: ಸಮನ್ವಯ ಸಮಿತಿ ಅಧ್ಯಕ್ಷರು ಆದ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಮಾತನಾಡಿ, ಮುಂದಿನ ಚುನಾವಣೆಯ ದೃಷ್ಟಿಯಲ್ಲಿಟ್ಟುಕೊಂಡು ಮೈಸೂರು ವಿಭಾಗದ ಐದು ಜಿಲ್ಲೆಗಳ ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು, ಕೆಪಿಸಿಸಿ ಸದಸ್ಯರು, ಜಿಲ್ಲಾಧ್ಯಕ್ಷರು, ಬ್ಲಾಕ್ ಅಧ್ಯಕ್ಷರ ಸಭೆ ಇದಾಗಿದೆ. ಜ.25 ರಂದು ಮೈಸೂರು ಮತ್ತು ಚಾಮರಾಜನಗರದಲ್ಲಿ ನಡೆಯಲಿರುವ ಪ್ರಜಾಧ್ವನಿ ಯಾತ್ರೆ ಯಶಸ್ವಿಗೊಳಿಸಲು ಎಲ್ಲರೂ ಸಂಘಟಿತ ಪ್ರಯತ್ನ ಮಾಡಬೇಕಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಜ.21ರಂದು ಹಾಸನದಲ್ಲಿ ನಡೆಯಲಿರುವ ಯಾತ್ರೆಗೆ ಕನಿಷ್ಠ ಒಂದು ಲಕ್ಷ ಮಂದಿ ಕಾರ್ಯಕರ್ತರು ಭಾಗವಹಿಸಬೇಕು ಎಂದು ಸಭೆಯಲ್ಲಿ ಭಾಗವಹಿಸಿದ್ದ ಹಾಸನ ಜಿಲ್ಲಾ ಮುಖಂಡರಲ್ಲಿ ಮನವಿ ಮಾಡಿದರು.

ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ: ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ನಾವು ಮುಂದೆ ಚುನಾವಣೆ ಗೆಲ್ಲುವ ಉದ್ದೇಶದಿಂದ ಹಮ್ಮಿಕೊಂಡಿರುವ ಪ್ರಜಾಧ್ವನಿ ಯಾತ್ರೆಗೆ ಸಂಬಂಧಿಸಿದಂತೆ ಈ ಮಹತ್ವದ ಸಭೆ ನಡೆಸಿದ್ದೇವೆ. ಯಾತ್ರೆ ಯಶಸ್ವಿಯಾಗುವ ಜೊತೆಗೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಈ ಭಾಗದಲ್ಲಿ ಹೆಚ್ಚು ಸ್ಥಾನಗಳನ್ನು ನಾವು ಗೆಲ್ಲಲಿದ್ದೇವೆ ಎಂದು ಹೇಳಿದರು.

60 ವರ್ಷಗಳ ಸುದೀರ್ಘ ಕಾಲ ದೇಶದಲ್ಲಿ ಆಡಳಿತ ನಡೆಸಿರುವ ಕಾಂಗ್ರೆಸ್‌ಗೆ ಭಯಪಡುವ ಅಗತ್ಯವಿಲ್ಲ ಎಂದ ಅವರು, ಬಿಜೆಪಿಯಲ್ಲಿ ಮುಖ್ಯಮಂತ್ರಿ ಆಗುವ ಯಾರಾದರೂ ಲೀಡರ್‌ಗಳು ಇದ್ದಾರೆಯೇ ಎಂದು ಪ್ರಶ್ನಿಸಿದರು.

ಹಾಸನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಇ.ಹೆಚ್. ಲಕ್ಷ್ಮಣ್ ಮಾತನಾಡಿ, 21 ರಂದು ಹಾಸನದಲ್ಲಿ ನಡೆಯುವ ಪ್ರಜಾಧ್ವನಿ ಯಾತ್ರೆ ಮೂಲಕ ಸಿದ್ದರಾಮಯ್ಯ, ಡಿ.ಕೆ ಶಿವಕುಮಾರ್ ಇನ್ನಿತರ ನಾಯಕರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಜನರನ್ನು ಸೇರಿಸಿ, ಬೈಕ್ ಹಾಗೂ ಎತ್ತಿನ ಗಾಡಿ ರ್‍ಯಾಲಿ ನಡೆಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಸಭೆ ಸಂಪೂರ್ಣ ಯಶಸ್ಸಿಗೆ ಶ್ರಮಿಸಲಿದ್ದೇವೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಪುಟ್ಟರಂಗಶೆಟ್ಟಿ, ಆರ್.ನರೇಂದ್ರ ಅನಿಲ್ ಚಿಕ್ಕಮಾದು, ಡಾ.ಡಿ. ತಿಮ್ಮಯ್ಯ, ಮಧು ಮಾದೇಗೌಡ, ದಿನೇಶ್ ಗೂಳೀಗೌಡ, ಮಾಜಿ ಶಾಸಕರಾದ ವಾಸು, ಎ.ಆರ್.ಕೃಷ್ಣಮೂರ್ತಿ, ಕಳಲೆ ಕೇಶವಮೂರ್ತಿ, ಮಲ್ಲಾಜಮ್ಮ, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಎಂಎಲ್‌ಸಿ ಗುರುಪಾದ ಸ್ವಾಮಿ, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ್, ಚಾಮರಾಜನಗರ ಜಿಲ್ಲಾಧ್ಯಕ್ಷ ಸಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಯಾತ್ರೆ ಸಮಿತಿ ಸದಸ್ಯರಾದ ಹುಸೇನ್, ನಿವೇದಿತಾ ಆಳ್ವಾ, ಕಾಂಗ್ರೆಸ್ ಪರಿಶಿಷ್ಟ ಘಟಕದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ, ಮೈಸೂರು ನಗರಾಧ್ಯಕ್ಷ ಆರ್.ಮೂರ್ತಿ ಇನ್ನಿತರರಿದ್ದರು.

ಅಭಿಯಂತರರು ಸಂಸ್ಥೆ ವತಿಯಿಂದ ಐದು ದಿನ ರಾಷ್ಟ್ರೀಯ ನಾಟಕೋತ್ಸವ



ಮೈಸೂರು,ಜ.13(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜ. 18 ರಿಂದ 22 ರವರೆಗೆ ಅಭಿಯಂತರರು ಸಂಸ್ಥೆಯಿಂದ ರಾಷ್ಟ್ರೀಯ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂಜಿನಿಯರ್‌ಗಳು ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳೇ ಕಟ್ಟಿಕೊಂಡಿರುವ ಅಭಿಯಂತರರು ಸಂಸ್ಥೆ 30ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದೆ. ಇಂಜಿನಿಯರ್‌ಗಳನ್ನು ರಂಗಭೂಮಿಯತ್ತ ಸೆಳೆಯಲು ಈ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ಸಂಸ್ಥೆಯ ವತಿಯಿಂದಲೇ ಇದುವರೆಗೆ 24 ನಾಟಕಗಳನ್ನು ರಂಗಪ್ರಯೋಗ ಮಾಡಿ ಯಶಸ್ವಿಯಾಗಿ ಪ್ರದರ್ಶಿಸಲಾಗಿದೆ. 1993ರಲ್ಲಿ ಸ್ಥಾಪಿತಗೊಂಡ ಅಭಿಯಂತರರು ಸಂಸ್ಥೆ ದೇಶದಾದ್ಯಂತ ನಾಟಕ ಪ್ರದರ್ಶಿಸಿದೆ. 30ನೇ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಮೈಸೂರಲ್ಲಿ ರಾಷ್ಟ್ರೀಯ ನಾಟಕೋತ್ಸವ ಆಯೋಜಿಸಲಾಗಿದೆ ಎಂದರು.

ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜ. 18 ರ ಸಂಜೆ 6.30ಕ್ಕೆ ನಾಟಕೋತ್ಸವವನ್ನು ಹಿರಿಯ ಸಾಹಿತಿ ಹೆಚ್.ಎಸ್. ಶಿವಪ್ರಕಾಶ್ ಉದ್ಘಾಟಿಸಲಿದ್ದಾರೆ. ವೀಣಾ ಶರ್ಮ ಅಧ್ಯಕ್ಷತೆ ವಹಿಸುವರು. ನಂತರ ಸಂಜೆ 7ಕ್ಕೆ ಮಂಗಳೂರಿನ ಅಸ್ತಿತ್ವ ಸಂಸ್ಥೆ ಅರ್ಪಿಸುವ, ಎಂ.ಪಿ. ರಾಜೇಶ್ ರಚನೆಯ, ಅರುಣ್ ಲಾಲ್ ನಿರ್ದೇಶನದ ಕೆಂಡೋನಿಯನ್ಸ್ ನಾಟಕ ಪ್ರದರ್ಶನಗೊಳ್ಳಲಿದೆ. ಜ.19ರಂದು ಸಂಜೆ 7ಕ್ಕೆ ಮುಂಬೈನ ಅಭಿನಯ ಕಲ್ಯಾಣ ಸಂಸ್ಥೆಯಿಂದ 'ಸಾಮ್ರಾಜ್ಯಂ' ನಾಟಕ ಪ್ರದರ್ಶನ ನಡೆಯಲಿದೆ. ಜ.20ರಂದು ಸಂಜೆ 7ಕ್ಕೆ ನವದೆಹಲಿಯ ಮೆರಾಕಿ ಥಿಯೇಟರ್ ಗ್ರೂಪ್‌ನಿಂದ 'ಇನ್ ಕ್ವೆಸ್ಟ್ ಆಫ್ ಪೀಸ್', ಜ.21ರಂದು ಸಂಜೆ 7ಕ್ಕೆ ಬೆಂಗಳೂರಿನ ರಂಗಾಸ್ಥೆ ಸಂಸ್ಥೆಯಿಂದ 'ದ್ರೋಪತಿ ಹೇಳ್ತವ್ಳೆ' ನಾಟಕ ಪ್ರದರ್ಶನ ಜರುಗಲಿದೆ. ಜ.22ರಂದು ಸಂಜೆ 7ಕ್ಕೆ ಬೆಂಗಳೂರಿನ ಅಭಿಜ್ಞಾ ತಂಡದಿಂದ 'ಚೋರ ಪುರಾಣ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ವಿವರಿಸಿದರು.

ಜ. 21 ರಂದು ಸಂಜೆ 6ಕ್ಕೆ ತತ್ವಪದ ಕಲಾವಿದರಾದ ಕೊಪ್ಪಳದ ಮಾರೆಪ್ಪ ಚೆನ್ನದಾಸ ಮತ್ತು ತಂಡದಿಂದ ಜನಪದ ಮತ್ತು ತತ್ವಪದ ಗಾಯನ, ಜ. 22 ರಂದು ಸಂಜೆ 6ಕ್ಕೆ ಚಲನಚಿತ್ರ ಮತ್ತು ರಂಗ ಸಂಗೀತ ನಿರ್ದೇಶಕ ರಾಮಚಂದ್ರ ಹಡಪ ಅವರಿಂದ ಸೂಫಿ ಗಾಯನವಿದೆ ಎಂದು ತಿಳಿಸಿದರು.

ಇದೇ ವೇಳೆ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ನಾಟಕೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಅಭಿಯಂತರರು ಸಂಸ್ಥೆಯ ಮಹದೇವಸ್ವಾಮಿ, ಸುಷ್ಮಾಶ್ರೀ, ಗುರು, ಶ್ರೇಯಸ್ ಇದ್ದರು.



ಕಳೆದ ಬುಧವಾರ ಮೈಸೂರು ರೇಸ್‌ಕೋರ್ಸ್‌ನಲ್ಲಿ ನಡೆದ ರೇಸ್‌ನಲ್ಲಿ 'ದಿ ಏರ್‌ಫೋರ್ಸ್ ಟ್ರೋಫಿ' ಗೆದ್ದ 'ಪ್ರಿನ್ಸ್ ಕಾರ್ಪೋರೇಟರ್' ಕುದುರೆಯ ತರಬೇತುದಾರ ರಾಕೇಶ್, ಮಾಲೀಕ ಪಿ.ಐ.ಜೋಸೆಫ್ ಅವರು ಟ್ರೋಫಿಯನ್ನು ಸ್ವೀಕರಿಸಿದರು. ಈ ವೇಳೆ ಎಂಆರ್‌ಸಿ ಅಧ್ಯಕ್ಷರು, ಸ್ಟೀವರ್ಡ್ಸ್, ಕಮಿಟಿ ಸದಸ್ಯರು ಉಪಸ್ಥಿತರಿದ್ದರು.



ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಪುಣ್ಯ ದಿನದ ಅಂಗವಾಗಿ ಮಾಜಿ ಶಾಸಕ ಸೋಮಶೇಖರ್, ನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ಮೈಸೂರಿನ ದೇವರ ಮಕ್ಕಳ ಶಾಲೆಯಲ್ಲಿ (ಕಿವುಡು ಮೂಗರ ಶಾಲೆ) ಅನ್ನಸಂತರ್ಪಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಪ್ರಶಾಂತ್ ಆರ್ಯ, ಸ್ಮರಣ್, ನಾಗೇಶ್, ವಸಂತ್, ನಾಸೀರ್, ಸಾಗರ್, ಪುನೀತ್, ಸುಹಾಸ್, ಪವನ್, ಇತರರು ಹಾಜರಿದ್ದರು.

ಬೂತ್ ಗೆದ್ದಲ್ಲಿ ಮಾತ್ರ ಅಭ್ಯರ್ಥಿ ಗೆಲ್ಲಲು ಸಾಧ್ಯ: ಹೇಮಂತ್‌ಕುಮಾರ್ ಗೌಡ

ಮೈಸೂರು, ಜ.13– ಬೂತ್‌ನಲ್ಲಿ ಜನರ ಮನ ಗೆದ್ದರೆ, ಅಲ್ಲಿ ಅಭ್ಯರ್ಥಿಯೂ ಗೆಲ್ಲಲು ಸಾಧ್ಯ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಶ್ರೀರಾಂಪುರ ಮಹಾಶಕ್ತಿ ಕೇಂದ್ರದ ಹಂಚ್ಯಾ ಸಾತಗಳ್ಳಿ ಮಾನಸಿ ನಗರದ ಬಡಾವಣೆಯಲ್ಲಿ ಬೂತ್ ವಿಜಯ ಅಭಿಯಾನದಲ್ಲಿ, ಬೂತ್ ಅಧ್ಯಕ್ಷರ ಮನೆಯ ಮೇಲೆ ಬಿಜೆಪಿ ಧ್ವಜವನ್ನು ಕಟ್ಟಿ ಮಾತನಾಡಿದ ಅವರು"ಬೂತ್ ಮಟ್ಟದಲ್ಲಿ ಗೆದ್ದಲ್ಲಿ ಮಾತ್ರ ಕ್ಷೇತ್ರ ಮಟ್ಟದಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಲು ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಬೂತ್‌ಗಳನ್ನು ಸದೃಢಗೊಳಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಹೇಳಿದರು. 2018ರ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿನ ಭರವಸೆಗಳಲ್ಲಿ ಬಹುತೇಕ ಪಕ್ಷ ಈಡೇರಿಸಿದೆ. ಇದನ್ನು ಮತದಾರರಿಗೆ ಮುಟ್ಟಿಸುವ ಕೆಲಸದ ಜತೆಗೆ ಮತ್ತೊಮ್ಮೆ ನಮ್ಮ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಎಂದು ಮನವಿ ಮಾಡಬೇಕಿದೆ ಬೂತ್‌ಗಳನ್ನು ಹೆಚ್ಚು ಸಕ್ರಿಯಗೊಳಿಸಿದಲ್ಲಿ ಸುಲಭವಾಗಿ ಗೆಲ್ಲಲು ಸಾಧ್ಯವಾಗಲಿದೆ ಎಂದರು.



ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾಡನಹಳ್ಳಿ ಸುರೇಶ, ಮಾಜಿ ಜಿಲ್ಲಾ ಅಧ್ಯಕ್ಷ ಮಹೇಂದ್ರ, ಮಾಜಿ ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಗೊರೂರು ಶಿವು, ತಾಲೂಕು ಯುವಮೋರ್ಚಾ ಅಧ್ಯಕ್ಷ ಚೇತನ್, ಗೊರೂರು ನಂಜುಂಡಸ್ವಾಮಿ, ಮುಖಂಡರಾದ ಹಂಚ್ಯಾ ರವಿಕುಮಾರ್, ಸಾತಗಳ್ಳಿ ರವಿ, ಲಕ್ಷ್ಮನಾರಾಯಣ ಆಚಾರ್, ಬೂತ್ ಅಧ್ಯಕ್ಷರುಗಳಾದ ಪಿ. ಚಂದ್ರಶೇಖರ್, ಎಂ. ಹರೀಶ್, ಸಂಜು, ನಾಗರಾಜು, ಡೈರಿ ರಾಜಪ್ಪ, ಯಜಮಾನ್ ಮಹದೇವಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು

ಕಬ್ಬು ಕಟಾವು ನೆನೆಗುದಿಗೆ: ನಷ್ಟದ ಆತಂಕದಲ್ಲಿ ರೈತರು

ಮೈಸೂರು,ಜ.13(ಎಂಟಿವೈ)– ಬೆಳೆದು ನಿಂತಿರುವ ಕಬ್ಬನ್ನು 22 ತಿಂಗಳಾದರೂ ಕಟಾವು ಮಾಡಲು ಮುಂದಾಗದ ಕಾರಣ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ಕಬ್ಬು ಬೆಳೆಗಾರರ ಹೋರಾಟ ಹಿತರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಬ್ಯಾತಹಳ್ಳಿ ಮಾದಪ್ಪ ವಿಷಾದಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 22 ತಿಂಗಳಾದರೂ ಸಕ್ಕರೆ ಕಾರ್ಖಾನೆಗಳವರು ಕಬ್ಬು ಕಟಾವಿಗೆ ಬರುತ್ತಿಲ್ಲ. ಇದರಿಂದಾಗಿ ರೈತರಿಗೆ ಇಳುವರಿ ನಷ್ಟವಾಗುತ್ತಿದೆ. ಜೊತೆಗೆ ಕೃಷಿ ಇಲಾಖೆ ಅಧಿಕಾರಿಗಳು ನಿರ್ಲಕ್ಷಿಸುತ್ತಿದ್ದಾರೆ. ಸಕಾಲಕ್ಕೆ ಕಬ್ಬು ಕಟಾವು ಮಾಡದ ಕಾರಣ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇದೇ ವೇಳೆ ರೈತರ ಸೇವೆ ಮಾಡಬೇಕಾದ ಅಧಿಕಾರಿಗಳು ಸಹಾ ರೈತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಈ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕೆಂಡಗಣ್ಣಸ್ವಾಮಿ ಧನಗಳ್ಳಿ, ವೆಂಕಟೇಶ್ ಪ್ರಸಾದ್, ಗಣೇಶ್ ಪ್ರಸಾದ್ ಇದ್ದರು.

ಶಾಲೆಗೆ ಶೇ.100 ಫಲಿತಾಂಶ ಬಂದರೆ ಸಾಲದು ಪ್ರತಿ ವಿದ್ಯಾರ್ಥಿ ಅಷ್ಟು ಅಂಕ ಗಳಿಸಬೇಕು

ಪರಿಶಿಷ್ಟ ವರ್ಗಗಳ ಸಮಾಜ ಕಲ್ಯಾಣಾಧಿಕಾರಿ ಮುನಿರಾಜು ಕಿವಿಮಾತು

ಮೈಸೂರು,ಜ.13(ಎಂಟಿವೈ)– ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ಕೊಡುಗೆಯಾಗಿ ನೀಡಿರುವ ಸಂವಿಧಾನವನ್ನೇ ಬೆಳಕಾಗಿ ಮಾಡಿಕೊಂಡು ಮಾನವೀಯ ಮೌಲ್ಯ ಅಳವಡಿಸಿಕೊಂಡು ಆದರ್ಶ ಶಿಕ್ಷಕರಾಗಬೇಕೆಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎನ್.ಮುನಿರಾಜು ಸಲಹೆ ನೀಡಿದ್ದಾರೆ.



ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಡಾ.ಬಾಬು ಜಗಜೀವನರಾಂ ಭವನದಲ್ಲಿ ಕರ್ನಾಟಕ ರಾಜ್ಯ(ಕ್ರೈಸ್) ಪ್ರಾಂಶುಪಾಲರ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಗಿಡಗಳನ್ನು ದತ್ತು ನೀಡಿ ಉತ್ತಮ ಪರಿಸರ ನಿರ್ಮಾಣಕ್ಕೆ ಶಿಕ್ಷಕರು ಮುಂದಾಗಬೇಕು. ಶಾಲೆಯಲ್ಲಿನ ಸಮಸ್ಯೆಯನ್ನು ಆರಂಭದಲ್ಲೇ ಬಗೆಹರಿಸಬೇಕು. ಸಣ್ಣಪುಟ್ಟ ಸಮಸ್ಯೆಯನ್ನು ಬೀದಿಗೆಳೆದು ಶಾಲೆಯ ಹೆಸರನ್ನು ಹಾಳು ಮಾಡುವುದಕ್ಕೆ ಯಾರೂ ಬಯಸಬಾರದು. ಶಾಲೆ ಆವರಣದಲ್ಲಿ ರಾಜಕಾರಣ ಮಾಡುವುದಕ್ಕೆ ಬಯಸಬೇಡಿ. ಭಾರತದಲ್ಲಿ ಸಂವಿಧಾನ ಇರುವುದರಿಂದ ನಾವೆಲ್ಲಾ ನೆಮ್ಮದಿಯಿಂದ ಇದ್ದೇವೆ. ಶಾಲೆಗೆ ನೂರರಷ್ಟು ಫಲಿತಾಂಶ ಬಂದರೆ ಸಾಲದು ಪ್ರತಿ ವಿದ್ಯಾರ್ಥಿಯು ಶೇ.100ರಷ್ಟು ಅಂಕ ಪಡೆಯುವಂತೆ ರೂಪಿಸಬೇಕು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಿ.ಆರ್. ಮಹೇಶ್ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳ ಅಂಕಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುವುದನ್ನು ಬಿಟ್ಟು ಮೌಲ್ಯಧಾರಿತ ಗುಣಮಟ್ಟದ ಶಿಕ್ಷಣವನ್ನು ನೀಡುವುದರ ಜೊತೆಗೆ ಸಂಕುಚಿತ ಮನೋಭಾವನೆ ಬಿಟ್ಟು ವಿಶಾಲ ಮನೋಭಾವದಿಂದ ಕೆಲಸ ಮಾಡಬೇಕು ಎಂದರು.

ಸಮಾಜಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಬಿ. ಮಾಲತಿ ಮಾತನಾಡಿ, ಗುರುವಿಗೆ ಪುರಾತನ ಕಾಲದಿಂದಲೂ ಗೌರವಯುತವಾದ ಸ್ಥಾನವಿದ್ದು, ಐಎಎಸ್, ಕೆಎಎಸ್ ಅಧಿಕಾರಿಗಳಾಗಿದ್ದರೂ ಅವರ ಹಿಂದೆ ಒಬ್ಬ ಗುರುವಿನ ಪರಿಶ್ರಮವಿರುತ್ತದೆ. ಆದ್ದರಿಂದ ಶಿಕ್ಷಕರು ಮಕ್ಕಳೊಂದಿಗೆ ಹೃದಯ ಸಂವಾದ ಕಾರ್ಯಕ್ರಮ ನಡೆಸಬೇಕು. ವಸತಿ ಶಾಲೆಗಳ ಮಕ್ಕಳು ಕರ್ನಾಟಕ ರಾಜ್ಯವೇ ಹಿಂತಿರುಗಿ ನೋಡುವಂತೆ ಸಾಧನೆ ಮಾಡಬೇಕು ಎಂದರು.

ಸಮಾರಂಭದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಪೋಷಕರು, ಭಡ್ತಿ ಪಡೆದ ಶಿಕ್ಷಕರು ಉತ್ತಮ ಅಂಕ ಬರಲು ಕಾರಣರಾದ ವಿಷಯ ತಜ್ಞ ಶಿಕ್ಷಕರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ವಸತಿ ಶಾಲೆಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ ರಂಗನಾಥ್, ಗೌರವ ಅಧ್ಯಕ್ಷೆ ವಸಂತ, ಜಿಲ್ಲಾ ಸಮನ್ವಯ ಅಧಿಕಾರಿ ಹೇಮಂತ್‌ಕುಮಾರ್, ಪರಶುರಾಂ, ಜಿಲ್ಲೆಯ ವಸತಿ ಶಾಲೆಯ ಪ್ರಾಂಶುಪಾಲರು, ಶಿಕ್ಷಕರು ಹಾಜರಿದ್ದರು. ನಂದಿನಿ ಸ್ವಾಗತಿಸಿದರು. ಶಿಲ್ಪ ಪ್ರಾರ್ಥಿಸಿದರು. ಪ್ರಸಾದ್ ನಿರೂಪಿಸಿದರು. ಸ್ವಾಮಿ ವಂದಿಸಿದರು.

ಮೈಸೂರಲ್ಲಿ ನಾಳೆ ಸಿದ್ದೇಶ್ವರ ಸ್ವಾಮಿಗಳಿಗೆ ನುಡಿನಮನ

ವಿವಿಧ ಸಂಘ ಸಂಸ್ಥೆಗಳಿಂದ ಕಾರ್ಯಕ್ರಮ ಆಯೋಜನೆ

ಮೈಸೂರು,ಜ.13(ಎಂಟಿವೈ)– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಕಾಲೇಜು ಸಭಾಂಗಣದಲ್ಲಿ ಜ. 15 ರ ಬೆಳಗ್ಗೆ 11ಕ್ಕೆ ಇತ್ತೀಚೆಗೆ ಲಿಂಗೈಕ್ಯರಾದ ಸಿದ್ದೇಶ್ವರ ಸ್ವಾಮಿಗಳಿಗೆ ನುಡಿ ನಮನ ಸಲ್ಲಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಶೈವ– ಲಿಂಗಾಯತ ಸಂಘ ಸಂಸ್ಥೆಗಳು, ಹೆಚ್.ವಿ. ರಾಜೀವ್ ಸ್ನೇಹ ಬಳಗ,




ಪತಂಜಲಿ ಯೋಗ ಶಿಕ್ಷಣ ಸಂಸ್ಥೆ, ಶ್ರೀ ಸಿದ್ದೇಶ್ವರ ಸ್ವಾಮಿಗಳ ಭಕ್ತವೃಂಧ ಸೇರಿದಂತೆ ಇನ್ನಿತರ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಸಿದ್ದೇಶ್ವರ ಸ್ವಾಮಿಗಳಿಗೆ ನುಡಿ ನಮನ ಸಲ್ಲಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರಿನ ಜನರೊಂದಿಗೆ ಅವಿನಾಭಾವ ಸಂಬಂಧವನ್ನು ಸಿದ್ದೇಶ್ವರ ಸ್ವಾಮೀಜಿ ಹೊಂದಿದ್ದರು. ಅವರು ಅಪರೂಪದಲ್ಲಿ ಅಪರೂಪದ ಸಂತರಾಗಿದ್ದಾರೆ. ಇವರ ಪ್ರವಚನ ಇದೆಯೆಂದರೆ ಜನಪ್ರವಾಹವೇ ಹರಿದು ಬರುತ್ತಿತ್ತು. ಮೈಸೂರಿನ ಜನತೆ ಪರವಾಗಿ ನುಡಿನಮನ ಸಲ್ಲಿಸಲಾಗುತ್ತಿದೆ ಎಂದರು.

ಶ್ರೀಗಳು ತಮ್ಮ ಪ್ರವಚನದಲ್ಲಿ ಸಮಯ ಪಾಲನೆಯೊಡನೆ ಜೀವನದಲ್ಲಿ ಪ್ರಯೋಜನಕಾರಿಯಾಗುವ ವಿಷಯಗಳ ಮೂಲಕ ಬೋಧಿಸುತ್ತಿದ್ದರು. ಅಲ್ಲದೆ ಅವರು ಮರೆಯಾಗಿದ್ದರೂ ಅವರ ವಿಚಾರ ಹಸಿರಾಗಿದ್ದು, ಅವರಿಗೆ ನುಡಿ ನಮನ ಸಲ್ಲಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಜ.15ರಂದು ಬೆಳಗ್ಗೆ 11ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ನಡೆಯುವ ನುಡಿನಮನ ಕಾರ್ಯಕ್ರಮದಲ್ಲಿ ವಿಜಯಪುರದ ಶ್ರೀ ಜ್ಞಾನಯೋಗಾಶ್ರಮದ ಮುಖ್ಯಸ್ಥರಾದ ಶ್ರೀ ಬಸವಲಿಂಗಸ್ವಾಮಿ ಪಾಲ್ಗೊಳ್ಳಲಿದ್ದಾರೆ. ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಬೆಳಗಾವಿಯ ಶಿವಾನಂದ ಮಠದ ಮಲ್ಲಯ್ಯ ಸ್ವಾಮಿ, ಸಾಹಿತಿ ಕೆ.ಸಿ.ಶಿವಪ್ಪ, ನಿಜಗುಣ, ಸತ್ಸಂಗ ಬಳಗದ ಸದಸ್ಯ ಸಿ.ಪಿ.ರಾಮಶೇಷ್ ನುಡಿ ನಮನ ಸಲ್ಲಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಿದ್ದೇಶ್ವರ ಸ್ವಾಮೀಜಿ ಭಕ್ತ ವೃಂಧದ ನಂದೀಶ್, ಗಿರೀಶ್, ಕಿರಣ್, ವಿಠ್ಠಲ್‌ರಾಜು ಇದ್ದರು.

ಮಳಲವಾಡಿ ನ್ಯಾಯಾಲಯ ಸಂಕೀರ್ಣದಲ್ಲಿ ಕಾನೂನು ನೆರವು ಅಭಿರಕ್ಷಕರ ಕಚೇರಿ ಆರಂಭ



ಮೈಸೂರು, ಜ.13(ಆರ್‌ಕೆ)–ಮೈಸೂರಿನ ಜಯನಗರದಲ್ಲಿರುವ ಮಳಲವಾಡಿ ನ್ಯಾಯಾಲಯಗಳ ಸಂಕೀರ್ಣದಲ್ಲಿ ಕಕ್ಷಿದಾರರಿಗೆ ಉಚಿತ ಕಾನೂನು ನೆರವು ಅಭಿರಕ್ಷಕರ ಕಚೇರಿಯನ್ನು, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಎಂ.ಎಲ್.ರಘುನಾಥ ಇಂದು ಉದ್ಘಾಟಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಆರಂಭಿಸಿರುವ ನೂತನ ಕಚೇರಿಯಲ್ಲಿ ವಾರ್ಷಿಕ 3 ಲಕ್ಷ ರೂ. ಆದಾಯವಿರುವ ಕಕ್ಷಿದಾರರಿಗೆ ಉಚಿತವಾಗಿ ವಕೀಲರು ವಾದ ಮಂಡಿಸಿ ಕಾನೂನು ನೆರವು ನೀಡಲಾಗುವುದು. ಅಂಗವಿಕಲರು, ಬಡವರು, ದೀನ–ದಲಿತರು, ನಿಸರ್ಗ ವಿಪತ್ತಿಗೊಳಗಾದವರು, ದೌರ್ಜನ್ಯಕ್ಕೊಳಗಾದವರೂ ಸಹ ಅಭಿರಕ್ಷಕರ ಕಚೇರಿ ಸೇವೆಯನ್ನು ಪಡೆದುಕೊಳ್ಳಬಹುದಾಗಿದೆ.

ಎಂ.ಎಸ್.ನವೀನ್ ನೇತೃತ್ವದಲ್ಲಿ ಕಚೇರಿಗೆ ಐವರು ವಕೀಲರನ್ನು ನೇಮಿಸಲಾಗಿದ್ದು, ಅವರು ಕಚೇರಿ ಹೊರತುಪಡಿಸಿ ಖಾಸಗಿಯಾಗಿ ವಕೀಲಿ ವೃತ್ತಿ ಮಾಡುವಂತಿಲ್ಲ. ಅಸಮರ್ಥರ ಪರವಾಗಿ ಅವರು ನ್ಯಾಯಾಲಯಗಳಲ್ಲಿ ವಾದ ಮಂಡಿಸಲಿದ್ದು, ಇದರಿಂದ ಕಡಿಮೆ ಆದಾಯವಿರುವವರಿಗೆ ಅನುಕೂಲವಾಗಲಿದೆ ಎಂದು ಎಂ.ಎಲ್.ರಘುನಾಥ್ ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಜಂಟಿ ಕಾರ್ಯದರ್ಶಿ ಪಿ.ಎಸ್.ನಾಗೇಶ್ ಹಾಗೂ ಇತರರು ಕಚೇರಿ ಉದ್ಘಾಟನೆ ವೇಳೆ ಉಪಸ್ಥಿತರಿದ್ದರು.

ಫೆ.11ರಂದು ರಾಷ್ಟ್ರೀಯ ಲೋಕ ಅದಾಲತ್

ಮೈಸೂರು ಜಿಲ್ಲೆಯ 16,549 ಪ್ರಕರಣಗಳ ಇತ್ಯರ್ಥಕ್ಕೆ ಕ್ರಮ



ಮೈಸೂರು, ಜ.13(ಆರ್‌ಕೆ)–ಫೆಬ್ರವರಿ 11ರಂದು ರಾಜ್ಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಂ.ಎನ್.ರಘುನಾಥ್ ತಿಳಿಸಿದ್ದಾರೆ.

ಮೈಸೂರಿನ ಮಳಲವಾಡಿಯಲ್ಲಿರುವ ನ್ಯಾಯಾಲಯದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ರಾಜಿಯಾಗಬಹುದಾದ ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲು ರಾಷ್ಟ್ರೀಯ ಲೋಕ ಅದಾಲತ್ ಅನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ ತಾಲೂಕು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುವ 1,12,113 ಪ್ರಕರಣಗಳ ಪೈಕಿ 59,507 ಸಿವಿಲ್ ಹಾಗೂ 61,606 ಕ್ರಿಮಿನಲ್ ಪ್ರಕರಣಗಳಾಗಿವೆ. ಅವುಗಳಲ್ಲಿ 16,549 ರಾಜೀ ಸಂಧಾನದ ಮೂಲಕ ಇತ್ಯರ್ಥ ಮಾಡಬಹುದೆಂದು ಗುರುತಿಸಲಾಗಿದೆ. 3,949 ಅಪಘಾತ, 2,306 ರಾಜಿಯಾಗಬಹುದಾದ ಕ್ರಿಮಿನಲ್ ಪ್ರಕರಣ, 4,413 ಚೆಕ್ ಬೌನ್ಸ್ ಹಾಗೂ 222 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಅದಾಲತ್‌ನಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ರಾಜೀ ಸಂಧಾನದ ಮೂಲಕ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥಪಡಿಸಿ ಕೊಳ್ಳಬಯಸುವವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಂಬಂಧಪಟ್ಟ ನ್ಯಾಯಾಲಯಗಳು, ತಾಲೂಕು ಕಾನೂನು ಸೇವಾ ಸಮಿತಿಗಳಿಗೆ ಅರ್ಜಿ ಸಲ್ಲಿಸಿದಲ್ಲಿ, ಅಂತಹ ಪ್ರಕರಣಗಳನ್ನು ಅದಾಲತ್‌ನಲ್ಲಿ ವಿಚಾರಣೆ ನಡೆಸಲಾಗುವುದು ಎಂದು ನ್ಯಾಯಾಧೀಶರು ತಿಳಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವ ಸ್ವಾಮಿ ಹಾಗೂ ಕಾರ್ಯದರ್ಶಿ ಉಮೇಶ್ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ತೆರಿಗೆ ವಂಚನೆ, ಕಪ್ಪುಹಣ ಸಂಗ್ರಹ ಆರೋಪ

ಮೈಸೂರಿನ ವಿವಿ ಮೊಹಲ್ಲಾ ಉದ್ಯಮಿ ಮನೆ ಮೇಲೆ ಐಟಿ ಅಧಿಕಾರಿಗಳ ದಾಳಿ

ಮೈಸೂರು, ಜ.13(ಆರ್‌ಕೆ)– ಆದಾಯ ತೆರಿಗೆ ವಂಚನೆ, ಅಪಾರ ಆಸ್ತಿ, ಕಪ್ಪುಹಣ ಹೊಂದಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಐಟಿ ಅಧಿಕಾರಿಗಳು ಮೈಸೂರಿನ ವಿವಿ ಮೊಹಲ್ಲಾದ ಕಾಳಿದಾಸ ರಸ್ತೆಗೆ ಹೊಂದಿಕೊಂಡಂತಿರುವ ಉದ್ಯಮಿಯೊಬ್ಬರ ಮನೆ ಮೇಲೆ ದಾಳಿ ನಡೆಸಿ ಶೋಧ ಕಾರ್ಯ ನಡೆಸುತ್ತಿದ್ದಾರೆ. ಅಲ್ಲಿನ ಅಪಾರ್ಟ್‌ಮೆಂಟ್‌ವೊಂದರ ಫ್ಲಾಟ್‌ನಲ್ಲಿ ವಾಸವಾಗಿರುವ ಉದ್ಯಮಿವೊಂದರ ಮಾಲೀಕ ಮತ್ತು ಪತ್ನಿ ಆದಾಯ ತೆರಿಗೆ ಪಾವತಿಸದೇ ಅನಧಿಕೃತವಾಗಿ ಆಸ್ತಿ ಸಂಪಾದಿಸಿದ್ದಾರೆ. ಕಪ್ಪು ಹಣ ಹೊಂದಿದ್ದಾರೆಂಬ ಮಾಹಿತಿ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆಯಿಂದಲೇ ಅವರ ಮನೆ ಮೇಲೆ ದಾಳಿ ನಡೆಸಿದ ಐಟಿ ಅಧಿಕಾರಿಗಳು, ಅಪಾರ ಪ್ರಮಾಣದ ಆಸ್ತಿ–ಪಾಸ್ತಿ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಕಾರ್ಯಾಚರಣೆ ವೇಳೆ ಕಪ್ಪು ಹಣದ ಬಗ್ಗೆ ಸುಳಿವು ಸಿಕ್ಕಿಲ್ಲವಾದರೂ, ಚಿನ್ನ, ಬೆಳ್ಳಿ ಆಭರಣ, ಬ್ಯಾಂಕ್ ಪಾಸ್ ಪುಸ್ತಕಗಳು, ಆಸ್ತಿಗಳ ದಾಖಲೆ ಪತ್ರಗಳು ಪತ್ತೆಯಾಗಿದ್ದು, ಶೋಧಕಾರ್ಯ ಮುಂದುವರೆದಿದೆ. ಉದ್ಯಮಿಯು ಕೆಲ ರಾಜಕಾರಣಿಗಳೊಂದಿಗೆ ಗುರ್ತಿಸಿಕೊಂಡು ರಿಯಲ್ ಎಸ್ಟೇಟ್, ಹಣಕಾಸು ವ್ಯವಹಾರ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಪಾರ್ಟ್‌ಮೆಂಟ್ ಬಳಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಐಟಿ ಅಧಿಕಾರಿಗಳ ಶೋಧಕಾರ್ಯಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಉದ್ಯಮಿಯ ಉದ್ಯಮ, ಅವರೊಂದಿಗೆ ಪಾಲುದಾರಿಕೆಯಲ್ಲಿ ಭಾಗಿಯಾಗಿರುವವರನ್ನು ವಿಚಾರಣೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ. ಆದರೆ ದಾಳಿ ಕುರಿತಂತೆ ಅಧಿಕಾರಿಗಳು ಯಾವುದೇ ಮಾಹಿತಿ ಬಹಿರಂಗಪಡಿಸಿಲ್ಲ.

ಬಹುನಿರೀಕ್ಷಿತ ಮೈಸೂರಿನ ಪೆರಿಫೆರಲ್ ರಸ್ತೆಗೆ ಡಿಪಿಆರ್ ಸಿದ್ಧಪಡಿಸಲು ಸರ್ಕಾರ ಅಸ್ತು

ಮೈಸೂರು, ಜ.13(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮೂಲಕ ನಿರ್ಮಿಸಲು ಉದ್ದೇಶಿಸಿರುವ ಮಹತ್ವಾಕಾಂಕ್ಷಿ ಪೆರಿಫೆರಲ್ ರಸ್ತೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಸರ್ಕಾರ ಅನುಮತಿ ನೀಡಿದೆ.

ಮೈಸೂರು ನಗರದ ಹೊರ ಪರಿಧಿ ರಸ್ತೆ ನಿರ್ಮಾಣ ಕಾಮಗಾರಿಯ ಕಾರ್ಯಸಾಧ್ಯತಾ ವರದಿ ತಯಾರಿಸುವ ಸಲುವಾಗಿ ಸಮಾಲೋಚಕರನ್ನು ನೇಮಿಸಲು ಮುಡಾಗೆ ನಗರಾಭಿವೃದ್ಧಿ ಇಲಾಖೆಯು ಅನುಮೋದನೆ ನೀಡಿದ್ದು, ಈ ಬಗ್ಗೆ 2022ರ ಡಿಸೆಂಬರ್ 16ರಂದು ಆದೇಶ ಹೊರಡಿಸಿದೆ.

ಕೆಟಿಪಿಪಿ ನಿಯಮ 28ಡಿ ಲೀಸ್ಟ್ ಕಾಸ್ಟ್ ಸೆಲೆಕ್ಷನ್ (ಎಲ್‌ಸಿಎಸ್) ಅನ್ವಯ ಕೆಸಿ–8 ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಬಳಸಿಕೊಂಡು ರಿಕ್ವೆಸ್ಟ್ ಫಾರ್ ಪ್ರಪೋಸಲ್‌ನ ಟೆಂಡರ್ ಕರೆಯಲು ಸರ್ಕಾರ ಅನುಮೋದನೆ ನೀಡಿದ್ದು, ಡಿಪಿಆರ್ ತಯಾರಿಸಲು ಪ್ರಾಧಿಕಾರವು ಸ್ವಂತ ಸಂಪನ್ಮೂಲದಲ್ಲೇ ಭರಿಸುವಂತೆಯೂ ಸೂಚಿಸಿದೆ.

ಅತೀ ಶೀಘ್ರ ಟೆಂಡರ್: ಮುಡಾ ಆಯುಕ್ತ ದಿನೇಶ್ ಕುಮಾರ್



ಟೆಂಡರ್ ಪ್ರಕಟಣೆಯಲ್ಲಿ ಯೋಜನೆ ವಿವರ ಮತ್ತು ಅವಶ್ಯವಿರುವ ಸೇವಾ ವಿವರಗಳನ್ನು (ಸ್ಕೋಪ್ ಆಫ್ ವರ್ಕ್ಸ್) ಹಾಗೂ ವರದಿ ತಯಾರಿಕೆ ಅವಧಿಯನ್ನು ಮಾತ್ರ ನಮೂದಿಸುವುದು. ಅನುಷ್ಠಾನ ಪ್ರಾಧಿಕಾರವು 'ಭಾರತ ಮಾಲ ಹಂತ–2' ಅಥವಾ ತತ್ಸಮಾನ ಯೋಜನೆಯಲ್ಲಿ ಸೇರಿಸುವ ಬಗ್ಗೆ ಮುಡಾ ನಿರ್ಣಯ ಕೈಗೊಳ್ಳಬೇಕು ಎಂದು ಸರ್ಕಾರ ಸೂಚನೆ ನೀಡಿದೆ.

ಮೈಸೂರು ನಗರವು ವಾಣಿಜ್ಯ ಕ್ಲಸ್ಟರ್‌ಗಳ ಮೂಲಕ ಕೈಗಾರಿಕಾ ಅಭಿವೃದ್ಧಿ ಹೊಂದಲಿದ್ದು, ಇದು ಸಮಗ್ರ ಅಭಿವೃದ್ಧಿಗೆ ಅನುಕೂಲವಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿರುವುದರಿಂದ ಮೈಸೂರು ನಗರಕ್ಕೆ ಪೆರಿಫೆರಲ್ ರಸ್ತೆ ನಿರ್ಮಾಣ ಅವಶ್ಯಕವಾಗಿದೆ ಎಂದು ಮುಡಾ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

ರಸ್ತೆ ನಿರ್ಮಾಣಕ್ಕೆ 824 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಿದೆ. ಅದಕ್ಕಾಗಿ 1236 ಕೋಟಿ ರೂ. ಹಾಗೂ ರಸ್ತೆ ನಿರ್ಮಾಣ ಕಾಮಗಾರಿಗೆ 735 ಕೋಟಿ ರೂ. ಸೇರಿ ಒಟ್ಟು 1971 ಕೋಟಿ ರೂ. ಅಂದಾಜು ವೆಚ್ಚವಾಗಲಿದೆ. ಯೋಜನಾ ವೆಚ್ಚದ ಶೇ.0.50 ರಷ್ಟು ವೆಚ್ಚದಲ್ಲಿ ಡಿಪಿಆರ್ ತಯಾರಿಸಲು ಸುಮಾರು 9.85 ಕೋಟಿ ರೂ. ಅಗತ್ಯವಿದೆ ಎಂದು ಪರಿಗಣಿಸಲಾಗಿದೆ.

ಪೆರಿಫೆರಲ್ ರಸ್ತೆಗೆ ಅವಶ್ಯವಿರುವ ಸೇವಾ ವಿವರಗಳು, ಬೈಪಾಸ್, ತಿರುವಿರುವ ಪ್ರದೇಶಗಳಲ್ಲಿ ನೇರ ರಸ್ತೆಗೆ ಅನುವು ಮಾಡಿ, ಗ್ರಾಮಗಳ ಮಧ್ಯೆ ಹಾದು ಹೋಗುವುದನ್ನು ತಪ್ಪಿಸಿ ಹೊರವಲಯಕ್ಕೆ ಸ್ಥಳಾಂತರಿಸುವುದು, ನದಿ, ಅರಣ್ಯ ಪ್ರದೇಶಗಳು ಎದುರಾದರೆ ನಿಸರ್ಗಕ್ಕೆ ಧಕ್ಕೆಯಾಗದಂತೆ ಬಯಲು ಪ್ರದೇಶದಲ್ಲಿ ಪೆರಿಫೆರಲ್ ರಸ್ತೆಗೆ ವಿನ್ಯಾಸ ರೂಪಿಸಬೇಕೆಂಬ ಷರತ್ತಿಗೊಳಪಟ್ಟು ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗುವುದು ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ನಗರ ಶರವೇಗದಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದು, ವಿವಿಧ ರಾಜ್ಯವೂ ಸೇರಿದಂತೆ ನಮ್ಮದೇ ಮಹಾ ನಗರಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ವ್ಯಾಪಕ ರೀತಿ ಖಾಸಗಿ ಬಡಾವಣೆಗಳು ಅಭಿವೃದ್ಧಿಗೊಳ್ಳುತ್ತಿರುವ ಕಾರಣ, ಜನಸಂಖ್ಯೆಗೆ ಅನುಗುಣವಾಗಿ ವಾಹನ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇರುವುದರಿಂದ ಪ್ರಸ್ತುತ ಇರುವ ರಿಂಗ್ ರಸ್ತೆಯ ವಾಹನ ದಟ್ಟಣೆ ತಗ್ಗಿಸಲು ಪರ್ಯಾಯವಾಗಿ ಮತ್ತೊಂದು ಫೆರಿಫೆರಲ್ ರಿಂಗ್ ರಸ್ತೆ ಅಗತ್ಯವಿದೆ ಎಂದು ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ತಿಳಿಸಿದರು.

ಈಗಾಗಲೇ ಸರ್ಕಾರ ಅನುಮತಿ ನೀಡಿರುವುದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಯೋಜನೆಯ ನಿರ್ದೇಶಕ ಶ್ರೀಧರ್ ಅವರಿಂದ ಅಗತ್ಯ ಸಲಹೆ ಪಡೆದು ಸದ್ಯದಲ್ಲೇ ಡಿಪಿಆರ್ ಸಿದ್ಧಪಡಿಸಲು ಟೆಂಡರ್ ಕರೆಯುತ್ತೇವೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದ ದೇವಿಕೆರೆ ರಸ್ತೆಗೆ ಗೇಟ್ ಹಾಕಿ, ಬೀಗ ಜಡಿದ ಮೈಸೂರು ರಾಜವಂಶಸ್ಥರು!

ರಸ್ತೆ ಬಂದಾಗಿದ್ದರಿಂದ ಬೆಟ್ಟದ ಗ್ರಾಮಸ್ಥರು ಕಂಗಾಲು



ಮೈಸೂರು,ಜ.13(ಎಂಟಿವೈ)– ಚಾಮುಂಡಿ ಬೆಟ್ಟದ ದೇವಿಕೆರೆ ಪುನರ್‌ಜೀವನ ಕಾರ್ಯದಿಂದಾಗಿ ಚಾಮುಂಡಿಬೆಟ್ಟದ ಗ್ರಾಮ ಸ್ಥರಿಗೆ ಸಂಕಷ್ಟ ಎದುರಾಗಿದೆ. ನಮ್ಮನ್ನು ಹೇಳದೇ ಕೇಳದೇ ದೇವಿಕೆರೆ ಅಭಿವೃದ್ಧಿಗೆ ಕೈಹಾಕಿದ್ದಕ್ಕಾಗಿ ಮುನಿಸಿಕೊಂಡಿರುವ ಮೈಸೂರು ರಾಜವಂಶಸ್ಥರು, ಈಗ ದೇವಿಕೆರೆ ಪುನರ್ ಜೀವನ ಕಾರ್ಯಕ್ಕೆ ತಡೆಯೊಡ್ಡಿದ್ದಲ್ಲದೆ ಕೆರೆಯ ರಸ್ತೆಗೆ ಗೇಟ್ ಹಾಕಿ, ಬೀಗ ಜಡಿದಿದ್ದು, ಯಾರೂ ಆ ರಸ್ತೆಯಲ್ಲಿ ಸಂಚರಿಸದಂತೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಬೆಟ್ಟದ ಮೇಲಿನ ಚಿದಂಬರೇಶ್ವರ ದೇವಾಲಯದ ಪಕ್ಕದಿಂದ ದೇವಿಕೆರೆಗೆ ಹೋಗುವ ರಸ್ತೆಗೆ ಗೇಟ್ ಅಳವಡಿಸಿ ಬೀಗ ಜಡಿಯಲಾಗಿದ್ದು, ಅತಿಕ್ರಮ ಪ್ರವೇಶ ನಿಷಿದ್ಧ ಎಂದು ಫಲಕ ಹಾಕುವುದರೊಂದಿಗೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದರಿಂದ ಬೆಟ್ಟದ ನಿವಾಸಿಗಳು ಕಂಗಾಲಾಗಿದ್ದು, ನಿವಾಸಿಗಳ ಸಂಚಾರಕ್ಕಾದರೂ ಅವಕಾಶ ಮಾಡಿಕೊಡುವಂತೆ ರಾಜವಂಶಸ್ಥರಲ್ಲಿ ಮನವಿ ಮಾಡಿದ್ದಾರೆ.

ಗ್ರಾಮಸ್ಥರ ಪರವಾಗಿ ರಾಜವಂಶಸ್ಥರ ಭೇಟಿ

ಮೈಸೂರು ರಾಜವಂಶಸ್ಥರ ಮೇಲೆ ಬೆಟ್ಟದ ನಿವಾಸಿಗಳಿಗೆ ಅಪಾರವಾದ ಗೌರವವಿದೆ. ಪ್ರತಿ ದಿನವೂ ಅವರನ್ನು ಸ್ಮರಿಸುವ ಜನ ಬೆಟ್ಟದಲ್ಲಿದ್ದಾರೆ. ಅವರ ಭಾವನೆಗಳಿಗೆ ಬೆಟ್ಟದ ನಿವಾಸಿಗಳು ಎಂದಿಗೂ ಧಕ್ಕೆ ತರುವುದಿಲ್ಲ. ದೇವಿಕೆರೆ ರಸ್ತೆಯನ್ನು ಬೆಟ್ಟದ ನಿವಾಸಿಗಳು ಅವಲಂಭಿಸಿದ್ದಾರೆ. ಪ್ರತಿನಿತ್ಯ ದೇವಿಕೆರೆ ರಸ್ತೆಯಲ್ಲಿ ಓಡಾಡುತ್ತಿದ್ದು, ಗ್ರಾಮಸ್ಥರ ಹಿತದೃಷ್ಟಿಯಿಂದ ಈ ರಸ್ತೆಯಲ್ಲಿ ಓಡಾಡಲು ಅನುಮತಿ ನೀಡಬೇಕೆಂದು ಕೋರುತ್ತೇವೆ. ಅನಾರೋಗ್ಯ ಸೇರಿದಂತೆ ತುರ್ತು ಸಂದರ್ಭದಲ್ಲಿ, ಶಾಲಾ ವಾಹನಗಳು ಇದೇ ರಸ್ತೆಯನ್ನು ಅವಲಂಭಿಸಿವೆ. ದೇವಿಕೆರೆ ರಸ್ತೆಯಲ್ಲಿ ಸಂಚರಿಸಲು ಅವಕಾಶ ನೀಡಬೇಕೆಂದು ರಾಜವಂಶಸ್ಥರ ಕೋರಲು ನಿರ್ಧರಿಸಿದ್ದೇವೆ. ಭೇಟಿ ಮಾಡುತ್ತೇವೆ.

-ಭರತ್ ಕಾಳಯ್ಯ, ಅಧ್ಯಕ್ಷ, ಚಾಮುಂಡಿಬೆಟ್ಟ ಗ್ರಾ.ಪಂ

ಚಾಮುಂಡಿಬೆಟ್ಟದ ದೇವಿಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶ ನಮಗೆ ಸೇರಿದ್ದು ಎಂದು ರಾಜವಂಶಸ್ಥರು ಪ್ರತಿಪಾದಿಸುತ್ತಿದ್ದು, ಸಣ್ಣ ನೀರಾವರಿ ಇಲಾಖೆ ವತಿಯಿಂದ ನಡೆಯುತ್ತಿದ್ದ ದೇವಿಕೆರೆ ಅಭಿವೃದ್ಧಿ ಕಾರ್ಯಕ್ಕೂ ತಡೆಯೊಡ್ಡಲಾಗಿದೆ. ಅನುಮತಿ ಪಡೆಯದೇ ಕೆರೆ ಅಭಿವೃದ್ಧಿ ಮಾಡುತ್ತಿರುವುದಕ್ಕೆ ಅಸಮಾಧಾನಗೊಂಡಿರುವ ರಾಜವಂಶಸ್ಥರು, ಕೆರೆ ಹೂಳೆತ್ತುವ ಕಾಮಗಾರಿ ಸ್ಥಗಿತಗೊಳಿಸುವಂತೆ ಸೂಚನೆ ನೀಡಿದ್ದರು.

ಚಾಮುಂಡಿಬೆಟ್ಟದ ಮುಖ್ಯ ರಸ್ತೆಯಲ್ಲಿ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದ ದ್ವಾರದ ಬಳಿ ಇರುವ ಚಿದಂಬರೇಶ್ವರ ದೇವಾಲಯದ ಬದಿಯಲ್ಲಿ ದೇವಿಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ರಾಜಮನೆತನದವರಿಂದ ಗೇಟ್ ಹಾಕಿ, ಬೀಗ ಜಡಿಯಲಾಗಿದೆ ವಕೀಲರೊಂದಿಗೆ ಆಗಮಿಸಿದ ಕೆಲ ಸಿಬ್ಬಂದಿ ದೇವಿಕೆರೆ ರಸ್ತೆಗೆ ಗೇಟ್ ಹಾಕಿ ಬೀಗ ಅಳವಡಿಸಿ ತೆರಳಿದ್ದರು. ಆದರೆ, ಈ ಮಾಹಿತಿ ಇಲ್ಲದ ಬೆಟ್ಟದ ನಿವಾಸಿಗಳು ಈ ಬೀಗ ಒಡೆದು, ಗೇಟ್ ತೆರೆದಿದ್ದಾರೆ. ಇದರಿಂದ ಸಿಟ್ಟಿಗೆದ್ದ ರಾಜಮನೆತನದವರು ಮತ್ತೊಮ್ಮೆ ದೇವಿಕೆರೆ ರಸ್ತೆಗೆ ಅಡ್ಡಲಾಗಿ ಗೇಟ್ ಅಳವಡಿಸಿ, ಬೀಗ ಜಡಿದಿದ್ದಾರೆ. ಅಲ್ಲದೆ, ಅತಿಕ್ರಮ ಪ್ರವೇಶ ನಿಷಿದ್ಧ ಎಂದು ಫಲಕ ಹಾಕಿ, ಭದ್ರತಾ ಸಿಬ್ಬಂದಿಯನ್ನೂ ನಿಯೋಜಿಸಿದ್ದಾರೆ. ಇದರಿಂದ ಬೆಟ್ಟದ ಮೇಲಿನ ಒಂದು ಬೀದಿಯ ಜನರು ಪರದಾಡುವಂತಾಗಿದೆ.

ದೇವಿಕೆರೆ ಸಮೀಪದ ಬೀದಿಯ ನಿವಾಸಿಗಳು ತಮ್ಮ ಕಾರು, ಆಟೋರಿಕ್ಷಾವನ್ನು ದೇವಿಕೆರೆ ರಸ್ತೆ ಮೂಲಕವೇ ತೆಗೆದುಕೊಂಡು ಹೋಗಬೇಕಾಗಿದ್ದು, ಬೇರೆ ದಾರಿಯೇ ಇಲ್ಲ. ಚಾಮುಂಡೇಶ್ವರಿ ದೇವಾಲಯದ ಮುಂಭಾಗ ದಿಂದ ದೇವಿಕೆರೆಗೆ ಮೆಟ್ಟಿಲು ಮಾರ್ಗವಿದ್ದು, ಅಲ್ಲಿ ವಾಹನಗಳನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಹಾಗಾಗಿ ಆ ಭಾಗದ ಜನರ ಸಂಚಾರಕ್ಕೆ ಅಡಚಣೆಯುಂಟಾಗಿದ್ದು, ಮತ್ತೊಮ್ಮೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿ ಮಾಡಲು ಬೆಟ್ಟದ ನಿವಾಸಿಗಳು ನಿರ್ಧರಿಸಿದ್ದಾರೆ.

ಸುತ್ತೂರು ಜಾತ್ರೆಯಲ್ಲಿ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ

ಜ.22ರಂದು ಉದ್ಘಾಟನೆ, ಗೆದ್ದವರಿಗೆ 'ಸುತ್ತೂರು ಕುಮಾರ', 'ಸುತ್ತೂರು ಕೇಸರಿ' ಪ್ರಶಸ್ತಿ

ಮೈಸೂರು, ಜ.13(ಎಸ್‌ಪಿಎನ್)–ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ 41ನೇ ರಾಷ್ಟ್ರಮಟ್ಟದ 60 ಜೋಡಿ ನಾಡಕುಸ್ತಿ ಹಾಗೂ 2 ಮಾರ್ಫಿಟ್ ಕುಸ್ತಿಯನ್ನು ಸುತ್ತೂರು ಕ್ಷೇತ್ರದಲ್ಲಿ ಜ.22 ರಂದು ಮಧ್ಯಾಹ್ನ 2 ಗಂಟೆಗೆ ಆಯೋಜಿಸಲಾಗಿದೆ. ಮಾರ್ಫಿಟ್ ಕುಸ್ತಿಯಲ್ಲಿ ಗೆದ್ದವರಿಗೆ 'ಸುತ್ತೂರು ಕುಮಾರ' ಹಾಗೂ ಸುತ್ತೂರು ಕೇಸರಿ' ಪ್ರಶಸ್ತಿಯನ್ನು ನೀಡಲಾಗುವುದು.



ಕಳೆದೆರಡು ವರ್ಷಗಳಿಂದ ಕೊರೊನಾ ಕಾರಣಗಳಿಂದ ಸುತ್ತೂರು ಜಾತ್ರಾ ಮಹೋತ್ಸವನ್ನು ಸರಳವಾಗಿ ಆಚರಿಸಲಾಗಿತ್ತು. ಈ ವರ್ಷ ಅದ್ಧೂರಿ ಜಾತ್ರಾ ಮಹೋತ್ಸವ ಆಯೋಜಿಸಿರುವುದರಿಂದ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ ಜೊತೆಗೆ ಜಾನಪದ, ದೇಶಿ ಕ್ರೀಡೆಗಳು, ನಾಟಕ ಸೇರಿದಂತೆ ಪ್ರತಿಯೊಂದು ಕ್ಷೇತ್ರಕ್ಕೂ ಆದ್ಯತೆ ನೀಡಲಾಗುತ್ತಿದೆ. ನಮ್ಮ ಹಿರಿಯ ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಕಾಲದಿಂದಲೂ ಕುಸ್ತಿಗೆ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಆಗ ಕುಸ್ತಿಗೆ ಅಖಾಡ ಇರುತ್ತಿರಲಿಲ್ಲ. ಈಗ ಕುಸ್ತಿ ಅಖಾಡ ರೆಡಿ ಮಾಡಲಾಗಿದೆ. ಎರಡು ಮಾರ್ಫಿಟ್ ಕುಸ್ತಿ, 60 ನಾಡ ಕುಸ್ತಿ ಜೋಡಿಗಳು ಕುಸ್ತಿ ಅಖಾಡದಲ್ಲಿ ತಮ್ಮ ಸಾಮರ್ಥ್ಯ ತೋರಲಿದ್ದಾರೆ.

- ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠ

ಕುಸ್ತಿ ಸಮಿತಿಯ ಡಿ.ರವಿಕುಮಾರ್ ಅವರು ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಟ್ಟದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಹರಿಯಾಣ ಮಲ್ಲನ್‌ಪುರ್ ಅಖಾಡದ ಪೈ. ಬಂಟಿ ಅವರ ವಿರುದ್ಧ ಎರಡು ಬಾರಿ ಕರ್ನಾಟಕ ಕೇಸರಿ ಪ್ರಶಸ್ತಿ ಪಡೆದ ಬೆಳಗಾಂನ ಪೈ.ನಾಗರಾಜು ಸೆಣಸಾಟ ನಡೆಸಲಿದ್ದಾರೆ. ಈ ಕುಸ್ತಿಯಲ್ಲಿ ಗೆದ್ದವರು 'ಸುತ್ತೂರು ಕೇಸರಿ' ಪ್ರಶಸ್ತಿ ಹಾಗೂ ರಮ್ಮನಹಳ್ಳಿ ಪೈ.ರವಿ ಅವರ ವಿರುದ್ಧ ಶ್ರೀರಂಗಪಟ್ಟಣದ ಪೈ.ಮಂಜು ಉರುಫ್ ಟಗರು ಜೋಡಿ ಸೆಣಸಾಟದಲ್ಲಿ ಗೆದ್ದವರಿಗೆ 'ಸುತ್ತೂರು ಕುಮಾರ' ಪ್ರಶಸ್ತಿ ನೀಡಲಾಗುವುದು. ಅಲ್ಲದೆ, ಮಹದೇವಪುರದ ಪೈ.ವಿಕಾಸ್ ವಿರುದ್ಧ ಬೆಳಗಾಂನ ಪೈ. ಮುಬಾರಕ್, ಭೂತಪ್ಪನವರ ಗರಡಿಯ ಪೈ.ದಿಕ್ಷೀತ್ ವಿರುದ್ಧ ಬೆಳಗಾಂನ ಪೈ.ಅಜಯ್ ಸೆಣಸಾಟ ನಡೆಸಲಿದ್ದಾರೆ ಎಂದರು.

ನಾಡ ಕುಸ್ತಿಯಲ್ಲಿ ಕೆ.ಜಿ.ಕೊಪ್ಪಲಿನ ಪೈ.ಕಿರಣ್ ವಿರುದ್ಧ ಕನಕಪುರ ಪೈ.ಮಧುಸೂದನ್, ಗಂಜಾಂನ ಪೈ.ತೇಜಸ್ ವಿರುದ್ಧ ಮೈಸೂರು ಸೋಮಾನಿ ಕಾಲೇಜು ಪೈ.ಸುಹಾಸ್, ಗಂಜಾಂನ ಪೈ.ರವಿಚಂದ್ರ ವಿರುದ್ಧ ಬೆಂಗಳೂರು ಆಡಗೋಡಿಯ ಪೈ.ಸೂರಜ್, ಪಡುವಾರಹಳ್ಳಿಯ ಪೈ ಚಂದ್ರು ವಿರುದ್ಧ ಗಂಜಾಂನ ಪೈ.ಮಂಜು ಕೆಂಚ, ಮೈಸೂರಿನ ಪೈ.ಹೈದರಾಲಿ ವಿರುದ್ಧ ಗಂಜಾಂ ಪೈ.ವಿಜಯ್ ಸಾಂಪ್ರಟ್, ಪಾಲಹಳ್ಳಿಯ ಪೈ.ಜೀವನ್ ವಿರುದ್ಧ ಭೂತಪ್ಪನ ಗರಡಿಯ ಪೈ.ಯಶವಂತ್, ನಂಜನಗೂಡಿನ ಪೈ ಸೂರ್ಯ ಕಾಂತ್ ವಿರುದ್ಧ ಕುಂಬಾರ ಕೊಪ್ಪಲಿನ ಪೈ.ಮನೋಜ್ ಸೇರಿದಂತೆ ಒಟ್ಟು 60 ಜೋಡಿ ಕುಸ್ತಿಪಟುಗಳು ಸೆಣಸಾಟ ನಡೆಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಮೈಸೂರು ದಸರಾ ಬಿಟ್ಟರೆ, ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ ನಡೆಯುತ್ತಿರುವುದು ಸುತ್ತೂರು ಜಾತ್ರಾ ಮಹೋತ್ಸವದಲ್ಲಿ. ಹಾಗಾಗಿ ಕುಸ್ತಿ ಪಂದ್ಯಾವಳಿಗೆ ಅವಕಾಶಗಳೇ ಕಡಿಮೆ ಇರುವ ಸಮಯದಲ್ಲಿ ದೇಶಿ ಕ್ರೀಡೆಯಾದ ಕುಸ್ತಿಗೆ ಅವಕಾಶ ಮಾಡಿಕೊಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಸುತ್ತೂರು ಜಾತ್ರಾ ಮಹೋತ್ಸವ ಕುಸ್ತಿ ಸಮಿತಿಯ ಸಂಚಾಲಕ ಪೈ.ಮಲ್ಲುಸ್ವಾಮಿ ಗಂಜಾಂ, ಪೈ.ಸುರೇಶ್, ಚೋಟಾ ರಫೀಕ್, ನಂಜುಂಡಸ್ವಾಮಿ, ಬನ್ನೂರು ರವಿ, ಸಿದ್ದರಾಜು ಉಪಸ್ಥಿತರಿದ್ದರು.

ಸೋಮವಾರದಿಂದ ಮೈಸೂರು–ಬೆಂಗಳೂರು ನಡುವೆ ಎಲೆಕ್ಟ್ರಿಕ್ ಬಸ್ ಸಂಚಾರ ಆರಂಭ

ಇಂದು ಪ್ರಯೋಗಾರ್ಥ ಸಂಚಾರ ಸಾಧ್ಯತೆ

ಮೈಸೂರು, ಜ.13(ಆರ್‌ಕೆ)– ಮೈಸೂರು–ಬೆಂಗಳೂರು ನಡುವೆ ಎಲೆಕ್ಟ್ರಿಕ್ ಬಸ್ ಸಂಚಾರ ಸೇವೆಯು ಜನವರಿ 16 ರಿಂದ ಆರಂಭವಾಗಲಿದೆ.

ಇದೇ ಪ್ರಥಮ ಬಾರಿ ಎರಡೂ ನಗರಗಳ ನಡುವೆ ಎಲೆಕ್ಟ್ರಿಕ್ ಬಸ್ ಸಂಚಾರ ಸೇವೆಯನ್ನು ಸೋಮವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಸಿರು ನಿಶಾನೆ ತೋರಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ)ದ ಮೂಲಗಳು ತಿಳಿಸಿವೆ.



ನಾಳೆ (ಜ.14) ಎಲೆಕ್ಟ್ರಿಕ್ ಬಸ್ ಪ್ರಯೋಗಾರ್ಥ ಸಂಚಾರ. ಅದಕ್ಕಾಗಿ ಮೈಸೂರು ಸಬರ್ಬನ್ ಬಸ್ ನಿಲ್ದಾಣದಲ್ಲಿ ಎಲೆಕ್ಟ್ರಿಕ್ ಚಾರ್ಜಿಂಗ್ ಘಟಕ ಸ್ಥಾಪಿಸಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರಯೋಗಾರ್ಥ ಸಂಚಾರ ಯಶಸ್ವಿಯಾದಲ್ಲಿ ಮೈಸೂರು–ಬೆಂಗಳೂರು ಅಲ್ಲದೇ ಮಡಿಕೇರಿ, ಮಂಗಳೂರು, ಚಿಕ್ಕಮಗಳೂರು, ಹಾಸನ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಿಗೂ ಬಸ್ ಸಂಚಾರ ಸೇವೆಯನ್ನು ವಿಸ್ತರಿಸಲಾಗುವುದು. ಅದಕ್ಕಾಗಿ ಆಯಾಯ ಜಿಲ್ಲಾ ಕೇಂದ್ರಗಳ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಒಂದು ಬಾರಿ ಚಾರ್ಜ್ ಮಾಡಿದರೆ ಎಲೆಕ್ಟ್ರಿಕ್ ಬಸ್ 200 ರಿಂದ 225 ಕಿಮೀ ವರೆಗೆ ಸಂಚರಿಸುವ ಸಾಮರ್ಥ್ಯ ಹೊಂದಿದೆ ಎಂದು ಸಂಸ್ಥೆಯು ತಿಳಿಸಿದೆ.

ಅರೆಸ್ಟ್ ಆದ ಮೂರೇ ಗಂಟೆಯಲ್ಲಿ ಗುರುಪ್ರಸಾದ್‌ಗೆ ಬೇಲ್

ಬೆಂಗಳೂರು, ಜ.13– ಕನ್ನಡದ ಮಠ, ಎದ್ದೇಳು ಮಂಜುನಾಥ ಸೇರಿದಂತೆ ಹಲವು



ಚಿತ್ರಗಳನ್ನು ನಿರ್ದೇಶನ ಮಾಡಿರುವ ನಿರ್ದೇಶಕ ಗುರುಪ್ರಸಾದ್ ಅವರಿಗೆ 21ನೇ ಎಸಿಎಂಎಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಗಿರಿನಗರ ಪೊಲೀಸರು ಗುರುಪ್ರಸಾದ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ಗುರುಪ್ರಸಾದ್ ಅವರ ಜೊತೆ ಕೆಲಸ ಮಾಡಿದ್ದ ಶ್ರೀನಿವಾಸ್ ಅವರ ದೂರಿನ ಹಿನ್ನೆಲೆಯಲ್ಲಿ ಗುರುಪ್ರಸಾದ್ ವಿರುದ್ಧ ಕೇಸ್ ದಾಖಲಾಗಿತ್ತು. ಗುರುಪ್ರಸಾದ್ 2015–16 ರಲ್ಲಿ ಶ್ರೀನಿವಾಸ್ ಬಳಿ 30 ಲಕ್ಷ ರೂ. ಸಾಲ ಪಡೆದುಕೊಂಡಿದ್ದರು. ಗುರುಪ್ರಸಾದ್ ಪಡೆದಿದ್ದ ಸಾಲವನ್ನು ಮರು ಪಾವತಿಸಿರಲಿಲ್ಲ. ಗುರುಪ್ರಸಾದ್ ಶ್ರೀನಿವಾಸ್‌ಗೆ ನೀಡಿದ್ದ ಮೂರು ಚೆಕ್‌ಗಳು ಬೌನ್ಸ್ ಆಗಿದ್ದವು. ಹಾಗಾಗಿ ಶ್ರೀನಿವಾಸ್ ನ್ಯಾಯಾಲದ ಮೊರೆ ಹೋಗಿದ್ದರು. ಕೋರ್ಟ್ ಗುರುಪ್ರಸಾದ್‌ಗೆ ವಾರಂಟ್ ಜಾರಿ ಮಾಡಿತ್ತು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್‌ಗೆ ಅವಹೇಳನಾ ಆರೋಪ

ರಂಗಾಯಣ ನಿರ್ದೇಶಕರ ವಿರುದ್ಧ ಕ್ರಮಕ್ಕೆ ಕಾಂಗ್ರೆಸ್ ಆಗ್ರಹ

ಮೈಸೂರು, ಜ.13(ಜಿಎ)– ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ವಿರುದ್ಧ ಕ್ರಮ ಜರುಗಿಸುವಂತೆ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ, ಡಿಸಿಪಿ ಮುತ್ತುರಾಜ್ ಅವರಿಗೆ ಶುಕ್ರವಾರ ದೂರು ಸಲ್ಲಿಸಿತು.



ನಾಟಕದ ಮೂಲಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ರವರನ್ನು ವೈಯಕ್ತಿಕವಾಗಿ ತೇಜೋವಧೆ ಮಾಡಿ ಸಮಾಜದಲ್ಲಿ ಅಶಾಂತಿಯನ್ನು ಸೃಷ್ಟಿಸಿ, ಕೋಮುದಳ್ಳುರಿ ಎಂಬ ವಿಷಬೀಜ ಬಿತ್ತಲು ಮುಂದಾಗಿರುವ ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಹಾಗೂ ಇದಕ್ಕೆ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ರಂಗಾಯಣವು ಕಾರಂತರ ಆಶಯದಂತೆ ರಾಜ್ಯದ ಸಾಂಸ್ಕೃತಿಕ ಲೋಕದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಹಲವಾರು ಕಲಾವಿದರನ್ನು ಬೆಳಕಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಹೆಮ್ಮೆಯ ವಿಚಾರ. ರಂಗಾಯಣವು ರಾಜಕೀಯ ಹೊರತಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಪ್ರಸ್ತುತ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವಧಿಯಲ್ಲಿ ರಂಗಾಯಣ ಮೂಲ ಆಶಯದ ಚೌಕಟ್ಟಿನ ನೀತಿ ನಿಬಂಧನೆಗಳನ್ನು ಗಾಳಿಗೆ ತೂರಿ, ತನ್ನ ವೈಯಕ್ತಿಕ ಹಿತಾಸಕ್ತಿಗಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವುದು ಬೇಸರದ ಸಂಗತಿ. ಒಂದು ಪಕ್ಷದ ಕಾರ್ಯಕ್ರಮದಂತೆ ರಾಜಕೀಯ ಲೇಪಿತ ನಾಟಕಗಳನ್ನು ಪ್ರದರ್ಶನ ಮಾಡುತ್ತಿರುವುದು ಹಾಗೂ ಸಮಾಜದಲ್ಲಿ ಕೋಮುಭಾವನೆಯನ್ನು ಬಿತ್ತರಿಸುವ, ಪ್ರಚೋದಿಸುವಂತಹ ಸನ್ನಿವೇಶಗಳನ್ನು ಸೃಷ್ಟಿಸಿ ನಾಟಕ ಪ್ರದರ್ಶನ ಮಾಡುತ್ತಿರುವುದು ಸಾಂಸ್ಕೃತಿಕ ನಗರಿ ಮೈಸೂರಿಗೆ ಅವಮಾನಕರ ಸಂಗತಿಯಾಗಿದೆ.

2022ರ ಡಿ.31 ರಂದು ರಂಗಾಯಣದ ಭೂಮಿಗೀತದಲ್ಲಿ ಸಂಜೆ 7 ಗಂಟೆಗೆ ಡಾ.ಚಂದ್ರಶೇಖರ ಕಂಬಾರರು ರಚಿಸಿರುವ 'ಸಾಂಬಶಿವ ಪ್ರಹಸನ' ನಾಟಕ ಪ್ರದರ್ಶನಗೊಂಡಿತು. ಆದರೆ, ಈ ನಾಟಕವನ್ನು ದುರುದ್ದೇಶಪೂರ್ವಕವಾಗಿ ತಿರುಚಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ತೇಜೋವಧೆ ಮಾಡಿರುವುದು ಕಂಡುಬಂದಿದೆ. ಇದು ರಾಜಕೀಯ ಪ್ರೇರೇಪಿತವೇ ಹೊರತು ಮತ್ತೇನಿಲ್ಲ.

ಡಾ. ಚಂದ್ರಶೇಖರ ಕಂಬಾರರವರು, ತಮ್ಮ ನಾಟಕವನ್ನು ತಿರುಚಿರುವ ವಿಚಾರಕ್ಕೆ ಸಂಬಂಧಿಸಿದಂತೆ ಕಾರಣಕರ್ತರಾದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ವಿರುದ್ಧ ಕ್ರಮವಹಿಸುವಂತೆ ದೂರು ನೀಡಿದ್ದಾರೆ. 'ಟಿಪ್ಪು ನಿಜ ಕನಸುಗಳು' ನಾಟಕವನ್ನು ಪ್ರದರ್ಶಿಸಿ ಕೋಮು ಭಾವನೆ ಕೆರಳಿಸಿ, ಶಾಂತಿಗೆ ಭಂಗ ಉಂಟುಮಾಡುವ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಮೈಸೂರು ಹುಲಿ ಎಂದೇ ಪ್ರಖ್ಯಾತಿ ಗಳಿಸಿದ್ದ ಟಿಪ್ಪುಸುಲ್ತಾನ್‌ನನ್ನು ಉದ್ದೇಶಪೂರ್ವಕವಾಗಿ ಹಿಂದೂ ವಿರೋಧಿಯಂತೆ ಬಿಂಬಿಸಲಾಗಿದೆ ಈ ಹಿನ್ನೆಲೆಯಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಹಾಗೂ ಇತರರ ವಿರುದ್ಧ ಕಾನೂನು ರೀತ್ಯಾ ಕ್ರಮವಹಿಸಬೇಕೆಂದು ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಅಧ್ಯಕ್ಷ ಪಾಳ್ಯ ಸುರೇಶ್, ಕೆಪಿಸಿಸಿ ಕಾನೂನು ರಾಜ್ಯ ಕಾರ್ಯದರ್ಶಿ ಕವಿತಾ ಕಾಳೇ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯ್ ಕುಮಾರ್, ಕಾಂಗ್ರೆಸ್ ಮುಖಂಡ ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಸೇರಿದಂತೆ ಮತ್ತಿತರರಿದ್ದರು.

13 ಕೋಟಿ ವೆಚ್ಚದ ರಸ್ತೆ, ಚರಂಡಿ ಕಾಮಗಾರಿಗೆ ಭೂಮಿ ಪೂಜೆ

ತಿ.ನರಸೀಪುರ, ಜ.13– ಪಟ್ಟಣದ ಪುರಸಭಾ ವ್ಯಾಪ್ತಿಯ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಂ. ಅಶ್ವಿನ್ ಕುಮಾರ್ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಪಟ್ಟಣದ ಭಗವಾನ್ ಚಿತ್ರಮಂದಿರ ಎದುರು ಪುರಸಭೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 13 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು 2022–23ನೇ ಸಾಲಿನ ಅಮೃತ್ ನಗರೋತ್ಥಾನ ಯೋಜನೆಯಡಿ 3.79 ಕೋಟಿ, 2019–20ನೇ ಸಾಲಿನ ಮುಖ್ಯಮಂತ್ರಿಗಳ ವಿವೇಚನಾ ನಿಧಿಯಡಿ 3 ಕೋಟಿ, 15ನೇ ಹಣಕಾಸು ಯೋಜನೆಯಡಿ 1.82 ಕೋಟಿ, 2016–17ನೇ ಸಾಲಿನ ಎಸ್‌ಸಿಪಿ, ಟಿಎಸ್‌ಪಿ ಅನುದಾನದಡಿ 87.87 ಲಕ್ಷ ರೂ. ಹಾಗೂ 2022–23ನೇ ಸಾಲಿನ ಎಸ್‌ಎಫ್‌ಸಿ ಅನುದಾನ ಯೋಜನೆಯಡಿ 18.16 ಲಕ್ಷ ರೂ. ವೆಚ್ಚದಲ್ಲಿ ಪಟ್ಟಣದ ಅಭಿವೃದ್ಧಿಗಾಗಿ ರಸ್ತೆ, ಚರಂಡಿ ಹಾಗು ವಿದ್ಯುತ್ ದೀಪ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.



ಈ ಕಾಮಗಾರಿ 2 ವರ್ಷದ ಹಿಂದೆ ಆಗಬೇಕಿತ್ತು. ಆದರೆ ಕೊರೊನಾ ಹಿನ್ನಲೆಯಲ್ಲಿ ವಿಳಂಬವಾಯಿತು. ನಗರೋತ್ಥಾನ ಯೋಜನೆಯಡಿ ಪುರಸಭೆಗೆ ಸರ್ಕಾರ 10 ಕೋಟಿ ರೂ. ಬಿಡುಗಡೆ ಮಾಡಿದ್ದು, ಅದರಲ್ಲಿ 4 ಕೋಟಿ ರೂ.ಗಳನ್ನು ರಸ್ತೆ ಅಭಿವೃದ್ಧಿಗೆ ಬಳಸಲು ನಿಗದಿಪಡಿಸಲಾಗಿದೆ. ಈ ಹಣದಲ್ಲಿ ಭಾಗಶಃ ಪಟ್ಟಣದ ಎಲ್ಲಾ ಹದಗೆಟ್ಟ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕಿದೆ. ಹಿಂದಿನ ಅಧ್ಯಕ್ಷ ಮದನ್ ರಾಜ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಲ್ಲಾ ಸದಸ್ಯರು ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಬಿಡುಗಡೆಯಾದ ಅನುದಾನವನ್ನು ತಮ್ಮ ವಾರ್ಡ್‌ಗಳಿಗೆ ಬಳಸಿಕೊಳ್ಳದೇ ಪಟ್ಟಣದ ರಸ್ತೆ ಅಭಿವೃದ್ಧಿಗೆ ಬಳಸಲು ನಿರ್ಧಾರ ಕೈಗೊಂಡಿದ್ದ ಹಿನ್ನೆಲೆಯಲ್ಲಿ ಇಂದು ರಸ್ತೆ ನಿರ್ಮಾಣಕ್ಕೆ ಚಾಲನೆ ದೊರೆತಿದೆ ಎಂದರು.

ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಪಟ್ಟಣದ ಪ್ರಮುಖ ರಸ್ತೆಗಳು ಅಭಿವೃದ್ಧಿ ಕಾಣಬೇಕೆನ್ನುವ ದೃಷ್ಟಿಯಿಂದ ಸಾಮಾನ್ಯ ಸಭೆಯಲ್ಲಿ ಪಕ್ಷಾತೀತವಾಗಿ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದ್ದ ಹಿನ್ನೆಲೆಯಲ್ಲಿ 4ನೇ ಹಂತದ ಭೂಮಿ ಪೂಜೆಗೆ ಚಾಲನೆ ನೀಡಲಾಗಿದೆ. 3.79 ಲಕ್ಷ ರೂ. ವೆಚ್ಚದಲ್ಲಿ ಪಟ್ಟಣದ ಭಗವಾನ್ ಚಿತ್ರಮಂದಿರದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಭಗವಾನ್ ಚಿತ್ರ ಮಂದಿರದಿಂದ ಖಾಸಗಿ ಬಸ್ ನಿಲ್ದಾಣ ಹಾಗೂ ಅರಣ್ಯ ಇಲಾಖೆವರೆಗೆ ಹದಗೆಟ್ಟ ರಸ್ತೆ ಅಭಿವೃದ್ಧಿ ಪಡಿಸಲಾಗುತ್ತದೆ. ಅಲ್ಲದೇ ತಾಲೂಕು ಕಚೇರಿಯಿಂದ ರಾಷ್ಟ್ರೀಯ ಹೆದ್ದಾರಿವರೆಗಿನ ಅಪೂರ್ಣ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ. ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಶಾಸಕರ ಮಾರ್ಗದರ್ಶನದಲ್ಲಿ ಮಾಡಲಾಗುವುದು ಎಂದರು.

ಈ ವೇಳೆ ಉಪಾಧ್ಯಕ್ಷೆ ನಾಗರತ್ನ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಅಧ್ಯಕ್ಷ ಸೋಮು, ಸದಸ್ಯರಾದ ಬಾದಾಮಿ ಮಂಜು, ತುಂಬಲ ಪ್ರಕಾಶ್, ಎಸ್.ಕೆ.ಕಿರಣ್, ಆರ್.ನಾಗರಾಜ್, ಎಲ್.ಮಂಜುನಾಥ್, ಸಿಸ್ಟಮ್ ಸಿದ್ದು, ವಿ.ಮೋಹನ್, ತೇಜಸ್ವಿನಿ, ರಾಜೇಶ್ವರಿ, ನಾಮನಿರ್ದೇಶಿತ ಸದಸ್ಯರಾದ ಲೋಕೇಶ್, ನಂಜುಂಡಸ್ವಾಮಿ, ಗಣೇಶ್, ಚಿಕ್ಕ ಮಹದೇವ, ಸರ್ವಮಂಗಳ, ಮುಖ್ಯಾಧಿಕಾರಿ ಎಚ್.ಆರ್.ಬಸವರಾಜು, ಆರೋಗ್ಯಾಧಿಕಾರಿ ಲೋಕೇಶ್ವರಿ, ಕಾರ್ಯನಿರ್ವಾಹಕ ಅಭಿಯಂತರ ನಿಂಗಯ್ಯ, ಜೆಇ ಸಿದ್ದಯ್ಯ, ಸಮನ್ವಯಾಧಿಕಾರಿ ಮಹದೇವ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಮುಖಂಡರಾದ ಶಿವಮೂರ್ತಿ, ಮಾದಯ್ಯ, ಪ್ರಸಾದ್, ಭರತ್, ಮತ್ತಿತರರಿದ್ದರು.

> ಉದ್ದೇಶಿತ ಕಾಮಗಾರಿ 2 ತಿಂಗಳ ಹಿಂದೆಯೇ ನಡೆಯಬೇಕಿತ್ತು. ನಾನು ಅಧ್ಯಕ್ಷನಾಗಿದ್ದ ವೇಳೆ ಕಾಮಗಾರಿಗೆ ಸಿಂಗಲ್ ಟೆಂಡರ್ ಮಾಡಲಾಗಿತ್ತು. ಶಾಸಕ ಅಶ್ವಿನ್ ಕುಮಾರ್ ಜಿಲ್ಲಾಧಿಕಾರಿ ಹಾಗೂ ಯೋಜನಾಧಿಕಾರಿಯೊಂದಿಗೆ ಮಾತನಾಡಿ ಸಿಂಗಲ್ ಟೆಂಡರನ್ನು ರೀಟೆಂಡರ್ ಮಾಡಿಸಿಕೊಟ್ಟಿದ್ದರು. ನನ್ನ ಆಡಳಿತಾವಧಿಯಲ್ಲೇ ಅಭಿವೃದ್ಧಿ ಕಾಮಗಾರಿಗೆ 13 ಕೋಟಿ ರೂ. ಬಿಡುಗಡೆಯಾಗಿ ಅನುಮೋದನೆ ಸಹ ಸಿಕ್ಕಿತ್ತು. ಉದ್ದೇಶಿತ ಕಾಮಗಾರಿ ವರುಣಾ ಕ್ಷೇತ್ರ ವ್ಯಾಪ್ತಿಗೆ ಸೇರದಿದ್ದರೂ, ಶಾಸಕ ಯತೀಂದ್ರ ಸಿದ್ದರಾಮಯ್ಯ ಅನುದಾನ ಬಿಡುಗಡೆಯಲ್ಲಿ ತಾರತಮ್ಯ ಮಾಡಲಿಲ್ಲ. ಪಟ್ಟಣದ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ.
> **–ಮದನ್‌ರಾಜ್, ಪುರಸಭೆ ಮಾಜಿ ಅಧ್ಯಕ್ಷ.**

ಹೆಗ್ಗನೂರು ಗ್ರಾಪಂಗೆ ಸವಿತಾ ಅಧ್ಯಕ್ಷೆ



ಸರಗೂರು, ಜ.13– ತಾಲೂಕಿನ ಹೆಗ್ಗನೂರು ಗ್ರಾಪಂ ಅಧ್ಯಕ್ಷೆಯಾಗಿ ಡಿ.ಎಂ.ಸವಿತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದು, ಅಧ್ಯಕ್ಷ ಸ್ಥಾನಕ್ಕೆ ಸವಿತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಸಹಾಯಕ ಇಂಜಿನಿಯರ್ ಕೆ.ಆರ್.ಉಷಾ, ಪಿಡಿಓ ಪ್ರಕಾಶ್, ಮಹೇಶ್ ಘೋಷಿಸಿದರು.

ಚುನಾವಣೆಯಲ್ಲಿ ಒಟ್ಟು 14 ಸದಸ್ಯರ ಪೈಕಿ 8 ಮಂದಿ ಭಾಗವಹಿಸಿದ್ದರು. 6 ಮಂದಿ ಸದಸ್ಯರು ಗೈರು ಹಾಜರಾಗಿದ್ದರು. ಈ ವೇಳೆ ಉಪಾಧ್ಯಕ್ಷೆ ಮಂಜುಳಾ, ಶೋಭಾರಾಣಿ, ಪ್ರವೀಳಾ, ಮಾರಯ್ಯ, ಎಚ್.ಎನ್.ಸುಧೀರ್, ಕೆ.ಬಿ.ಮುತ್ತುರಾಜ್, ನಾಗಮ್ಮ ಚುನಾವಣೆಯಲ್ಲಿ ಭಾಗವಹಿಸಿದ್ದರು. ಗ್ರಾಮದ ಮುಖಂಡ ಲೋಕೇಶ್, ಹೆಚ್.ಬಿ.ಮಹೇಶ್, ವಸಂತಕುಮಾರ್, ಡಿ.ಎಸ್.ನಾಗೇಂದ್ರ ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಗಂಗಡಹೊಸಹಳ್ಳಿ ಗ್ರಾಮದ ಗಂಗರಳ್ಳಿ ಮಾರಮ್ಮ ತಾಯಿ ದೇವಸ್ಥಾನ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 1.5 ಲಕ್ಷ ರೂ.ಗಳ ಸಹಾಯಧನ ಡಿಡಿಯನ್ನು ವಿತರಿಸಲಾಯಿತು. ಈ ವೇಳೆ ಯೋಜನೆ ತಾಲೂಕು ಯೋಜನಾಧಿಕಾರಿ ಶಶಿಧರ್, ಹಂಪಾಪುರ ವಲಯ ಮೇಲ್ವಿಚಾರಕಿ ಪವಿತ್ರ, ದೇವಾಲಯ ಸಮಿತಿ ಅಧ್ಯಕ್ಷ ಜಿ.ವಿ.ಬಸವರಾಜ್, ತಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಆಲನಹಳ್ಳಿ ಗ್ರಾಪಂ ಸದಸ್ಯ ಗೋವಿಂದ, ಸುರೇಶ್, ಗ್ರಾಪಂ ಮಾಜಿ ಅಧ್ಯಕ್ಷ ಶ್ರೀಪುಟ್ಟಸ್ವಾಮಿ, ಮುಖಂಡರಾದ ಟಿ.ರಾಜು, ರಮೇಶ್, ಹೆಚ್.ಪಿ.ಪ್ರಕಾಶ್ ಸೇರಿದಂತೆ ಇನ್ನಿತರರಿದ್ದರು.

ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆರೋಪ

ಹುಣಸೂರು, ಜ.13– ಜನತಂತ್ರ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದ ಆತ್ಮವೇ ಚುನಾವಣೆ. ಸೇವಕನಿಂದ ಹಿಡಿದು ಪ್ರಧಾನಿವರೆಗೂ ಒಬ್ಬರಿಗೆ ಒಂದೇ ಮತದಾನ ವ್ಯವಸ್ಥೆಯ ತಳಹದಿ ಮೇಲೆ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಎಲ್ಲಾ ಇಲಾಖೆಯಲ್ಲೂ ಲಂಚ, ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆರೋಪಿಸಿದರು.

ನಗರದ ಕನಕ ಭವನದಲ್ಲಿ ನಡೆದ ಪಕ್ಷಾತೀತ, ಧರ್ಮಾತೀತ, ಜಾತ್ಯತೀತವಾಗಿ ಕರೆಯಲಾಗಿದ್ದ ಹಿತೈಷಿಗಳ ಮತ್ತು ಒಡನಾಡಿ ಅಭಿಮಾನಿಗಳ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಯಡಿಯೂರಪ್ಪ ತಮ್ಮ ಅಧಿಕಾರವಧಿಯಲ್ಲಿ ಜಿಂದಾಲ್ ಕಂಪನಿಗೆ ಎಕರೆಗೆ 1 ಲಕ್ಷದಂತೆ 3660 ಎಕರೆ ಭೂಮಿ ನೀಡಿದರು. ಇದರಿಂದ ಎಕರೆಗೆ 12 ಲಕ್ಷ ರೂ. ಕಿಕ್‌ಬ್ಯಾಕ್ ಸಿಕ್ಕರೇ, ಅಪ್ಪರ್ ಕೃಷ್ಣ ಯೋಜನೆಯಡಿ 20 ಲಕ್ಷ ಕಿಕ್‌ಬ್ಯಾಕ್, ಪೊಲೀಸ್ ಇಲಾಖೆಯ ಎಸ್‌ಐ ಆಯ್ಕೆಯಲ್ಲಿ ಕೋಟಿಗಟ್ಟಲೇ ಅವ್ಯವಹಾರ. ಇಂತಹ ಹಲವಾರು ಭ್ರಷ್ಟಾಚಾರ ಪ್ರಕರಣಗಳು ಬಿಜೆಪಿ ಸರ್ಕಾರದಲ್ಲಿ ತಾಂಡವವಾಡುತ್ತಿವೆ. ಇಲ್ಲಿ ಕೊಳ್ಳೆ ಹೊಡೆಯುವವರ, ತಲೆ ಕಡಿಯುವವರ ಹಾವಳಿ ಹೆಚ್ಚಾಗಿದ್ದು, ಜನಸಾಮಾನ್ಯರ ಕೆಲಸ ಅಸಾಧ್ಯ ಎಂದರು.



ರಾಜ್ಯಕ್ಕೆ ಸಾಮಾಜಿಕ ನ್ಯಾಯ ನೀಡಿದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಹುಟ್ಟಿದ ಈ ಮಣ್ಣಿಗೆ ವಿಶೇಷ ಗುಣವಿದ್ದು, ಅನೇಕ ಜನನಾಯಕರನ್ನು ನೀಡಿದೆ. ಈ ಮಣ್ಣಿನಲ್ಲಿರುವ ನಾನು ನನ್ನ ಉಸಿರಿರುವವರೆಗೆ ನಿಮ್ಮ ಕಷ್ಟ ಸುಖದಲ್ಲಿ ಭಾಗಿಯಾಗುತ್ತೇನೆ ಎಂದರು.

ಸಭೆಯಲ್ಲಿ ನಗರಸಭಾಧ್ಯಕ್ಷೆ ಗೀತಾ, ಸದಸ್ಯರಾದ ಸರವಣ, ಕೃಷ್ಣಾರಾಜಗುಪ್ತ, ಹೆಚ್.ಪಿ. ಸತೀಶ್, ಹರೀಶ, ಸಿ.ದೇವರಾಜು, ರಮೇಶ್, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಪ್ರಾಣೇಶ್‌ಶೆಟ್ಟಿ, ಕನಕರಾಜ್, ಎ.ಪಿ.ಸ್ವಾಮಿ, ವಾಸೇಗೌಡ, ಸುನೀತಾ, ತಾಪಂ ಮಾಜಿ ಸದಸ್ಯರಾದ ಪುಟ್ಟಮ್ಮ, ಶಿವಶೇಖರ್, ಬಸವಣ್ಣ, ಅಬ್ಬಾಸ್, ಬಸವರಾಜು, ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್, ಮಾಜಿ ಪುರಸಭಾಧ್ಯಕ್ಷ ರಮೇಶ್, ಮೀನುಗಾರಿಕೆ ಇಲಾಖೆ ನಿವೃತ್ತ ಅಧಿಕಾರಿ ಬಾಲಕೃಷ್ಣ, ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ, ಹುಡಾ ಸದಸ್ಯ ಗೋವಿಂದ, ಎಪಿಎಂಸಿ ಅಧ್ಯಕ್ಷ ಸುಹಾಸ್, ಬಸವಲಿಂಗಯ್ಯ, ಸುರೇಶ್, ಸೇರಿದಂತೆ ನೂರಾರು ಅಭಿಮಾನಿಗಳು, ಹಿತೈಶಿಗಳಿದ್ದರು.

ಹಾಡಹಗಲೇ ಮನೆಗೆ ನುಗ್ಗಿ ನಗದು, ಚಿನ್ನಾಭರಣ ಕಳವು

ನಂಜನಗೂಡು, ಜ.13– ಹಾಡಹಗಲೇ ಮನೆಗೆ ನುಗ್ಗಿರುವ ಕಳ್ಳರು ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ತಾಲೂಕಿನ ಹುಲ್ಲಹಳ್ಳಿ ಸಮೀಪದ ಕಾರ್ಯ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಬಸವರಾಜು ಎಂಬುವರ ಮನೆಯಲ್ಲೇ ಕಳ್ಳತನವಾಗಿರುವುದು. ಕಾರ್ಯ ಮ್ಯಾಗ್ನಸೈಟ್ ಗಣಿಯಲ್ಲಿ ಕಾರ್ಮಿಕರಾಗಿರುವ ಬಸವರಾಜು ಮತ್ತು ಸಿದ್ದಮ್ಮ ದಂಪತಿ ಎಂದಿನಂತೆ ಕೆಲಸಕ್ಕೆ ತೆರಳಿದ್ದ ವೇಳೆ ಮನೆಗೆ ನುಗ್ಗಿರುವ ಕಳ್ಳರು ಬೀರುವಿನಲ್ಲಿದ್ದ 50 ಗ್ರಾಂ ಮಾಂಗಲ್ಯ ಸರ, 22 ಗ್ರಾಂ ಚಿನ್ನದ ಸರ, 55 ಗ್ರಾಂ ತೂಕದ 5 ಉಂಗುರಗಳು ಹಾಗೂ 10 ಗ್ರಾಂ ತೂಕದ ಎರಡು ಕಿವಿಯೋಲೆ ಮತ್ತು 80 ಸಾವಿರ ನಗದು ಸೇರಿದಂತೆ 5.10 ಮೌಲ್ಯದ ಪದಾರ್ಥ ಕಳುವಾಗಿದೆ ಎಂದು ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಥಳಕ್ಕೆ ಎಸ್‌ಐ ಕೃಷ್ಣಕಾಂತ್ ಕೋಳಿ ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.

ಆಶ್ರಯ ಸಮಿತಿಗೆ ಗೌರವ ನೀಡದ

ಪುರಸಭೆ ಮುಖ್ಯಾಧಿಕಾರಿ ವರ್ಗಾವಣೆಗೆ ಒತ್ತಾಯ

ಸಿಇಓ ನಡೆ ಬಗ್ಗೆ ಸಿಎಂ ಗಮನಕ್ಕೆ ತಂದು ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸುವೆ: ಆಶ್ರಯ ಸಮಿತಿ ಸದಸ್ಯ ಸಿ.ರಮೇಶ್



ತಿ.ನರಸೀಪುರ, ಜ.13– ಆಶ್ರಯ ಸಮಿತಿಗೆ ಗೌರವ ನೀಡದ ಪುರಸಭೆ ಮುಖ್ಯಾಧಿಕಾರಿ ಬಸವರಾಜು ನಡೆ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರುವ ಜೊತೆಗೆ ಹೈಕೋರ್ಟ್‌ನಲ್ಲಿ ರಿಟ್ ಹಾಕಲಾಗುವುದು ಎಂದು ವಿಧಾನಪರಿಷತ್ ಮಾಜಿ ಸದಸ್ಯರೂ ಆದ, ಆಶ್ರಯ ಸಮಿತಿ ಸದಸ್ಯ ಸಿ.ರಮೇಶ್ ತಿಳಿಸಿದರು.

ಪಟ್ಟಣ ಪುರಸಭೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದಿಂದ ರಚನೆಯಾಗಿರುವ ಆಶ್ರಯ ಸಮಿತಿಗೆ ಇಲ್ಲಿನ ಮುಖ್ಯಾಧಿಕಾರಿ ಬಸವರಾಜು ಗೌರವ ನೀಡದೇ ಉಡಾಫೆಯಾಗಿ ವರ್ತಿಸುತ್ತಿದ್ದು, ಕೂಡಲೇ ಈತನನ್ನು ವರ್ಗಾವಣೆ ಮಾಡುವಂತೆ ಒತ್ತಾಯಿಸಿದರು.

ಮುಖ್ಯಾಧಿಕಾರಿ ಬಸವರಾಜು ಆಶ್ರಯ ಸಮಿತಿ ಸದಸ್ಯರಿಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಯಾವುದೇ ಪ್ರಶ್ನೆಗೂ ಶಾಸಕರನ್ನು ಕೇಳುವಂತೆ ಹೇಳುತ್ತಾರೆ. ಶಾಸಕರು ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಿಗೆ ಮಾತ್ರ ಅಧ್ಯಕ್ಷತೆ ವಹಿಸುತ್ತಾರಷ್ಟೇ, ಶಾಸಕರು ಹೇಳಿದಂತೆಯೇ ಮಾಡಬೇಕೆಂಬ ನಿಯಮ ಕಾನೂನಿನಲ್ಲಿಲ್ಲ. ಆಶ್ರಯ ಕಮಿಟಿ ಸಭೆಯಲ್ಲಿ ಮೆಜಾರಿಟಿ ಸದಸ್ಯರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದೇ ಅಂತಿಮ ಎಂಬುದು ನಿಯಮ. ಎಂಎಲ್‌ಎ ಹೇಳಿದಂತೆ ಕೇಳಬೇಕು ಎಂದು ಎಲ್ಲೂ ಇಲ್ಲ ಎಂದರು.

ಆಶ್ರಯ ಸಮಿತಿ ಸಭೆ ಕರೆದು ಶಾಸಕರು ಬಂದಿಲ್ಲ ಎಂದು ನೆಪ ಹೇಳಿ 3 ಬಾರಿ ಸಭೆ ಮುಂದೂಡಿದ್ದಾರೆ. ಇಂದೂ ಸಹ ಸಭೆ ಕರೆಯಲಾಗಿದೆ. 12 ಗಂಟೆಯಾದರೂ ಯಾರೂ ಬಂದಿಲ್ಲ. ಸಭೆ ನೋಟೀಸ್ ಸಹ ತಲುಪಿಲ್ಲ. ನೋಟೀಸ್‌ನಲ್ಲಿ ವಿಷಯ ನಮೂದಿಸುತ್ತಾರಾದರೂ, ಅದಕ್ಕೆ ಸಂಬಂಧಿಸಿದ ಟಿಪ್ಪಣಿ ಕೊಡುತ್ತಿಲ್ಲ ಎಂದು ದೂರಿದರು.

ಇಷ್ಟ ಬಂದವರಿಗೆ ನಿವೇಶನ, ಖಾತೆ: ಪುರಸಭೆ ವ್ಯಾಪ್ತಿಯಲ್ಲಿ ಯಾವುದೇ ನಿಗಮದಿಂದ ನಿವೇಶನ, ಮನೆ ನೀಡಬೇಕಾದರೆ ಆಶ್ರಯ ಕಮಿಟಿ ಮೂಲಕವೇ ಕೊಡಬೇಕೆಂಬ ನಿಯಮವಿದ್ದರೂ, ನಿಯಮ ಗಾಳಿಗೆ ತೂರಿ ಮುಖ್ಯಾಧಿಕಾರಿ ತಮಗಿಷ್ಟ ಬಂದವರಿಗೆ ಸಮಿತಿ ನಿರ್ಣಯ ಇಲ್ಲದೇ ಮನೆ, ಸೈಟ್ ಕೊಡುತ್ತಿದ್ದು ಖಾತೆ ಸಹ ಮಾಡಿಕೊಡುತ್ತಿದ್ದಾರೆ ಎಂದು ಆರೋಪಿಸಿದರು.

ಶಾಸಕರನ್ನು ದಾರಿ ತಪ್ಪಿಸುತ್ತಿರುವ ಸಿಇಓ: ಬಡವರಿಗೆ ನಿವೇಶನ ಹಂಚಿಕೆ ಮಾಡುವ ಸಂಬಂಧ ಗೋಪಾಲಪುರ ಸರ್ವೆ ನಂ.7ರ ಜಮೀನನ್ನು ಸ್ವಚ್ಛಗೊಳಿಸಿ ದಾಖಲಾತಿಗಳನ್ನು ಸರ್ಕಾರಕ್ಕೆ ಕಳುಹಿಸಿ ಪುರಸಭೆಗೆ ಜಾಗವನ್ನು ವರ್ಗಾವಣೆ ಮಾಡಿಸಿಕೊಳ್ಳುವಂತೆ ನಿರ್ಣಯ ಮಾಡಲಾಗಿತ್ತು. ಆದರೆ ಪುರಸಭೆಯಿಂದ ಒಂದೇ ಒಂದು ದಾಖಲೆ ತರಿಸಿಲ್ಲ. ಹಾಗಿದ್ದರೂ ಇಂದು ನಿವೇಶನ ಹಂಚಿ ಬಿಡೋಣ ಎಂದು ಮುಖ್ಯಾಧಿಕಾರಿ ಅಜೆಂಡಾದಲ್ಲಿ ಹಾಕಿದ್ದಾರೆ. ಶಾಸಕರಿಗೆ ವಿಷಯ ಗೊತ್ತಿಲ್ಲ. ಮುಖ್ಯಾಧಿಕಾರಿಯವರೇ ಅವರನ್ನು ದಾರಿ ತಪ್ಪಿಸುತ್ತಿದ್ದಾರೆ. ಒಟ್ಟಾರೆ ಪುರಸಭೆ ಆಶ್ರಯ ಸಮಿತಿ ಆಡಳಿತವು ಕಾನೂನುಬದ್ಧ ಆಡಳಿತಕ್ಕೆ ಒಳಪಡದೇ ಏಕವ್ಯಕ್ತಿ ಆಡಳಿತಕ್ಕೆ ಒಳಪಟ್ಟಿದ್ದು ಈ ಸಂಬಂಧ ಹೈಕೋರ್ಟ್‌ನಲ್ಲಿ ರಿಟ್ ಹಾಕಲಾಗುವುದು ಎಂದರು.

ಗೋಷ್ಠಿಯಲ್ಲಿ ಆಶ್ರಯ ಸಮಿತಿ ಸದಸ್ಯರಾದ ಸ್ಟಾರ್ ಮಲ್ಲೇಶ್, ಶೋಭಾ, ಸೈಫುಲ್ಲ ಹಾಜರಿದ್ದರು.

ಇಂದು ಜೆಡಿಎಸ್ ಸಭೆ

ಹುಣಸೂರು, ಜ.13– ನಗರದ ಜೆಡಿಎಸ್ ಕಚೇರಿಯಲ್ಲಿ ಅಧ್ಯಕ್ಷ ಸೋಮಶೇಖರ್ ಅಧ್ಯಕ್ಷತೆಯಲ್ಲಿ ಜ.14ರಂದು ಬೆಳಗ್ಗೆ 10.30ಕ್ಕೆ ಸಭೆ ನಡೆಯಲಿದೆ. ಸಭೆಗೆ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಚುನಾಯಿತ ಪ್ರತಿನಿಧಿಗಳು ಆಗಮಿಸುವಂತೆ ಪ್ರಕಟಣೆ ತಿಳಿಸಿದೆ.

ಸಮಾಜಸೇವೆ ಮಾಡುವವರನ್ನು ಬೆಂಬಲಿಸಿ

ಸಾ.ರಾ.ಸ್ನೇಹ ಬಳಗದ ಅಧ್ಯಕ್ಷ ವಿಜಯ್‌ಕುಮಾರ್



ಕೆ.ಆರ್.ನಗರ, ಜ.13– ಸಮಾಜಸೇವೆ ಮಾಡುವವರನ್ನು ರಾಜಕೀಯ ಮತ್ತು ಜಾತಿಯಿಂದ ನೋಡದೆ ಅವರು ಮಾಡುವ ಉತ್ತಮ ಕೆಲಸ ಕಾರ್ಯಗಳನ್ನು ನೋಡಿ ಬೆಂಬಲಿಸಬೇಕು ಎಂದು ಸಾ.ರಾ.ಸ್ನೇಹ ಬಳಗದ ಅಧ್ಯಕ್ಷ ವಿಜಯ್‌ಕುಮಾರ್ ತಿಳಿಸಿದರು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಸಾ.ರಾ.ಸ್ನೇಹ ಬಳಗದಿಂದ ಆಯೋಜಿಸಿದ್ದ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸಂಕುಚಿತ ಮನೋಭಾವನೆಯಿಂದ ಹೊರಬಂದು ಅಭಿವೃದ್ಧಿ ಮನೋಭಾವ ಬೆಳೆಸಿಕೊಂಡು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕು ಎಂದು ಸಲಹೆ ನೀಡಿದರು. ಕ್ಷೇತ್ರದಲ್ಲಿ ಶಾಸಕ ಸಾ.ರಾ.ಮಹೇಶ್, ಸಾ.ರಾ.ಸ್ನೇಹ ಬಳಗದ ಮೂಲಕ ಕಳೆದ 18 ವರ್ಷಗಳಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್‌ಬುಕ್, ಉಚಿತ ಆಂಬುಲೆನ್ಸ್, ವಿಕಲಚೇತನ ಮಕ್ಕಳಿಗೆ ಉಚಿತ ವಿಮೆ, ಬಡವರಿಗೆ ಆರ್ಥಿಕ ಸಹಾಯ ಸೇರಿದಂತೆ ಹತ್ತಾರು ವೈಯಕ್ತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಮಹಿಳಾ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ ಸೇರಿದಂತೆ ನೂರಾರು ಕೋಟಿ ಅನುದಾನ ತಂದು ಅನೇಕ ಶಾಲಾ–ಕಾಲೇಜು ಕಟ್ಟಡ, ಕೋರ್ಸ್‌ಗಳನ್ನು ತೆರೆಯುವ ಮೂಲಕ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಬೇರೆಕಡೆ ಅಲೆದಾಡುವುದನ್ನು ತಪ್ಪಿಸಿ ಶೈಕ್ಷಣಿಕ ಕಾಂತ್ರಿ ಮಾಡಿದ್ದಾರೆ. ಅವರ ಈ ಸಾಮಾಜಿಕ ಸೇವಾ ಕೆಲಸವನ್ನು ನೀವುಗಳು ಅಳವಡಿಸಿಕೊಂಡು ಉನ್ನತ ಸ್ಥಾನಕ್ಕೆ ಹೋದಾಗ ಇತರರಿಗೆ ಸಹಾಯ ಮಾಡಿ ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲ ಡಾ.ಬಿ.ಟಿ.ವಿಜಯ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯೆ ಶೋಭಾ ವೃಷಿಕೇಶ್ ಮಾತನಾಡಿದರು. ವೇದಿಕೆಯಲ್ಲಿ ಮುಖಂಡ ಸಾ.ರಾ. ಜಯಂತ್, ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ಕೆ.ಟಿ.ರಮೇಶ್, ಸದಸ್ಯೆ ರೂಪಾ, ಪುರಸಭಾ ಸದಸ್ಯರಾದ ಕೆ.ಎಲ್. ಜಗದೀಶ್, ಸಂತೋಷ್‌ಗೌಡ, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಸಾ.ರಾ.ಸ್ನೇಹ ಬಳಗದ ಕಾರ್ಯದರ್ಶಿ ಸಿ.ಜೆ.ಆನಂದ್, ಸದಸ್ಯರಾದ ಮಹೇಶ್, ಮುಖಂಡರಾದ ಜಗದೀಶ್, ಮಹದೇವ್, ನವಾಜ್, ಕೆ.ಎಸ್.ನಾಗೇಶ್, ಕಾಲೇಜು ಸಹಾಯಕ ಪ್ರಾಧ್ಯಾಪಕರಾದ ವಿಜಯ್, ಸಿ.ಆರ್.ಸುನೀಲ್, ಡಾ.ಶ್ರುತಿ ಸೇರಿದಂತೆ ನೂರಾರು ವಿದ್ಯಾರ್ಥಿನಿಯರು ಹಾಜರಿದ್ದರು.

ಲ್ಯಾಬ್, ರೋಗಿಗಳ ನಿರೀಕ್ಷಣಾ ಕೊಠಡಿಗೆ ಭೂಮಿ ಪೂಜೆ

ಹೆಚ್.ಡಿ.ಕೋಟೆ, ಜ.13– ಮರಣೋತ್ತರ ಪರೀಕ್ಷೆ ಸೇರಿದಂತೆ ಎಲ್ಲಾ ರೀತಿಯ ಪರೀಕ್ಷೆಗಳಿಗೆ ಮೈಸೂರಿಗೆ ತೆರಳಬೇಕಾಗಿತ್ತು. ಇದೀಗ ಸ್ಥಳೀಯವಾಗಿ ಲ್ಯಾಬ್ ನಿರ್ಮಾಣವಾಗುವುದರಿಂದ ಎಲ್ಲಾ ರೀತಿಯ ಪರೀಕ್ಷೆಗಳನ್ನು ನಡೆಸಿ, ಶೀಘ್ರ ವರದಿ ಪಡೆಯುವುದರಿಂದ ಸಮಸ್ಯೆ ಬೇಗ ಇತ್ಯರ್ಥವಾಗಲಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯಪಟ್ಟರು.



ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ 30 ಲಕ್ಷ ವೆಚ್ಚದ ಸಿರಾಲಾಜಿ ಲ್ಯಾಬ್ (ಸೂಕ್ಷ್ಮಾಣುಜೀವಿ ಪರೀಕ್ಷಾಲಯ) ಹಾಗೂ 13 ಲಕ್ಷ ವೆಚ್ಚದ ರೋಗಿಗಳ ನಿರೀಕ್ಷಣಾ ಕೊಠಡಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮೈಸೂರು ಬಿಟ್ಟರೇ ಪ್ರಥಮ ಬಾರಿಗೆ ತಾಲೂಕಿನಲ್ಲಿ ಲ್ಯಾಬ್ ನಿರ್ಮಾಣವಾಗುತ್ತಿದೆ. ಕಾಡಂಚಿನಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಆಗುತ್ತಿದ್ದ ಅನಾಹುತದಿಂದ ಗಾಯಗೊಂಡ ರೋಗಿಗಳ ಪರೀಕ್ಷೆಗೆ ಮೈಸೂರಿನ ಲ್ಯಾಬ್‌ಗಳಿಗೆ ತೆರಳಬೇಕಿತ್ತು ಇದೀಗ ಪಟ್ಟಣದ ಆಸ್ಪತ್ರೆಆವರಣದಲ್ಲಿ ಸಿರಾಲಾಜಿ ಲ್ಯಾಬ್ ನಿರ್ಮಾಣವಾಗುತ್ತಿರುವುದರಿಂದ ತಾಲೂಕಿನ ಬಡ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದರು.

> ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೆಚ್ಚಾಗಿ ಬಡವರೇ ಬರುವುದರಿಂದ ವೈದ್ಯರು, ಸಿಬ್ಬಂದಿ ಕೊರತೆ ಸೇರಿದಂತೆ ಆಸ್ಪತ್ರೆಗೆ ಮೂಲ ಸೌಕರ್ಯ ಕಲ್ಪಿಸಲು ಸಂಬಂಧಪಟ್ಟ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ.
> **– ಅನಿಲ್ ಚಿಕ್ಕಮಾದು, ಶಾಸಕ.**

ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸೋಮಣ್ಣ ಮಾತನಾಡಿ, ತಾಲೂಕಿನಲ್ಲಿ ಸಿರಾಲಾಜಿ ಲ್ಯಾಬ್ ಹಾಗೂ ರೋಗಿಗಳ ನಿರೀಕ್ಷಣಾ ಕೊಠಡಿ ನಿರ್ಮಾಣವಾಗುತ್ತಿರುವುದು ಸಂತಸದ ವಿಷಯ. ತಾಲೂಕಿನಲ್ಲಿ ಅತೀ ಹೆಚ್ಚು ಬಡ ಕುಟುಂಬಗಳು ವಾಸಿಸುತ್ತಿದ್ದು, ಈ ಲ್ಯಾಬ್ ನಿರ್ಮಾಣದಿಂದ ಅವರಿಗೆ ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಜಿಪಂ ಮಾಜಿ ಸದಸ್ಯ ಹೆಚ್.ಸಿ.ಮಂಜುನಾಥ್, ಪುರಸಭಾಧ್ಯಕ್ಷೆ ಅನಿತ, ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್, ಸದಸ್ಯರಾದ ದರ್ಶಿನಿ, ಹೆಚ್.ಸಿ.ನರಸಿಂಹಮೂರ್ತಿ, ಪ್ರೇಮ್ ಸಾಗರ್, ಮಧು, ಆಸಿಫ್, ಮುಖಂಡರಾದ ಸೌಮ್ಯ, ಯಶ್ವಂತ್, ಪರಶಿವಮೂರ್ತಿ, ದಿನೇಶ್, ಅಶೋಕ್, ಇಂಜಿನಿಯರ್‌ಗಳಾದ ಸುಪ್ರೀತ್, ವಿನೋದ್, ಹೇಮಂತ್ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತುನಿವು (ತ): ಬೆ.10.05ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ರಾ.10.10ಕ್ಕೆ, ವಾರಿಸು (ತ): ಸಂ.4ಕ್ಕೆ
ಸ್ಕ್ರೀನ್ 2	ತುನಿವು (ತ): ಬೆ.8ಕ್ಕೆ, ಸಂ.4.05ಕ್ಕೆ, ವೇದ (ಕ): ಮ.1.05ಕ್ಕೆ, ವಾರಿಸು (ತ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ವಾರಿಸು (ತ): ಬೆ.8.30ಕ್ಕೆ, ಮ.1.05ಕ್ಕೆ, ವೇದ (ಕ): ಸಂ.4.20ಕ್ಕೆ, ರಾ.10.20ಕ್ಕೆ, ತುನಿವು (ತ): ರಾ.7.30ಕ್ಕೆ.
ಸ್ಕ್ರೀನ್ 4	ವಾರಿಸು (ತ): ಬೆ.7.30ಕ್ಕೆ, ಬೆ.11.15ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.2.40ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಮಿಸ್ಟರ್ ಬ್ಯಾಚುಲರ್ (ಕ): ಬೆ.10.30ಕ್ಕೆ, ಸಂ.4.35ಕ್ಕೆ, ರಾ.10.20ಕ್ಕೆ, ವೇದ (ಕ): ಮ.1.25ಕ್ಕೆ, ಕಾಕ್ಟೇಲ್ (ಕ): ರಾ.7.35ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.40ಕ್ಕೆ, ಮ.2.30ಕ್ಕೆ, ಸಂ.6.20ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಸ್ಪೂಕಿ ಕಾಲೇಜ್ (ಕ): ಬೆ.10ಕ್ಕೆ, ಥಗ್ ಆಫ್ ರಾಮಘಡ (ಕ): ಮ.12.50ಕ್ಕೆ, ಮಿಸ್ ನಂದಿನಿ (ಕ): ಮ.3.25ಕ್ಕೆ, ಬೇಡಿಯಾ (ಹಿಂ): ಸಂ.6ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ರಾ.9.10ಕ್ಕೆ.
ಸ್ಕ್ರೀನ್ 4	ವೈಶಂಪಾಯನ ತೀರ (ಕ): ಬೆ.11.30ಕ್ಕೆ, ಸ್ಪೂಕಿ ಕಾಲೇಜ್ (ಕ): ಮ.1.55ಕ್ಕೆ, ರಾ.7.10ಕ್ಕೆ, ಲವ್‌ಸ್ಟೋರಿ 1998 (ಕ): ಸಂ.4.45ಕ್ಕೆ, ವೇದ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಸು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕುಟ್ಟೆ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತುನಿವು (ತ)	4 ಪ್ರದರ್ಶನಗಳು
ಗಾಯಿತ್ರಿ	
ತುನಿವು (ತ)	4 ಪ್ರದರ್ಶನಗಳು
ರಾಜ್‌ಕಮಲ್	
ತುನಿವು (ತ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವಾರಿಸು (ತ)	4 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ವಾರಿಸು (ತ)	4 ಪ್ರದರ್ಶನಗಳು
ಪ್ರಭಾ	
ಲವ್ ಸ್ಟೋರಿ (ಕ) ಕಾಕ್ಟೇಲ್ (ಕ)	2 ಪ್ರದರ್ಶನಗಳು

ಕೆ. ಸೌಭಾಗ್ಯಗೆ ಪಿಎಚ್.ಡಿ



ಮೈಸೂರು, ಜ.13– ಡಾ. ಡಿ.ವಿ. ಗೋಪಾಲಪ್ಪ ಅವರ ಮಾರ್ಗದರ್ಶನದಲ್ಲಿ ಕೆ.ಸೌಭಾಗ್ಯ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿವಿಧೆಡೆ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಹನಗೋಡು, ಜ.13– ಹನಗೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಯೋಜನೆ, ಹಾರಂಗಿ, ಹಾಗೂ ಕೆಆರ್‌ಐಡಿಎಲ್ ಇಲಾಖೆಯ 88.50 ಲಕ್ಷ ವೆಚ್ಚದ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು.


ಇಲ್ಲಿನ ಹೈರಿಗೆ ಗ್ರಾಮದಲ್ಲಿ ಆರ್‌ಡಿಪಿಆರ್ ಇಲಾಖೆಯ 33 ಲಕ್ಷ ರೂ., ಮಲೆನಾಡು ಪ್ರದೇಶ ಅಭಿವೃದ್ಧಿ ಯೋಜನೆಯ 5 ಲಕ್ಷ ರೂ., ಹಾರಂಗಿ ಇಲಾಖೆಯ 20 ಲಕ್ಷ ರೂ., ಕಲ್‌ಬೆಟ್ಟ ಗ್ರಾಮದಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಯೋಜನೆಯಡಿ 12 ಲಕ್ಷ ರೂ., ಕಲ್ಕುಡ ಗ್ರಾಮದಲ್ಲಿ 15.50 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ತಟ್ಟೆಕೆರೆ ಗ್ರಾಪಂ ಅಧ್ಯಕ್ಷ ದೇವರಾಜ್, ಉಪಾಧ್ಯಕ್ಷೆ ಮಹದೇವಮ್ಮ, ಸದಸ್ಯರಾದ ಗೋವಿಂದೇಗೌಡ, ಸಣ್ಣಮ್ಮ, ನವೀನ್‌ಕುಮಾರ್, ಚಂದ್ರು, ಸಿದ್ದಿಕ್, ರಾಜೇಗೌಡ, ಕುಮಾರ್, ಅಶೋಕ್, ಕಗ್ಗಿನಾಯಕ್ ಆನಂದ್, ರಾಜು, ರಾಘು ಸೇರಿದಂತೆ ಇತರರಿದ್ದರು.

ಮಹಮ್ಮದ್ ಬೇಗ್ ನಿಧನ



ಹುಣಸೂರು, ಜ.13– ನಗರದ ಬಜಾರ್ ರಸ್ತೆ ಜಾಮೀಯಾ ಮಸೀದಿ ಹಿಂಭಾಗದ ಮುಸ್ಲಿಂ ಬ್ಲಾಕ್ ನಿವಾಸಿ ಹಾಗೂ ಶಬ್ಬೀರ್ ನಗರದ ಶಾಹಿ ಮಸೀದಿ ಹಾಗೂ ಜೆಡಿಎಸ್ ನಗರಾಧ್ಯಕ್ಷ ಅಸದುಲ್ಲಾ ಬೇಗ್ ಅವರ ಪುತ್ರ ಮಹಮ್ಮದ್ ಬೇಗ್(35) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ನಗರದ ಶಬ್ಬೀರ್ ನಗರದ ಖಬರ್‌ಸ್ಥಾನದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ನಿಂಗಮ್ಮ

(ಕೋಡಿ ಕುಮಾರ್‌ರವರ ತಾಯಿ)

ಇವರು ದಿನಾಂಕ: 05.01.2023 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 15.01.2023ನೇ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ಬೊಮ್ಮೇನಹಳ್ಳಿ (ಕೋಡಿ) ಗ್ರಾಮ, ಇಲವಾಲ ಹೋ॥, ಮೈಸೂರು ತಾ॥ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಮಕ್ಕಳು, ಸೊಸೆಯಂದಿರು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು, ಬಂಧು-ಮಿತ್ರರು ಹಾಗೂ ಗ್ರಾಮಸ್ಥರು

Mocktails
Soup
Chaat
Chinese
North Indian
Desserts & Ice Creams

SPECIAL OCCASION VEG BUFFET BOOKING AVAILABLE

M2 Eat in Style — A VEG AFFAIR

ENJOY THE FIRST FESTIVAL OF THE YEAR @

Dining Includes A Wide Choice of A'la Carte Veg Menu Options

"HAPPY MAKAR SANKRANTI & PONGAL"

94, KRS Main Road, 2nd Floor, Gokulam, Mysuru

M2 Eat In Style, For Reservations Call: 0821 4055898

Take Away Available - Online Partners Swiggy & Zomato @m2_mysore

---

VIJAYA VITTALA VIDYASHALA

Saraswathipuram, Mysuru 570009. PH. 0821 2544707

REQUIRES

Teachers due to increase in the number of sections

Applications are invited from Experienced, Qualified, talented teachers with good English communication skills.

Positions	Qualification
Principal	Post Graduation with B.Ed (Minimum 5 years of experience as Principal)
Science Teacher	B.Sc/M.Sc with B.Ed (Physics Major)
English/Social Science Teacher	BA/M.A, with B.Ed. (English Major)
Kannada Language Teacher	BA/M.A, with B.Ed. (Kannada Major)
Lab Instructor	B.Sc (PEM)
Librarian	B.Lib/M.Lib

Salary is commensurate with experience. Apply within **25.01.2023.**

The Hon. Secretary, Vijaya Vittala Vidyashala, Saraswathipuram, Mysuru 570009 Email it to: vvvsmysore@gmail.com

Sd/- Hon. Secretary

WANTED CIVIL ENGINEER

Diploma with knowledge of Cad. Only Male Candidate

Ph: 9880029909/9341384429

20MM GRANITE

Granite Available @ Rs.40 to 50 in All Colours

9900391065

Neminath Steels

TRADEMARK FOR TRUST AND QUALITY.



Near Taluk Office, Nazarbad
+91 97420 06656



ವಧು-ವರರ ಅನ್ವೇಷಣೆ ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು-ವರರ ಅಂತರ್ಜಾಲ ತಾಣ.

http://www.hoysalakarnatakabrahmins.com

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ಸುಮ ಗೋಪಾಲಕೃಷ್ಣ, ದೂರವಾಣಿ : **9886908152**

WANTED

Civil Engineer

3 to 5 years experience in layout development and marketing. Contact:

Mob: 9686573798

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಎಲ್.ರವಿಕಿರಣ್ (ವಕೀಲರು)

ಇವರು ದಿನಾಂಕ 04.01.2023 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 14.01.2023 ಶನಿವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ #23/1, 3ನೇ ಕ್ರಾಸ್, ವಿನಾಯಕನಗರ (ಪಡುವಾರಹಳ್ಳಿ), ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ಇಂದ್ರಮ್ಮ ಶ್ರೀ ಲಿಂಗಪ್ಪ ಮತ್ತು ಕುಟುಂಬವರ್ಗದವರು, ಮೊ-9972163316

ಭೋಜನ: ಮಧ್ಯಾಹ್ನ 1.00ಗಂಟೆಗೆ

New Year & Makara Sankranti Greetings by

SINDHOOR CONVENTION & PARTY HALL	SAPTHAPADI CONVENTION HALL	KVR WEDDING BELLS
Vishweswaranagara, Mysore	Vijayanagara, 1st Stage, Mysore	Vishweswaranagara, Mysore
Contact :	Contact :	Contact :
0821-2480480, 9880237246	0821-2490490, 9611849049	8660988523, 9845115470

Venue available for:

Engagement, Wedding, Reception, Baby Shower, Naming Ceremony, Birthday, Seminars etc.,

---

ಕೆಆರ್ ನಗರ ಸಿಟಿಯಲ್ಲಿ ಸೈಟುಗಳು ಮಾರಾಟಕ್ಕಿವೆ

ಪ್ರಾರಂಭಿಕ ಬೆಲೆ : **6.60** ಲಕ್ಷಗಳಲ್ಲಿ

ಮನೆ ಕಟ್ಟುವವರಿಗೆ 101 ಮೂಟೆ ಸಿಮೆಂಟ್ ಉಚಿತ

ಸಂಪರ್ಕಿಸಿ

6360 590 915 / 98442 05017

BUILDING GHAR

Your Home - Our Responsibility

SANKRANTHI OFFER at just Rs.1990/-sqft including GST and Design charges.

- Red Bricks.
- Teak Wood Doors.
- Modular Kitchen and Wardrobes for all Rooms.
- Ultratech Cement and JSW Steel.

Contact: 99641 55522 / 95355 55921

BOOKINGS OPEN FOR

Construction of Brand New Architecture Designed Houses

MUDA APPROVED

20'x40 - 32 Lakhs
30'x40' - 46.5 Lakhs

Near St. Joseph's Central School, Hunsur Road, Mysore.

9740767576, 8884001233



